ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜುಲೈ 31 ಸೋಮವಾರ 2023

ಸಂಪುಟ: 44 | ಸಂಚಿಕೆ: 106 | ಪುಟಗಳು: 10 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com







ಮೈಸೂರಲ್ಲಿ ಮಾಜಿ ಸೈನಿಕರಿಂದ ಕಾರ್ಗಿಲ್ ವಿಜಯೋತ್ಸವ



ಮೈಸೂರಲ್ಲಿ ನಡೆದ ಕಾರ್ಗಿಲ್ ವಿಜಯೋತ್ಸವದ ಕಾರ್ಯಕ್ಕಾಗಿ ಧಾರವಾಡದಿಂದ ಆಗಮಿಸಿದ್ದ 8 ಮಂದಿ ವಿಶೇಷಚೇತನರರನ್ನು ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವ್‌ಮೆಂಟ್ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು,ಜು.30(ಎಂಟಿವೈ)– ಮೈಸೂರಲ್ಲಿ ಭಾನುವಾರ ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವ್‌ಮೆಂಟ್ ವತಿಯಿಂದ ಕಾರ್ಗಿಲ್ ವಿಜಯೋತ್ಸವ ಆಚರಿಸಿ, ಕಾರ್ಗಿಲ್ ಯುದ್ಧದಲ್ಲಿ ವೀರ ಮರಣವನ್ನಪ್ಪಿದ ಹುತಾತ್ಮ ಯೋಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರಿನ ಮೆಟ್ರೋಪೋಲ್ ವೃತ್ತದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಕಾರ್ಗಿಲ್ ಯುದ್ಧದ ವಿಜಯೋತ್ಸವ ಆಚರಿಸಿದರು. ಅಲ್ಲದೆ, ಕಾರ್ಗಿಲ್ ಯುದ್ಧದಲ್ಲಿ ವೀರ ಮರಣವನ್ನಪ್ಪಿದ ಲೆ.ಮನೋಜ್ ಕುಮಾರ್ ಪಾಂಡೆ, ಗ್ರಿನೇಡಿಯರ್ ಯೋಗೇಂದ್ರ ಸಿಂಗ್, ರೈಫಲ್‌ಮನ್ ಸಂಜಯ್ ಕುಮಾರ್, ಕ್ಯಾಪ್ಟನ್ ವಿಕ್ರಂ ಬತ್ರ ಮತ್ತು ಕ್ಯಾಪ್ಟನ್ ಸೌರಬ್ ಕಾಲಿಯ ಅವರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ ಗೌರವ ಸಮರ್ಪಿಸಿದರು. ರೀತ್ ಪೆರೆಡ್ ಗೌರವ ನೀಡಲಾಯಿತು. ನಿವೃತ್ತ ಸೇನಾಧಿಕಾರಿ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಅವರು ರೀತ್ ಗೌರವ ಸೂಚನೆಗೆ ಚಾಲನೆ ನೀಡಿದರು. ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದ ವೀಕ್ಷಣೆಗಾಗಿ ಧಾರವಾಡದಿಂದ ಮೈಸೂರಿಗೆ ಆಗಮಿಸಿದ್ದ 8 ಮಂದಿ ವಿಶೇಷಚೇತನರರನ್ನು ಮಾಜಿ ಸೈನಿಕರು ಸನ್ಮಾನಿಸಿದರು.

ಬಳಿಕ ವಿವಿಧ ಸಂಘ–ಸಂಸ್ಥೆಗಳ ಸದಸ್ಯರೊಂದಿಗೆ ಮೆಟ್ರೋಪೋಲ್ ವೃತ್ತದಿಂದ ಜೆಎಲ್‌ಬಿ ರಸ್ತೆ, ಇರ್ವಿನ್ ರಸ್ತೆ ಮೂಲಕ ಕೆ.ಆರ್.ಆಸ್ಪತ್ರೆ ತಲುಪಿದರು.

ಕಾರ್ಗಿಲ್ ವಿಜಯೋತ್ಸವ ಅಂಗವಾಗಿ ಕೆ.ಆರ್. ಆಸ್ಪತ್ರೆ ಆವರಣದಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು. ಕೆ.ಆರ್. ಆಸ್ಪತ್ರೆಯ ಡೀನ್ ಮತ್ತು ನಿರ್ದೇಶಕರಾದ ಡಾ.ದಾಕ್ಷಾಯಿಣಿ ಅವರು ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿದರು.

300ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದ ಸ್ವಚ್ಛತಾ ಅಭಿಯಾನದಲ್ಲಿ 25 ಬ್ಯಾಗ್ ತ್ಯಾಜ್ಯ ಸಂಗ್ರಹಿಸಲಾಯಿತು. ಈ ಅಭಿಯಾನದಲ್ಲಿ ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವ್‌ಮೆಂಟ್‌ನೊಂದಿಗೆ ಸೈನಿಕ ಅಕಾಡೆಮಿ ವಿದ್ಯಾರ್ಥಿಗಳು, ಅಥ್ಲೆಟಿಕ್ ಕ್ಲಬ್ ಆಫ್ ಮೈಸೂರ್, ಪಂಚಶೀಲ ರೋಟರಿ ಟೀಮ್, ಇನ್ನರ್ ವ್ಹೀಲ್ ಕ್ಲಬ್, ಸಾಮಾನ್ಯ ಸೇವಾ ಕೇಂದ್ರ, ಸಂಜಯ್ ಪ್ರತಿಷ್ಠಾನ ಚಾರಿಟೆಬಲ್ ಟ್ರಸ್ಟ್, ಸಂತೃಪ್ತಿ ಕುಟುಂಬ, ಬೆಟರ್ ಲೈಫ್ ಟ್ರಸ್ಟ್, ಸೈನಿಕ್ ರೆಸ್ಟೋರೆಂಟ್ ಹಾಗೂ ಭಾರತೀಯ ಸೈನ್ಯದ ಅಭಿಮಾನಿಗಳು ಪಾಲ್ಗೊಂಡಿದ್ದರು.

ಸ್ವಚ್ಛತಾ ಅಭಿಯಾನದ ಬಳಿಕ 1500 ಮಂದಿಗೆ ಉಪಾಹಾರದ ವ್ಯವಸ್ಥೆ ಮಾಡಲಾಯಿತು. ಕೆ.ಆರ್.ಆಸ್ಪತ್ರೆಯ ಆವರಣದಲ್ಲಿ ಸಾರ್ವಜನಿಕರು, ರೋಗಿಗಳ ಸಂಬಂಧಿಕರಿಗೆ ರೈಸ್ ಬಾತ್, ಕೇಸರಿ ಬಾತ್, ದೂದ್ ಪೇಡ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಎಕ್ಸ್ ಸರ್ವಿಸ್ ಮೆನ್ ಮೂವ್‌ಮೆಂಟ್ ಸಂಸ್ಥಾಪಕ ಮಹೇಶ್. ವಿ, ಅಧ್ಯಕ್ಷ ಪ್ರಿನ್ಸ್ ಅಂತೋಣಿ, ಉಪಾಧ್ಯಕ್ಷ ವಿವೇಕಾನಂದ, ಪ್ರಧಾನ ಕಾರ್ಯದರ್ಶಿ ಶ್ರೀಧರ್, ನಿರ್ದೇಶಕರಾದ ಕಿಶೋರ್ ಕದಂ, ವಿಶ್ವನಾಥ್, ಮಿಥುನ್, ಶಶಿಕಿರಣ್, ಲೋಕೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಆಲ್ ರೈಟ್ ಮಂತ್ರ ಮಾಂಗಲ್ಯ ನಾಟಕ ಪ್ರದರ್ಶನ



ಮೈಸೂರು, ಜು.30(ಎಂಕೆ)– ಸರಳ, ಜಾತ್ಯತೀತ ಮದುವೆಗೆ ನಾಂದಿ ಹಾಡಿದ ಕುವೆಂಪು ಅವರ ಮಂತ್ರ ಮಾಂಗಲ್ಯ ಮದುವೆಯ ಮಹತ್ವ ತಿಳಿಸುವ ಆಲ್ ರೈಟ್ ಮಂತ್ರ ಮಾಂಗಲ್ಯ ನಾಟಕ ಭಾನುವಾರ ಕಲಾಮಂದಿರದ ಕಿರುರಂಗಮಂದಿರ ವೇದಿಕೆಯಲ್ಲಿ ಪ್ರದರ್ಶನಗೊಂಡಿತು.

ಹಿರಿಯ ಪತ್ರಕರ್ತ ಗಣೇಶ ಅಮೀನಗಡ ರಚನೆ, ಜಗದೀಶ್ ಆರ್.ಜಾಣೆ ಸಂಗೀತ, ರಂಗಕರ್ಮಿ ಮೈಮ್ ರಮೇಶ್ ನಿರ್ದೇಶನದಲ್ಲಿ ಜಿಪಿಐಇಆರ್ ರಂಗ ತಂಡ ಕಲಾವಿದರ ಅಚ್ಚುಕಟ್ಟು ಪ್ರದರ್ಶನ ಕಲಾಪ್ರೇಮಿಗಳ ಮನಸೆಳೆಯಿತಲ್ಲದೆ ಮಂತ್ರ ಮಾಂಗಲ್ಯದಿಂದಾಗುವ ಅನುಕೂಲತೆಗಳ ಬಗ್ಗೆ ಮನದಟ್ಟು ಮಾಡಿಕೊಡಲಾಯಿತು. ಜಾತ್ಯತೀತ ಒಲವಿನ ವಿವಾಹ ವೇದಿಕೆಯ ಮಾನವ ಮಂಟಪದಲ್ಲಿ ನಡೆಯುವ ಮಂತ್ರ ಮಾಂಗಲ್ಯದಿಂದ ಆರಂಭಗೊಳುವ ನಾಟಕ ಮಂತ್ರ ಮಾಂಗಲ್ಯದೊಂದಿಗೆ ಮುಕ್ತಾಯಗೊಳ್ಳುತ್ತದೆ. ಮದುವೆ ಹೆಸರಿನಲ್ಲಿ ದುಂದುವೆಚ್ಚ ಮಾಡಬೇಡಿ, ಸರಳವಾಗಿ ಮದುವೆ ಮಾಡಿ, ಸಮಾಜದಲ್ಲಿ ಸಮಾನವಾಗಿ ಬದುಕಿ ಎಂದು ತಿಳಿಸಲಾಯಿತು.

ಕೃತಿ ಬಿಡುಗಡೆ: ನಾಟಕ ಆರಂಭಕ್ಕೂ ಮುನ್ನ 'ಆಲ್ ರೈಟ್ ಮಂತ್ರ ಮಾಂಗಲ್ಯ' ನಾಟಕ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಶಿವರಾಜು, ರಂಗಕರ್ಮಿಗಳಾದ ರಾಜಶೇಖರ ಕದಂಬ, ಮೈಮ್ ರಮೇಶ್, ಚಿಂತಕರಾದ ಕಾಳಚನ್ನೇಗೌಡ, ನಾ.ದಿವಾಕರ್, ಮೈಸೂರು ಬುಕ್ ಕ್ಲಬ್‌ನ ಶುಭ ಸಂಜಯ್ ಅರಸ್, ಸಮಾಜ ಸೇವಕ ರಘುರಾಂ ವಾಜಪೇಯಿ, ಹೆಚ್.ಎಂ. ಕುಮಾರಸ್ವಾಮಿ ಮತ್ತಿತರರಿದ್ದರು.

525 ಕೋಟಿ ವಂಚನೆ ಪ್ರಕರಣ: ಹುಬ್ಬಳ್ಳಿ ಮೂಲದ ಇಬ್ಬರು ಉದ್ಯಮಿಗಳ 40 ಕೋಟಿ ಸ್ಥಿರಾಸ್ತಿ ಜಪ್ತಿ

ಹುಬ್ಬಳ್ಳಿ: 525 ಕೋಟಿ ವಂಚನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇಡಿ) 40.22 ಕೋಟಿ ಮೌಲ್ಯದ 12 ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿದೆ. ಈ ಆಸ್ತಿಗಳು ಶೀತಲ್ ಕುಮಾರ್ ಮನೇರೆ, ಅವರ ಕುಟುಂಬ ಸದಸ್ಯರು ಮತ್ತು ಶೀತಲ್ ಜಿನೇಂದ್ರ ಮಗ್ದುಮ್ ಅವರಿಗೆ ಸೇರಿದೆ.



ಆರೋಪಿಗಳು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಹೂಡಿಕೆ ಮಾಡುವ ನೆಪದಲ್ಲಿ 525 ಕೋಟಿ ರೂ. ಹಣಕಾಸು ವ್ಯವಹಾರ ವಂಚಿಸಿದ್ದರು. ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿರುವ ಒಟ್ಟು 12 ಲಗತ್ತಿಸಲಾದ ಆಸ್ತಿಗಳಲ್ಲಿ ಭೂಮಿ, ವಾಣಿಜ್ಯ ಆವರಣಗಳು, ವಿಂಡ್ ಮಿಲ್‌ಗಳು, ವಸತಿ ಅಪಾರ್ಟ್‌ಮೆಂಟ್‌ಗಳನ್ನು ಜಪ್ತಿ ಮಾಡಲಾಗಿದೆ. ಹುಬ್ಬಳ್ಳಿಯ ಅಶೋಕನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಆಧಾರದ ಮೇಲೆ ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಇಡಿ ತನಿಖೆ ಆರಂಭಿಸಿದೆ. ತನಿಖೆ ವೇಳೆ, ಮಾನೆರೆ ಇತರ ಆರೋಪಿಗಳೊಂದಿಗೆ ಸಂಚು ರೂಪಿಸಿ, ದೂರುದಾರ ಸಂಜಯ್ ದನ್‌ಚಂದ್ ಘೋಡಾವತ್ ಅವರೊಂದಿಗೆ ಸ್ನೇಹ ಬೆಳೆಸಿದರು. ಅಲ್ಲದೆ 525 ಕೋಟಿ ರೂಪಾಯಿಗಳನ್ನು ರಿಯಲ್ ಎಸ್ಟೇಟ್ ಯೋಜನೆಗಳಲ್ಲಿ ಹೂಡಿಕೆ ಮಾಡಲು ಪ್ರೇರೇಪಿಸಿದರು. ಆರೋಪಿಗಳು ಹಣವನ್ನು ಬೇರೆಡೆಗೆ ತಿರುಗಿಸಿ ಮನೆರೆ, ಅವರ ಕುಟುಂಬ ಸದಸ್ಯರು ಮತ್ತು ಶೀತಲ್ ಜಿನೇಂದ್ರ ಮಗ್ದುಮ್ ಮತ್ತು ಇತರ ಕೆಲವು ವ್ಯಕ್ತಿಗಳ ವೈಯಕ್ತಿಕ ಖಾತೆಗಳಿಗೆ ವರ್ಗಾಯಿಸಿದ್ದಾರೆ ಎಂದು ಇಡಿ ತನಿಖೆಯಿಂದ ತಿಳಿದುಬಂದಿದೆ. ಪ್ರಕರಣ ಕುರಿತಂತೆ ಹೆಚ್ಚಿನ ತನಿಖೆ ನಡೆಯುತ್ತಿದೆ.

ಜಾನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ



ಮೈಸೂರು, ಜು.30(ಪಿಎಂ)– ಶ್ರೀ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ವತಿಯಿಂದ ಕಾಲೇಜು ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ 30 ದಿನಗಳ ಜಾನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಭಾನುವಾರ ನಡೆಯಿತು.

ಮೈಸೂರಿನ ಕಲಾಮಂದಿರದ ಆವರಣದ ಕಿರುರಂಗ ಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಸಮಾರಂಭವನ್ನು ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮೇಯರ್ ಶಿವಕುಮಾರ್ ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿದರು. ಇದೇ ವೇಳೆ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಲಾಯಿತು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಟ್ರಸ್ಟ್ ಅಧ್ಯಕ್ಷೆ ಎಸ್.ರಮ್ಯಾ, 30 ದಿನಗಳ ಕಾಲ ಕಲಾಮಂದಿರ ಆವರಣದಲ್ಲಿ 44 ಮಂದಿ ಕಾಲೇಜು ವಿದ್ಯಾರ್ಥಿಗಳಿಗೆ ಜಾನಪದ ಕಲಾಪ್ರಕಾರಗಳ ತರಬೇತಿ ನೀಡಲಾಗಿದೆ. ಈ ಪೈಕಿ ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಪಡೆದಿದ್ದಾರೆ. ಡೊಳ್ಳು ಕುಣಿತ, ಕಂಸಾಳೆ, ಮಾರಿ ಕುಣಿತ, ಪಟಕುಣಿತ, ಕೋಲಾಟ ಹಾಗೂ ಮಂಟೇಸ್ವಾಮಿ ಮತ್ತು ಮಲೆ ಮಹದೇಶ್ವರಸ್ವಾಮಿ ಅವರ ಜಾನಪದ ಗೀತೆಗಳ ಗಾಯನ ತರಬೇತಿ ನೀಡಲಾಯಿತು ಎಂದು ತಿಳಿಸಿದರು.

ರಂಗಾಯಣ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ), ಪಂಚಾಯತ್ ರಾಜ್ ಇಲಾಖೆ ಸಹಾಯಕ ನಿರ್ದೇಶಕ ಕೆ.ಎಂ.ರವೀಂದ್ರ ಮತ್ತಿತರರು ಹಾಜರಿದ್ದರು.

ಅರಿಶಿನಗುಂಡಿ ಫಾಲ್ಸ್‌ನಲ್ಲಿ ಕೊಚ್ಚಿ ಹೋಗಿದ್ದ ಶರತ್ ಮೃತದೇಹ ಪತ್ತೆ



ಉಡುಪಿ,ಜು.30–ಕೊಲ್ಲೂರಿನ ಅರಿಶಿನಗುಂಡಿ ಜಲಪಾತ ವೀಕ್ಷಣೆಗೆ ಬಂದಾಗ ರೀಲ್ಸ್ ಮಾಡಲು ಹೋಗಿ ಜಲಪಾತಕ್ಕೆ ಬಿದ್ದು, ಕೊಚ್ಚಿ ಹೋಗಿದ್ದ ಯುವಕ ಶರತ್ (23) ಮೃತದೇಹ ಪತ್ತೆಯಾಗಿದೆ. ಸತತ ವಾರದ ನಿರಂತರ ಶೋಧ ಕಾರ್ಯದ ಬಳಿಕ ಇಂದು ಮೃತದೇಹ ಪತ್ತೆಯಾಗಿದೆ.

ಕೊಲ್ಲೂರಿನ ಅರಿಶಿನಗುಂಡಿ ಜಲಪಾತದ ಬಳಿ ಸ್ನೇಹಿತನೊಂದಿಗೆ ರೀಲ್ಸ್ ಮಾಡಲು ಹೋಗಿದ್ದ ಭದ್ರಾವತಿ ಮೂಲದ ಶರತ್ ಕಾಲು ಜಾರಿ ಜಲಪಾತಕ್ಕೆ ಬಿದ್ದಿದ್ದ. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಸುದ್ದಿ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಧಾವಿಸಿದ ಅಗ್ನಿ ಶಾಮಕ ಸಿಬ್ಬಂದಿ, ಪೊಲೀಸರು, ಯುವಕ ಶರತ್‌ಗಾಗಿ ಶೋಧ ಕಾರ್ಯಾಚರಣೆ ನಡೆಸಿದ್ದರು. ಆದರೆ ಧಾರಾಕಾರ ಮಳೆ, ಧುಮ್ಮಿಕ್ಕಿ ಹರಿಯುವ ಜಲಪಾತದ ಅಬ್ಬರದಿಂದ ಯುವಕ ಪತ್ತೆ ಆಗಿರಲಿಲ್ಲ. ಆದರೂ. ಮುಳುಗು ತಜ್ಞರು, ಪೊಲೀಸರು, ಅಗ್ನಿ ಶಾಮಕ ಸಿಬ್ಬಂದಿ ವಾರದಿಂದ ಹಗಲು ರಾತ್ರಿ ಎನ್ನದೇ ಶೋಧ ಕಾರ್ಯಾಚರಣೆ ನಡೆಸಿದ್ದರು. ಕೊನೆಗೂ ಇಂದು ಯುವಕನ ಮೃತದೇಹ ಪತ್ತೆಯಾಗಿದ್ದು, ಜಲಾಶಯದ 200 ಮೀಟರ್ ಕೆಳಗಡೆ ಬಂಡೆ ಕಲ್ಲಿನ ಒಳಗೆ ಸಿಲುಕಿತ್ತು ಎನ್ನಲಾಗಿದೆ.

ಎಸ್‌ಎಪಿ ಪ್ರಯೋಗಾಲಯ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಜು.30–ಮೈಸೂರಿನ ಜಿಟಿಟಿಸಿ ಸಂಸ್ಥೆಯಲ್ಲಿ ಎಸ್‌ಎಪಿ ಪ್ರಯೋಗಾಲಯಗಳಲ್ಲಿ ರಿಯಾಯಿತಿ ದರದಲ್ಲಿ ತರಬೇತಿ ನೀಡಲಾಗುತ್ತಿದ್ದು, ಜು.31ರಿಂದ ಅರ್ಜಿ ಸಲ್ಲಿಸಬಹುದು. ಎಂಬಿಎ, ಬಿಬಿಎಂ, ಬಿಎ, ಬಿಕಾಂ, ಎಂಕಾಂ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಕೋರ್ಸಿನ ವಿವರಗಳಿಗಾಗಿ ದೂ.ಸಂ: 9164509275, 9945349638, 9900864686, 9945479700 ಹಾಗೂ 9449929667 ಸಂಪರ್ಕಿಸಬಹುದು.

ಜೆಎಸ್‌ಎಸ್‌ಎಸ್ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ



ಮೈಸೂರು,ಜು.30–ಮೈಸೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗ ಹಾಗೂ ಮೈಸೂರಿನ ಪ್ರಜ್ಞಾ ಸಂಸ್ಥೆ ವತಿಯಿಂದ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ನಡೆದ ಜಿಲ್ಲಾ ಮಟ್ಟದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳ ಏಕಾಂಕ ನಾಟಕ ವಿಭಾಗದಲ್ಲಿ ಜೆಎಸ್‌ಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಗತ್ ಸಿಂಗ್, ರಾಜಗುರು ಸುಖದೇವ್ ಅವರ ಜೀವನ ಮತ್ತು ಹೋರಾಟ ಕುರಿತಾದ 'ದೇಶಪ್ರೇಮ' ನಾಟಕ ಪ್ರದರ್ಶನ ನೀಡಿ ಪ್ರಥಮ ಬಹುಮಾನ ಪಡೆದುಕೊಂಡರು. ಕಾಲೇಜಿನ ವಿದ್ಯಾರ್ಥಿಗಳಾದ ಸಾಗರ್, ಟಿ.ಡಿ.ಕೃತಿಕ, ಶಿವಾನಿ, ಹರ್ಷವರ್ಧನ್, ಹರ್ಷಿತ, ಕ್ರಿಸ್ಮ, ಧನಲಕ್ಷ್ಮೀ, ಗಾನಶ್ರೀ, ಕೀರ್ತನ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಬಾಲಕರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ಕಟ್ಟಡ ನೀಡಲು ಮನವಿ

ಮೈಸೂರು,ಜು.30–ಮೈಸೂರು ನಗರದ ದೀನ್‌ದಯಾಳ್ ಸೌಹಾರ್ದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಮೈಸೂರು ನಗರ ವ್ಯಾಪ್ತಿಯಲ್ಲಿ 100 ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಅನುಗುಣವಾಗುವ ಬಾಡಿಗೆ ಕಟ್ಟಡ ಬೇಕಾಗಿದೆ. ಕಟ್ಟಡವು 24X7 ಮೂಲ ಸೌಕರ್ಯಗಳಾದ ನೀರಿನ ವ್ಯವಸ್ಥೆ, ವಿದ್ಯುತ್ ಸರಬರಾಜು, ಪಾರ್ಕಿಂಗ್ ವ್ಯವಸ್ಥೆ, ಸೋಲಾರ್ ವ್ಯವಸ್ಥೆ, ಗ್ರಂಥಾಲಯ, ಕಂಪ್ಯೂಟರ್ ಸೌಲಭ್ಯ ಹಾಗೂ ದಾಸ್ತಾನು ಸಂಗ್ರಹಕ್ಕೆ ಪ್ರತ್ಯೇಕವಾದ ಸ್ಥಳಾವಕಾಶ, ಸೂಕ್ತವಾದ ಗಾಳಿ ಬೆಳಕು ಇರುವ ಕನಿಷ್ಠ 30 ಕೊಠಡಿಗಳ ಅಥವಾ 100 ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಅನುಗುಣವಾಗಿ ಸ್ಥಳಾವಕಾಶ, ಅಡುಗೆ ಕೋಣೆ ವ್ಯವಸ್ಥೆ, ಉತ್ತಮ ಒಳಚರಂಡಿ ವ್ಯವಸ್ಥೆ ಮತ್ತು ಬಟ್ಟೆ ತೊಳೆಯಲು ಪ್ರತ್ಯೇಕವಾದ ವ್ಯವಸ್ಥೆಯನ್ನು ಹೊಂದಿರಬೇಕು. ಕಟ್ಟಡವು ಸೇಫ್ಟಿ ಅರ್ಥಿಂಗ್ ಒಳಗೊಂಡಿದ್ದು, ವ್ಯಸನ ಪದಾರ್ಥಗಳಿಂದ ಮುಕ್ತವಾದ ಸ್ಥಳದಲ್ಲಿರಬೇಕು ಮತ್ತು ಬಸ್ ನಿಲ್ದಾಣಕ್ಕೆ ಹತ್ತಿರದಲ್ಲಿರಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2422088, 2422078 ಇಮೇಲ್: gokdom.dommysuru@gmail.com ಅಥವಾ ಬೆಂಗಳೂರು–ಮೈಸೂರು ರಸ್ತೆಯಲ್ಲಿನ ಶೋಭಾ ಗಾರ್ಡನ್ ಹತ್ತಿರದ ಮೌಲಾನ ಆಜಾದ್ ಭವನವನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ರಂಗದ ಮೇಲೆ ಮಕ್ಕಳ ಪಠ್ಯ ತರಬೇಕು

ರಂಗಕರ್ಮಿ ಎಸ್.ವಿ. ಸುಷ್ಮಾ ಅಭಿಮತ



ಮೈಸೂರು,ಜು.30(ಎಂಕೆ)–ಮಕ್ಕಳ ಪಠ್ಯವನ್ನು ರಂಗದ ಮೇಲೆ ತರುವ ಪ್ರಯತ್ನಗಳು ಹೆಚ್ಚಾಗಬೇಕು. ಹಾಗೆಯೇ ಅದರ ಮೌಲ್ಯಮಾಪನ ನಡೆಯಬೇಕು ಎಂದು ರಂಗಕರ್ಮಿ ಎಸ್.ವಿ.ಸುಷ್ಮಾ ಅಭಿಪ್ರಾಯಪಟ್ಟರು.

ನಗರದ ನಟನ ರಂಗಮಂದಿರದಲ್ಲಿ ಭಾನುವಾರ ಕೆ.ವಿ.ಸುಬ್ಬಣ್ಣ ಸ್ಮರಣಾರ್ಥ ನಡೆದ 2023–24ನೇ ಸಾಲಿನ ರಂಗಭೂಮಿ ಡಿಪ್ಲೊಮಾ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಹಾಗೂ ರಂಗ ಶಿಕ್ಷಣ; ವರ್ತಮಾನ ಮತ್ತು ಭವಿಷ್ಯದ ಅವಕಾಶಗಳು ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, ನಮ್ಮಲ್ಲಿ ಪ್ರದರ್ಶನ ಕೇಂದ್ರಿತ ರಂಗಭೂಮಿ ಚಟುವಟಿಕೆಗಳೇ ಹೆಚ್ಚಿದ್ದು, ಅದು ಬದಲಾಗಬೇಕು ಎಂದರು.

ರಂಗ ಶಿಕ್ಷಣ ಹಾಗೂ ಶಿಕ್ಷಣದಲ್ಲಿ ರಂಗಭೂಮಿ ಎರಡೂ ವಿಭಿನ್ನ ಕಲ್ಪನೆಗಳು. ರಂಗ ಶಿಕ್ಷಣ ಎನ್ನುವುದು ಒಂದು ನಾಟಕಕ್ಕೆ ಬೇಕಾದ ಎಲ್ಲಾ ಬಗೆಯ ತರಬೇತಿಯನ್ನು ಒಳಗೊಂಡ ಕಲೆ. ಇದನ್ನು ಪ್ರದರ್ಶನ ಹಾಗೂ ಪ್ರದರ್ಶನ ರಹಿತ ರಂಗ ಶಿಕ್ಷಣ ಎಂದು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಇದೆಲ್ಲದರ ಸಂಕೀರ್ಣವೇ ರಂಗಭೂಮಿ. ಹಾಗೆಯೇ ರಂಗಭೂಮಿಗೆ ಬಂದವರೆಲ್ಲ ಸಿನಿಮಾ ನಟ–ನಟಿಯಾಗಲು ಸಾಧ್ಯವಿಲ್ಲ. ರಂಗಭೂಮಿಯಲ್ಲಿನ ಬೇರೆ ವಿಭಾಗಗಳಲ್ಲಿಯೂ ಅವರು ಗಮನ ಹರಿಸಬೇಕು. ಬೆಳಕು, ಸಂಗೀತ, ರಂಗವಿನ್ಯಾಸ, ಮೇಕಪ್ ನಂತಹ ಚಟುವಟಿಕೆಗಳನ್ನೂ ಆಯ್ದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಘಟಕರ ಕೊರತೆ: ನಟ ಮಂಡ್ಯ ರಮೇಶ್ ಮಾತನಾಡಿ, ರಾಜ್ಯದ ರೆಪರ್ಟರಿಗಳಲ್ಲಿ ಉತ್ತಮ ನಟ–ನಟಿಯರು, ಬೆಳಕು ಮತ್ತು ಪ್ರಸಾಧನ ಕಲಾವಿದರು ಹೊರಬರುತ್ತಿದ್ದು, ಅವರೆಲ್ಲರನ್ನೂ ಒಳಗೊಂಡ ತಂಡವನ್ನು ನಿರ್ವಹಿಸಬಲ್ಲ ಸಂಘಟಕರ ಕೊರತೆ ಕಾಡುತ್ತಿದೆ. ಕರ್ನಾಟಕ ರಂಗಭೂಮಿಗೆ ಶುದ್ಧ ಸಂಘಟಕರ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರಲ್ಲದೆ ತಿಂಗಳಿಗೆ 40 ಸಾವಿರ ರೂ. ಸಂಬಳ ಕೊಟ್ಟು ರಂಗಭೂಮಿ ತರಬೇತುದಾರರನ್ನು ನೇಮಿಸಿಕೊಳ್ಳಲು ಖಾಸಗಿ ಶಾಲೆಗಳು ದುಂಬಾಲು ಬಿದ್ದಿವೆ. ಹೊಂದಿಕೊಂಡು ಕೆಲಸ ಮಾಡುವವರಿಗೆ ಈ ಕ್ಷೇತ್ರದಲ್ಲಿ ಉತ್ತಮ ಅವಕಾಶಗಳು ಇವೆ ಎಂದು ತಿಳಿಸಿದರು.

ಉತ್ತಮ ಮಾಧ್ಯಮ: ರಂಗಶಿಕ್ಷಕ ಸಂತೋಷ್ ಗುಡ್ಡಿಯಂಗಡಿ ಮಾತನಾಡಿ, 2008ರಲ್ಲಿ ನನ್ನನ್ನೂ ಒಳಗೊಂಡು 46 ಮಂದಿ ಸರ್ಕಾರಿ ಶಾಲೆಗಳಿಗೆ ರಂಗಶಿಕ್ಷಕರಾಗಿ ನೇಮಕಗೊಂಡೆವು. ಆ ನಂತರವಷ್ಟೇ ಹೀಗೊಂದು ಹುದ್ದೆ ಸರ್ಕಾರಿ ಶಾಲೆಗಳಲ್ಲಿ ಇದೆ ಎಂಬುದು ಜನರಿಗೆ ಗೊತ್ತಾಯಿತು. ಮಕ್ಕಳ ರಂಗ ಶಿಕ್ಷಣಕ್ಕೆ ರಂಗಭೂಮಿ ಅತ್ಯಂತ ಉತ್ತಮ ಮಾಧ್ಯಮ. ಸರ್ಕಾರ ರಂಗಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಪ್ರೌಢಶಾಲೆಗಳಲ್ಲಿ ರಂಗಶಿಕ್ಷಕರ ನೇಮಕ ಆಗಬೇಕು ಎಂದು ಆಗ್ರಹಿಸಿದರು. ನಂತರ ರಂಗಾಸಕ್ತರು ಹಾಗೂ ಡಿಪ್ಲೊಮಾ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಿತು. ರಂಗಭೂಮಿ ಕಲಾವಿದರರಾದ ರಾಜಪ್ಪ ದಳವಾಯಿ, ಬಿ.ಆರ್.ವೆಂಕಟರಮಣ ಐತಾಳ, ಮೇಘ ಸಮೀರ, ಎನ್.ಧನಂಜಯ ಮತ್ತಿತರರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು,ಜು.30–2023–24ನೇ ಸಾಲಿನ ಕೇಂದ್ರ ಪುರಸ್ಕೃತ ಟಾಪ್ ಕ್ಲಾಸ್ ವಿದ್ಯಾರ್ಥಿ ವೇತನವನ್ನು ಪಡೆಯಲು ರಾಜ್ಯದ ಟಾಪ್ ಸ್ಕೂಲ್ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹಿಂದುಳಿದ ವರ್ಗ, ಆರ್ಥಿಕವಾಗಿ ಹಿಂದುಳಿದ ವರ್ಗಗಳು ಮತ್ತು ಡಿ–ನೋಟಿಫೈಡ್, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ವರ್ಗಗಳಿಗೆ ಸೇರಿರಬೇಕು, ಪೋಷಕರ ವಾರ್ಷಿಕ ಆದಾಯವು 2.50 ಲಕ್ಷದೊಳಗಿರಬೇಕು. 9ನೇ ಮತ್ತು 11ನೇ ತರಗತಿಯಲ್ಲಿ ಉನ್ನತ ದರ್ಜೆಯ ಶಾಲೆಯಲ್ಲಿ ಓದುತ್ತಿರಬೇಕು ಹಾಗೂ 9 ಮತ್ತು 10 ನೇ ತರಗತಿಗೆ ರೂ.75 ಸಾವಿರ ಮತ್ತು 11 ಮತ್ತು 12 ನೇ ತರಗತಿಗೆ ರೂ 1 ಲಕ್ಷ 25 ಸಾವಿರ ರೂ.ಗಳ ಶಾಲಾ ಬೋಧನಾ ಮತ್ತು ಹಾಸ್ಟೆಲ್ ಶುಲ್ಕ ಒಳಗೊಂಡಿರುತ್ತದೆ. ಅರ್ಜಿ ಸಲ್ಲಿಸಲು ಆ.10 ಕೊನೆಯ ದಿನ. ಹೆಚ್ಚಿನ ಮಾಹಿತಿಯನ್ನು https://yet.nta.ac.in ಮತ್ತು https://socialjustice.gov.in/schmes ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಪುಸ್ತಕ ಅನುದಾನ, ಶಿಷ್ಯವೇತನಕ್ಕಾಗಿ ಅರ್ಜಿ


ಮೈಸೂರು, ಜು.30–ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಪುಸ್ತಕ ಅನುದಾನಕ್ಕಾಗಿ ಮತ್ತು ಡಿಗ್ರಿ, ಡಿಪ್ಲೋಮಾ, ಜೆಓಸಿ, ಪ್ರೊಫೆಷನಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಿಲಿಟರಿ ಪಿಂಚಣಿರಹಿತ ಕರ್ನಾಟಕದ ಮಾಜಿ ಸೈನಿಕರ ಹಾಗೂ ಕರ್ನಾಟಕದಲ್ಲಿ ನೆಲೆಸಿರುವ ಹೊರರಾಜ್ಯದ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ (ಅಧಿಕಾರಿಗಳನ್ನು ಹೊರತುಪಡಿಸಿ) ಮಕ್ಕಳಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಶುಲ್ಕರಹಿತ ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸೆ.30ರೊಳಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸೈನಿಕ ನಿರ್ದೇಶನಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ದೂ.ಸಂ: 08212–2425240 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜು.30–ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, ಪ.ಜಾತಿ, ಪ.ವರ್ಗ ಮತ್ತು ಇತರೆ ವಿವಿಧ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ 2023–24ನೇ ಸಾಲಿಗೆ www.bcwd.karnataka.gov.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೆ ದಿನ. ಹೆಚ್ಚಿನ ಮಾಹಿತಿಗಾಗಿ bcwd.hostel@karnataka.gov.in, ದೂ.ಸಂ: 8050370005 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.7.2023 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪುಷ್ಯಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

- **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಪರಿಶುದ್ಧ ಸಿಲ್ಕ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಪೀಪಲ್ ಫಾರ್ ಅನಿಮಲ್ಸ್:** ಗಾಯಗೊಂಡ ನಾಯಿಗಳಿಗೆ ಆರೈಕೆ ಮಾಡಿ ಉಪಚರಿಸುವ ಆಶ್ರಯತಾಣ ಉದ್ಘಾಟನೆ, ಮುಖ್ಯ ಅತಿಥಿ: ರಾಜವಂಶಸ್ಥರಾದ ತ್ರಿಷಿಕಾ ಕುಮಾರಿ ಒಡೆಯರ್, ಸ್ಥಳ: ಪೀಪಲ್ ಫಾರ್ ಅನಿಮಲ್ಸ್ ಸಂಸ್ಥೆ ಆವರಣ, ಬೋಗಾದಿ. ಬೆಳಗ್ಗೆ 11 ಗಂಟೆಗೆ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ಅಯೋಧ್ಯಾ ಕಾಂಡ–ವಿದ್ವಾನ್ ಶ್ರೀ ಶ್ರೀಕಾಂತಾಚಾರ್ಯ ಕಳಸಾಪುರ ಅವರಿಂದ. ಸ್ಥಳ: ಮಠದ ಅವರಣ, ಕೃಷ್ಣಮೂರ್ತಿಪುರಂ. ಸಂಜೆ 6ರಿಂದ 7ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಕೆ. ಗುಣಪಾಲ್ ಜೈನ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಭಾವಗೀತೆಗಳು: ಮೈಸೂರು ಅನಂತಸ್ವಾಮಿ, ಶಿವಮೊಗ್ಗ ಸುಬ್ಬಣ್ಣ, 9.05 ವಸುಧೈವ ಕುಟುಂಬಕಂ– ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮ – ಹೆಸರಾಂತ ಅಂಕಣಕಾರರಾದ ಪ್ರೊ. ಎಚೆಸ್ಕೆ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಅವರು ನಡೆಸಿದ್ದ ಸಂವಾದದ 3ನೇ ಭಾಗ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 10.00 ಲಯ ಸಂಭ್ರಮ– "ಕರ್ನಾಟಕ ಮತ್ತು ಮೈಸೂರು ಸಂಸ್ಥಾನದಲ್ಲಿ ಮೃದಂಗವಾದನದ" ಪರಂಪರೆ. ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ: ಮದ್ವೇಶ್ ವಿ., 12.45 ನಮ್ಮ ಆರೋಗ್ಯ: "ವಿಶ್ವ ಹೆಪಾಟಿಟಿಸ್ ದಿನಾಚರಣೆಯ ಸಂಬಂಧವಾಗಿ ಹೆಪಟಿಟಿಸ್" ವಿಧಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಮಾಧುರಿ ಕುಲಕರ್ಣಿ ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುವವರು ಬೇದ್ರೆ ಮಂಜುನಾಥ್, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ– ಲಲಿತಾ ಹೆಚ್.ಎಂ., 3.00 ವಿ. ದೇಶಿಕಾಚಾರ್– ವೇಣುವಾದನ.

ಸಂಜೆ: 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ–ಪಂಚಕರ್ಮ ಚಿಕಿತ್ಸೆ ಏಕೆ ಬೇಕು, ಭಾಗವಹಿಸುವ ವೈದ್ಯರು– ಡಾ.ಶಶಿರೇಖಾ, ಪ್ರಸ್ತುತಿ–ಎಂ.ಎಸ್.ಭಾರತಿ, 4.45 ಹಿಂದಿ ಪಾಠ: ಶಾಂತಾ ಡಿ. ಕಿಣಿ, 6.50 ಕೃಷಿರಂಗ: ಕಿಸಾನ್‌ವಾಣಿ–ಕೃಷಿ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಕುರಿತು ಸಂವಾದದಲ್ಲಿ ಭಾಗವಹಿಸುವವರು ವಿ.ಎಸ್.ಅಶೋಕ್ ಮತ್ತು ಮಮತಾ, ಪ್ರಸ್ತುತಿ–ಎನ್.ಕೇಶವ ಮೂರ್ತಿ. **ರಾತ್ರಿ:** 9.30 ಹಳ್ಳಿ ಹಾಡು: ಪ್ರಸ್ತುತಿ–ಅಬ್ದುಲ್ ರಶೀದ್, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 31 ಸೋಮವಾರ 2023

ಸಂಪುಟ: 44 | ಸಂಚಿಕೆ: 106 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಇಂದಿನಿಂದ ಮೈಸೂರಲ್ಲಿ ಮೂರು ದಿನಗಳ

ಜಿ–20 ಶೃಂಗಸಭೆ

ವಿಶ್ವದ ಹಲವು ದೇಶಗಳ ರಾಯಭಾರಿಗಳು ಹಾಗೂ ಪ್ರತಿನಿಧಿಗಳ ಆಗಮನ

■ ವಿದೇಶಿ ಪ್ರತಿನಿಧಿಗಳಿಂದ ಪ್ರವಾಸಿ ತಾಣಗಳ ವೀಕ್ಷಣೆ ■ ಮೈಸೂರಲ್ಲಿ ಪೊಲೀಸರ ಬಿಗಿ ಕಟ್ಟೆಚ್ಚರ ■ ಸಿಸಿ ಕ್ಯಾಮರಾಗಳು ಸಕ್ರಿಯ, ಖಾಸಗಿ ಸಿಸಿ ಕ್ಯಾಮರಾಗಳ ಬಗ್ಗೆ ಸರ್ವೆ





ಜಿ–20 ಶೃಂಗಸಭೆ ನಿಮಿತ್ತ ಸದಸ್ಯ ರಾಷ್ಟ್ರಗಳ ಗಣ್ಯರು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಚಾಮರಾಜ ವೃತ್ತ ಹಾಗೂ ಜಯಚಾಮರಾಜೇಂದ್ರ ವೃತ್ತ(ಹಾರ್ಡಿಂಜ್ ಸರ್ಕಲ್)ಗಳನ್ನು ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿದೆ. ಬಲಚಿತ್ರದಲ್ಲಿ ಹೈವೇ ಸರ್ಕಲ್ ಬಳಿಯ ಹೋಟೆಲ್ ಗ್ರ್ಯಾಂಡ್ ಮರ್ಕ್ಯೂರ್ ಎದುರು ಪೊಲೀಸ್ ತಂಡಗಳಿಗೆ ಮಾಹಿತಿ ನೀಡುತ್ತಿರುವುದು.

ಅರಮನೆಗೆ ಪ್ರವೇಶವಿಲ್ಲ

“ ಜಿ–20 ಶೃಂಗಸಭೆಯ ವಿದೇಶಿ ರಾಯಭಾರಿಗಳು ಹಾಗೂ ಪ್ರತಿನಿಧಿಗಳು ವಿಶ್ವ ವಿಖ್ಯಾತ ಮೈಸೂರು ಅರಮನೆ ವೀಕ್ಷಣೆಗೆ ಆಗಮಿಸುತ್ತಿರುವುದರಿಂದ ಭದ್ರತಾ ದೃಷ್ಟಿಯಿಂದ ಅರಮನೆಗೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. ಆ.1ರಂದು ಮಧ್ಯಾಹ್ನ 2.30ರಿಂದ ಅರಮನೆ ಪ್ರವೇಶ ನಿರ್ಬಂಧಿಸಲಾಗಿದೆ. ಆ.2ರಂದು ರಾತ್ರಿ 7ರಿಂದ 8 ಗಂಟೆ ತನಕ ನಡೆಯುವ ಧ್ವನಿ–ಬೆಳಕು ಕಾರ್ಯಕ್ರಮಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ.

–ಟಿ.ಎಸ್.ಸುಬ್ರಹ್ಮಣ್ಯ, ಮೈಸೂರು ಅರಮನೆ ಮಂಡಳಿ ನಿರ್ದೇಶಕ

ಮೈಸೂರು,ಜು.30(ಬಿಎಲ್‌ಯು)–ಸಾಂಸ್ಕೃತಿಕ ನಗರಿ ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನಾಳೆಯಿಂದ (ಜುಲೈ 31) ಮೂರು ದಿನಗಳ ಜಿ–20 ಶೃಂಗಸಭೆ ನಡೆಯಲಿದೆ. ವಿಶ್ವದ ಹಲವು ದೇಶಗಳ ಪ್ರತಿನಿಧಿಗಳು ಭಾಗವಹಿಸುತ್ತಿರುವ ಜಿ–20 ಸದಸ್ಯ ರಾಷ್ಟ್ರಗಳ ಶೃಂಗಸಭೆ ಮೈಸೂರಿನಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಭಾರತವು 100ನೇ ಜಿ–20 ಶೃಂಗಸಭೆಯ ಆತಿಥ್ಯ ವಹಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ಬಾರಿಯ ಜಿ–20 ಶೃಂಗಸಭೆಯ ಅಧ್ಯಕ್ಷರಾಗಿದ್ದಾರೆ. ಭಾರತದ ಸಾಧನೆಯ ಮೈಲಿಗಲ್ಲಿನಲ್ಲಿ ಭಾರತದಲ್ಲಿ ನಡೆಯುತ್ತಿರುವ ಜಿ–20 ಶೃಂಗಸಭೆ ಕೂಡ ಒಂದಾಗಿದೆ.

G20 भारत 2023 INDIA

2022, ಡಿಸೆಂಬರ್ 1 ರಂದು ಭಾರತದಲ್ಲಿ ಆರಂಭವಾಗಿರುವ ಶೃಂಗಸಭೆಯು 2023, ನವೆಂಬರ್ 30ರವರೆಗೆ ನಡೆಯಲಿದೆ. ಬೆಂಗಳೂರಿನಲ್ಲಿ ಕಳೆದ ವಾರ ನಡೆದ ಶೃಂಗಸಭೆಯಲ್ಲಿ ವ್ಯಾಪಾರ ಮತ್ತು ಹೂಡಿಕೆ ಬಗ್ಗೆ ಸಮಾಲೋಚನೆ ನಡೆದಿತ್ತು. ಹಂಪಿಯಲ್ಲಿ ನಡೆದ ಶೃಂಗಸಭೆಯಲ್ಲಿ ಕಲೆ ಮತ್ತು ಸಾಂಸ್ಕೃತಿಕ ಕಾರ್ಯ ಗುಂಪುಗಳ ಬಗ್ಗೆ ಸಮಾಲೋಚನೆ ನಡೆದಿತ್ತು. ಈಗ ಮೈಸೂರಿನಲ್ಲಿ ಜು.31ರಿಂದ ಆರಂಭವಾಗುತ್ತಿರುವ ಶೃಂಗಸಭೆಯಲ್ಲಿ ಪಾರಂಪರಿಕತೆ ಬಗ್ಗೆ ಸಮಾಲೋಚನೆ ನಡೆಯಲಿದೆ. ರಾಯಭಾರಿಗಳು ಸೇರಿದಂತೆ 250 ವಿದೇಶಿ ಗಣ್ಯರು ಮೈಸೂರಿನಲ್ಲಿ ನಡೆಯುವ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ.

“ವಸುದೈವ ಕುಟುಂಬಕಂ”, “ಒಂದು ಭೂಮಿ–ಒಂದು ಕುಟುಂಬ–ಒಂದು ಭವಿಷ್ಯ” ಧ್ಯೇಯವಾಕ್ಯದೊಂದಿಗೆ ಭಾರತದಲ್ಲಿ ಜಿ–20 ಶೃಂಗಸಭೆ ನಡೆಯುತ್ತಿದೆ. ಅಮೆರಿಕಾ, ರಷ್ಯಾ, ಚೀನಾ, ▶ 8ನೇ ಪುಟಕ್ಕೆ

ಮೈಸೂರಲ್ಲಿ ಡ್ರೋನ್‌ಗಳ ರಾಜಾರೋಷ ಹಾರಾಟ

● 250 ಗ್ರಾಂ ಮೇಲ್ಪಟ್ಟ ಡ್ರೋನ್‌ಗೆ ಲೈಸನ್ಸ್ ಕಡ್ಡಾಯ ● ಚೀನಾ ಡ್ರೋನ್‌ಗಳ ಸುಲಭ ಮಾರಾಟ ● ಅಕ್ರಮವಾಗಿ ಡ್ರೋನ್ ಹಾರಿಸುವವರಿಗೆ 1.50 ಲಕ್ಷ ದಂಡ

● ಬಾಪು ಲಿಂಗರಾಜೇ ಅರಸ್

ಮೈಸೂರು,ಜು.30–ವಿಶ್ವ ವಿಖ್ಯಾತ ಮೈಸೂರು ಅರಮನೆ, ಆರ್‌ಬಿಐ ನೋಟು ಮುದ್ರಣ ಘಟಕ, ಭಾರತದ ರಕ್ಷಣಾ ಇಲಾಖೆಯ ಆರ್‌ಎಂಪಿ, ಇನ್ಫೋಸಿಸ್ ಸೇರಿದಂತೆ ಹಲವು ಸೂಕ್ಷ್ಮ ಪ್ರದೇಶಗಳಿರುವ ಮೈಸೂರಿನಲ್ಲಿ ಅಕ್ರಮ ಡ್ರೋನ್‌ಗಳು ಹಾರಾಟ ನಡೆಸುತ್ತಿವೆ. ಚೀನಾದಿಂದ ಕಳ್ಳಸಾಗಾಣಿಕೆಯಲ್ಲಿ ಬರುವ ಡ್ರೋನ್‌ಗಳು ಮೈಸೂರಿನಲ್ಲಿ ರಾಜಾರೋಷವಾಗಿ ಹಾರಾಟ ನಡೆಸುತ್ತಿವೆ. ದೇಶದ ರಕ್ಷಣೆಗೆ ಧಕ್ಕೆ ಉಂಟುಮಾಡುವ ಅಕ್ರಮ ಡ್ರೋನ್‌ಗಳಿಗೆ ಕಡಿವಾಣ ಹಾಕದಿದ್ದರೆ ಮುಂದಿನ ದಿನದಲ್ಲಿ ಆಪತ್ತು ಕಟ್ಟಿಟ್ಟಬುತ್ತಿ ಎಂಬ ಆತಂಕ ಎದುರಾಗಿದೆ.

ಭಾರತದಲ್ಲಿ ಡ್ರೋನ್‌ಗಳು ಇಷ್ಟ ಬಂದಂತೆ ಹಾರಾಟ ನಡೆಸುತ್ತಿದ್ದವು. ಡ್ರೋನ್‌ಗಳು ದೇಶದ ರಕ್ಷಣೆಗೆ ಧಕ್ಕೆಯಾಗಿತ್ತು. ಅದರಲ್ಲೂ ಭಾರತದ ಪಾಕಿಸ್ತಾನ ಗಡಿಯಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಡ್ರೋನ್‌ಗಳು ಉಗ್ರರಿಗೆ ವರದಾನವಾಗಿತ್ತು. ಈ ಹಿನ್ನೆಲೆ ಭಾರತ ಸರ್ಕಾರವು 2021ರ ಆಗಸ್ಟ್‌ನಲ್ಲಿ ಡ್ರೋನ್ ಕಾಯ್ದೆಯನ್ನು ಜಾರಿಗೊಳಿಸಿ ಡ್ರೋನ್ ಹಾರಾಟಕ್ಕೆ ಗಡಿರೇಖೆ ಗುರುತಿಸಿ, ಕಟ್ಟುನಿಟ್ಟಾದ ಕಾನೂನು ಜಾರಿಗೊಳಿಸಿತು.

ಇದರಂತೆ 250 ಗ್ರಾಂ ತೂಕದ ಒಳಗಿನ ಡ್ರೋನ್‌ಗಳ ಹಾರಾಟಕ್ಕೆ ಯಾವುದೇ ಲೈಸನ್ಸ್ ಪಡೆಯುವ ಅಗತ್ಯವಿಲ್ಲ. ಆದರೆ 250 ಗ್ರಾಂ ತೂಕಕ್ಕಿಂತ ಹೆಚ್ಚಿನ ಭಾರವಿರುವ ಡ್ರೋನ್‌ಗಳನ್ನು ಖರೀದಿಸಿ, ಹಾರಾಟ ನಡೆಸಲು ಲೈಸನ್ಸ್ ಕಡ್ಡಾಯಗೊಳಿಸಲಾಗಿದೆ. 250 ಗ್ರಾಂನಿಂದ 150 ಕೆ.ಜಿ.ವರೆಗೆ ಡ್ರೋನ್ ಹಾರಾಟ ನಡೆಸಲು ಕೇಂದ್ರ ಸರ್ಕಾರದ ಅನುಮೋದಿತ ಖಾಸಗಿ ಕಂಪನಿಯಿಂದ ಕಡ್ಡಾಯವಾಗಿ ಲೈಸನ್ಸ್ ಪಡೆಯಬೇಕು. 150 ಕೆ.ಜಿ. ಮೇಲ್ಪಟ್ಟ ಡ್ರೋನ್ ಹಾರಾಟಕ್ಕೆ ರಕ್ಷಣಾ ಇಲಾಖೆಯವರನ್ನು ಹೊರತುಪಡಿಸಿ ಖಾಸಗಿಯಾಗಿ ಯಾರಿಗೂ ಲೈಸನ್ಸ್ ಕೊಡುವುದಿಲ್ಲ.

250 ಗ್ರಾಂ ಮೇಲ್ಪಟ್ಟ 150 ಕೆ.ಜಿ.ವರೆಗಿನ ಡ್ರೋನ್ ಹಾರಾಟಕ್ಕೆ ಲೈಸನ್ಸ್ ಕೊಡಲು ಭಾರತದಲ್ಲಿ ಎರಡು ಕಂಪನಿಗಳು ಮಾತ್ರ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿದೆ. ಚೆನ್ನೈನಲ್ಲಿರುವ ಸೆಂಟರ್ ಫಾರ್ ಏರೋ ಸ್ಪೇಸ್ ರಿಸರ್ಚ್ ಬಿಟ್ಟರೆ ಮೈಸೂರಿನ ಅಗ್ನಿ ಏರೋ ಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿಗೆ ಮಾತ್ರ ಲೈಸನ್ಸ್ ನೀಡುವ ಅಧಿಕಾರವಿದೆ. ಕೇಂದ್ರ ಸರ್ಕಾರದಿಂದ ಅನುಮತಿ ಪಡೆದಿರುವ 19 ಡ್ರೋಣ್ ತಯಾರಕರಿಂದ ಡ್ರೋನ್ ಖರೀದಿ ಮಾಡಬೇಕು. ತರುವಾಯ ಕೇಂದ್ರ ಸರ್ಕಾರದ ಡಿಜಿಸಿಎ (ಡೈರೆಕ್ಟರೇಟ್ ಜನರಲ್ ಆಫ್ ಸಿವಿಲ್ ಏವಿಯೇಷನ್) ವೆಬ್‌ಸೈಟ್ ಡಿಜಿಟಲ್ ಸ್ಕೈನಲ್ಲಿ ನಮೂದಿಸಬೇಕು. ನಂತರ ಮೈಸೂರಿನ ಅಗ್ನಿ ಏರೋ ▶ 8ನೇ ಪುಟಕ್ಕೆ



“ ಡ್ರೋನ್‌ನಿಂದ ಬಹಳಷ್ಟು ಪ್ರಯೋಜನವಿದೆ. ಆದರೆ ಕೆಲವರು ದೇಶ ವಿರೋಧಿ ಕೃತ್ಯಗಳಿಗೆ ಡ್ರೋನ್ ಬಳಸುತ್ತಾರೆ. ಈ ಹಿನ್ನೆಲೆ ಡ್ರೋನ್ ಹಾರಾಟ ನಡೆಸುವರು ಕಡ್ಡಾಯವಾಗಿ ಲೈಸನ್ಸ್ ಪಡೆಯಬೇಕು. ಒಂದು ವೇಳೆ ಲೈಸನ್ಸ್ ಪಡೆಯದೆ ಹಾರಾಟ ನಡೆಸಿದರೆ ಅಂತವರ ವಿರುದ್ಧ ಪೊಲೀಸರು ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಇದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು. ನಮ್ಮ ಸಂಸ್ಥೆಯು ಡ್ರೋನ್‌ಗೆ ಲೈಸನ್ಸ್ ನೀಡುವ ಜೊತೆಗೆ ಡ್ರೋನ್ ಹಾರಾಟ ನಡೆಸುವವರಿಗೆ ತರಬೇತಿ ಕೂಡ ನೀಡುತ್ತದೆ. ಕೃಷಿ ಚಟುವಟಿಕೆಗಳಿಗೆ ಡ್ರೋನ್ ಬಳಸಲು ಕೇಂದ್ರ ಸರ್ಕಾರದ ಅನುಮೋದಿತ ಐಎಫ್ ಎಸ್‌ಸಿಒ ದೇಶದಲ್ಲಿ 2500 ಡ್ರೋನ್‌ಗಳನ್ನು ಉಚಿತವಾಗಿ ನೀಡುತ್ತಿದೆ. ಒಂದು ಡ್ರೋನ್‌ಗೆ ಇಬ್ಬರು ಪೈಲಟ್‌ಗಳಂತೆ 5000 ಜನರಿಗೆ ತರಬೇತಿ ನೀಡಬೇಕಿದೆ. ಈ ಹಿನ್ನೆಲೆ ಅಗ್ನಿ ಏರೋ ಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ 1600 ಜನರಿಗೆ ತರಬೇತಿ ನೀಡುತ್ತಿದೆ. ಕೇಂದ್ರ ಸರ್ಕಾರ ಗುರುತಿಸಿರುವ ಕೆಆರ್‌ಎಸ್ ಹಿನ್ನೀರಿನ ಪ್ರದೇಶದಲ್ಲಿ ತರಬೇತಿ ನೀಡಲಾಗುತ್ತಿದೆ.

–ರಾಘವೇಂದ್ರ, ಅಗ್ನಿ ಏರೋ ಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ ಡೈರೆಕ್ಟರ್ ಆಫ್ ಡ್ರೋನ್ ಆಪರೇಷನ್ಸ್

2022–23ನೇ ಹಣಕಾಸು ವರ್ಷದಲ್ಲಿ ಸುಮಾರು 5.83 ಕೋಟಿ ಐಟಿ ರಿಟರ್ನ್ಸ್ ಸಲ್ಲಿಕೆ

ನವದೆಹಲಿ: 23ರ ಹಣಕಾಸು ವರ್ಷದಲ್ಲಿ ಗಳಿಸಿದ ಆದಾಯಕ್ಕಾಗಿ ಸುಮಾರು 5.83 ಕೋಟಿ ಐಟಿ ರಿಟರ್ನ್ಸ್ ಸಲ್ಲಿಕೆಯಾಗಿದೆ. ಇದು ಕಳೆದ ವರ್ಷ ಜು.31ರವರೆಗೆ ಸಲ್ಲಿಕೆಯಾಗಿದ್ದ ಐಟಿಆರ್‌ಗಳ ಸಂಖ್ಯೆಯನ್ನು ಮೀರಿಸಿದೆ. ವೇತನದಾರರು ಹಿಂದಿನ ವರ್ಷ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಜು.31 ಕೊನೆಯ ದಿನಾಂಕವಾಗಿದೆ.

ಜು.30ರ ಮಧ್ಯಾಹ್ನ 1ರವರೆಗೂ ಸುಮಾರು 5.83 ಕೋಟಿ ಐಟಿ ರಿಟರ್ನ್ಸ್ ಸಲ್ಲಿಸಲಾಗಿದೆ. ಇದು ಕಳೆದ ವರ್ಷ ಸಲ್ಲಿಕೆಯಾಗಿದ್ದ ಐಟಿಆರ್‌ಗಳ ಸಂಖ್ಯೆ ಮೀರಿಸಿದೆ ಎಂದು ಐಟಿ ಇಲಾಖೆ ಟ್ವೀಟ್ ಮಾಡಿದೆ. ಭಾನುವಾರ ಮಧ್ಯಾಹ್ನ 1ರವರೆಗೆ ಇ–ಫೈಲಿಂಗ್ ಪೋರ್ಟಲ್‌ನಲ್ಲಿ 46 ಲಕ್ಷಕ್ಕೂ ಹೆಚ್ಚು ಯಶಸ್ವಿ ಫೈಲಿಂಗ್ ಲಾಗಿನ್‌ಗಳು ಕಂಡು ಬಂದಿವೆ. ಇಂದು ಮಧ್ಯಾಹ್ನ 1ರವರೆಗೆ 10.39 ಲಕ್ಷ ಐಟಿಆರ್‌ಗಳನ್ನು ಸಲ್ಲಿಸಲಾಗಿದೆ ಮತ್ತು ಕಳೆದ 1 ಗಂಟೆಯಲ್ಲಿ 3.04 ಲಕ್ಷ ಐಟಿಆರ್‌ಗಳನ್ನು ಸಲ್ಲಿಸಲಾಗಿದೆ' ಎಂದು ಟ್ವೀಟ್ ಮೂಲಕ ತಿಳಿಸಿದೆ.

ಶಾಸಕರ ನಿಧಿ ಬಳಕೆ: ಮಾರ್ಗಸೂಚಿ ಪರಿಷ್ಕರಣೆ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆ ಅಡಿಯಲ್ಲಿರುವ ಸರ್ಕಾರಿ ಕಾಲೇಜು, ಎಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಸೌಲಭ್ಯ ಕಲ್ಪಿಸಲು ಅಗತ್ಯಕ್ಕೆ ಅನುಗುಣವಾಗಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಸಲು ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಮಾರ್ಗಸೂಚಿ ಪರಿಷ್ಕರಿಸಲಾಗಿದೆ. ಸರ್ಕಾರಿ ಕಾಲೇಜು, ಕೈಗಾರಿಕಾ ತರಬೇತಿ ಸಂಸ್ಥೆ, ಪಾಲಿಟೆಕ್ನಿಕ್‌ಗಳು, ಎಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಔದ್ಯೋಗಿಕ ಸಂಸ್ಥೆಗಳಿಗೆ ತರಗತಿ ಕೊಠಡಿಗಳು, ಆವರಣ ಗೋಡೆ, ಗ್ರಂಥಾಲಯ, ಪ್ರಯೋಗಾಲಯ, ಶೌಚಾಲಯಗಳ ನಿರ್ಮಾಣ, ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳಿಗೆ ಉಪಕರಣಗಳನ್ನು ಒದಗಿಸುವುದು, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವುದು, ರಸ್ತೆ, ಆಟದ ಮೈದಾನ, ಉಪಾಹಾರ ಮಂದಿರಗಳಂಥ ಮೂಲ ಸೌಕರ್ಯ ಒದಗಿಸಲು ಶಾಸಕರ ಅನುದಾನ ಬಳಸಬಹುದು. ಅಲ್ಲದೆ, ಸರ್ಕಾರಿ ವಿವಿಗಳ ಎಲ್ಲ ವಿಭಾಗಗಳಿಗೂ ಕಂಪ್ಯೂಟರ್ ಒದಗಿಸಲು ಕೂಡ ಅನುದಾನ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ.

ಮಳೆ ಹಾನಿ, ಪರಿಹಾರದ ಬಗ್ಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ

ಬೆಳಗಾವಿ,ಜು.30–ರಾಜ್ಯದಲ್ಲಿನ ಮಳೆ,



ಪ್ರವಾಹ ಪರಿಸ್ಥಿತಿ ಹಾಗೂ ಸಂತ್ರಸ್ತರಿಗೆ ಪರಿಹಾರ ನೀಡುವಲ್ಲಿ ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪರಿಸ್ಥಿತಿ ಹದಗೆಟ್ಟಿದ್ದು, ಮಳೆಯಿಂದ ಆಗಿರುವ ಹಾನಿಯ ಬಗ್ಗೆ ಸರ್ಕಾರ ಗಮನಹರಿಸುತ್ತಿಲ್ಲ. ಪಕ್ಷದೊಳಗಿನ ಆಂತರಿಕ ಕಚ್ಚಾಟವನ್ನು ಬಗೆಹರಿಸಲು ಮುಖ್ಯಮಂತ್ರಿ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿದ್ದು, ಸರ್ಕಾರಿ ಅಧಿಕಾರಿಗಳ ವರ್ಗಾವಣೆಯಲ್ಲಿ ವ್ಯಾಪಕ ಭ್ರಷ್ಟಾಚಾರವಾಗುತ್ತಿದ್ದು, ಸರ್ಕಾರದಲ್ಲಿರುವವರ ನಡುವೆ ಪೈಪೋಟಿ ಹೆಚ್ಚುತ್ತಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿಗಳು ವಿಡಿಯೋ ಕಾನ್ಫರೆನ್ಸ್ ನಡೆಸಿದ್ದು ಬಿಟ್ಟರೆ ಯಾವುದೇ ಕ್ರಮ ಕೈಗೊಂಡಿಲ್ಲ. ಮನೆ ಹಾನಿಗೀಡಾದವರಿಗೆ ತಕ್ಷಣದ ಪರಿಹಾರ 10 ಸಾವಿರ ರೂ. ತಲುಪಿಲ್ಲ. ಬೆಳೆ ಹಾನಿಗೆ ಸಂಬಂಧ ಪ್ರಾಥಮಿಕ ಮೌಲ್ಯಮಾಪನ ಮಾಡಿಲ್ಲ. ಪ್ರಾಣಹಾನಿ ಬಗ್ಗೆ ಗಮನಹರಿಸಿಲ್ಲ. ಮಳೆ ಅಥವಾ ಪ್ರವಾಹ ಪೀಡಿತ ಪ್ರದೇಶಗಳಿಗೆ ಸಚಿವರು ಭೇಟಿ ನೀಡಿಲ್ಲ ಎಂದರು. ಬರಪೀಡಿತ ಪ್ರದೇಶಗಳಲ್ಲಿ ಪರ್ಯಾಯ ಬೆಳೆಗಾಗಿ ರೈತರಿಗೆ ಬೀಜ ಮತ್ತು ರಸಗೊಬ್ಬರ ನೀಡಲು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಸಂಕಷ್ಟದಲ್ಲಿರುವಾಗ ಜನರನ್ನು ರಕ್ಷಿಸಲು ಮುಂದಾಗಿಲ್ಲ. ಹೀಗಾಗಿ, ಸಚಿವರು ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ, ಸಂಕಷ್ಟದಲ್ಲಿರುವವರಿಗೆ ಪರಿಹಾರ ಒದಗಿಸುವಂತೆ ಒತ್ತಾಯಿಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಂಪೂರ್ಣ ಮನೆ ಸಂಪೂರ್ಣ ಹಾನಿಗೊಳಗಾದವರಿಗೆ 5 ಲಕ್ಷ ಪರಿಹಾರ ನೀಡಲಾಗುತ್ತಿತ್ತು. ಅದನ್ನು ಮುಂದುವರಿಸಿ ತಕ್ಷಣದ ಪರಿಹಾರವಾಗಿ 10 ಲಕ್ಷ ರೂ. ನೀಡಬೇಕು ಎಂದರು.

ಇಂದು ಬೆಂಗಳೂರಲ್ಲಿ ದಸರಾ ಉನ್ನತ ಮಟ್ಟದ ಸಭೆ

ಅದ್ದೂರಿ ಆಚರಣೆ ಸಂಬಂಧ ಸಿಎಂ ಸಿದ್ದರಾಮಯ್ಯ ಸಮ್ಮುಖದಲ್ಲಿ ನಿರ್ಧಾರ

ಮೈಸೂರು,ಜು.30(ಎಸ್‌ಬಿಡಿ)–ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪೂರ್ವಭಾವಿಯಾಗಿ ಬೆಂಗಳೂರಿನಲ್ಲಿ ಸೋಮವಾರ



ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಯಲಿದೆ.

ವಿಧಾನಸೌಧದ ಕೊಠಡಿ ಸಂಖ್ಯೆ 334ರ ಸಮ್ಮೇಳನ ಸಭಾಂಗಣದಲ್ಲಿ ಸಂಜೆ 4 ಗಂಟೆಗೆ ಸಭೆ ನಡೆಯಲಿದ್ದು, ದಸರಾ ಆಚರಣೆ ಸಂಬಂಧ ಚರ್ಚಿಸಿ ಮಹತ್ವದ ನಿರ್ಣಯ ಕೈಗೊಳ್ಳಲಾಗುತ್ತದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಸಂಬಂಧಪಟ್ಟ ಸಚಿವರು, ಶಾಸಕರು ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಕಳೆದ ವರ್ಷ ಬಿಜೆಪಿ ಸರ್ಕಾರ ಮೈಸೂರು ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಿದ್ದು, ಈ ಬಾರಿಯ ಕಾಂಗ್ರೆಸ್ ಸರ್ಕಾರ ಹಿಂದಿಗಿಂತಲೂ ಅದ್ದೂರಿಯಾಗಿ ನಡೆಸಲು ಈಗಾಗಲೇ ನಿರ್ಧರಿಸಿದೆ ಎನ್ನಲಾಗಿದ್ದು, ಈ ನಿಟ್ಟಿನಲ್ಲಿ ರೂಪುರೇಷೆಗಳ ಬಗ್ಗೆ



ಚರ್ಚೆ ನಡೆಯಲಿದೆ. ದಸರಾ ಉದ್ಘಾಟಕರು, ಗಜಪಡೆ, ಜಂಬೂಸವಾರಿ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳ ಬಗ್ಗೆಯೂ ಪೂರ್ವಭಾವಿಯಾಗಿ ಚರ್ಚಿಸಲಾಗುತ್ತದೆ.

ಅದ್ದೂರಿ ಎಂದಿದ್ದಾರೆ ಸಚಿವರು: ಸರ್ಕಾರಕ್ಕೆ ಹಣಕಾಸಿನ ತೊಂದರೆ ಇದ್ದರೂ ಈ ಬಾರಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ನಿನ್ನೆಯಷ್ಟೇ ತಿಳಿಸಿದ್ದಾರೆ. ಹಣಕಾಸಿನ ತೊಂದರೆ ಇದೆ ನಿಜ. ಹಾಗಂತ ಹಬ್ಬ ಮಾಡದೇ ಇರಲು ಸಾಧ್ಯವಿಲ್ಲ. ನೆಂಟರಿಷ್ಟರನ್ನು ಕರೆದು ಅರ್ಧ ಊಟ ಮಾಡಿ ಎನ್ನಲು ಸಾಧ್ಯವೇ?. ಕಷ್ಟವೋ, ಸುಖವೋ ಮರಿಯಂತೂ ▶ 8ನೇ ಪುಟಕ್ಕೆ

ನಾಳೆ ಪ್ರಧಾನಿ ಮೋದಿಗೆ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ನವದೆಹಲಿ: ಆಗಸ್ಟ್ 1ರಂದು ಪ್ರಧಾನಿ ನರೇಂದ್ರ ಮೋದಿ ಪುಣೆಗೆ ಭೇಟಿ ನೀಡಲಿದ್ದಾರೆ. ಈ ವೇಳೆ ಮೆಟ್ರೋ ಮಾರ್ಗ ಉದ್ಘಾಟನೆ, ಪ್ರಧಾನಮಂತ್ರಿ ಆವಾಸ್ ಮನೆಗಳ ಹಸ್ತಾಂತರ ಸೇರಿದಂತೆ ಹಲವು ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ಅಂದು ಪ್ರಧಾನಿ



ಮೋದಿಗೆ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಲೋಕಮಾನ್ಯ ತಿಲಕರ ಪರಂಪರೆಯನ್ನು ಗೌರವಿಸಲು ತಿಲಕ್ ಸ್ಮಾರಕ ಮಂದಿರ ಟ್ರಸ್ಟ್ 1983ರಲ್ಲಿ ಪ್ರಶಸ್ತಿಯನ್ನು ಸ್ಥಾಪಿಸಿದೆ. ರಾಷ್ಟ್ರದ ಪ್ರಗತಿ ಮತ್ತು ಅಭಿವೃದ್ಧಿಗಾಗಿ ದುಡಿದ ಜನರಿಗೆ ಅವರ ಕೊಡುಗೆಯನ್ನು ಗಮನಾರ್ಹ ಮತ್ತು ಅಸಾಧಾರಣವೆಂದು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತದೆ. ಪ್ರತಿವರ್ಷ ಆ.1ರಂದು ಲೋಕಮಾನ್ಯ ತಿಲಕರ ಪುಣ್ಯತಿಥಿಯಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಇದೀಗ ಈ ಪ್ರಶಸ್ತಿಯನ್ನು ಸ್ವೀಕರಿಸಿರುವ 41ನೇ ಗಣ್ಯ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಮೋದಿ ಪಾತ್ರರಾಗಿದ್ದಾರೆ.

ಐಷಾರಾಮಿ ಕಾರುಗಳ ಕದ್ದಿದ್ದ ಖದೀಮನ ಸೆರೆ

● ಮೂರು ಕಾರು, ಚಿನ್ನಾಭರಣ ಸೇರಿ ಕೋಟಿ ರೂ. ಮೌಲ್ಯದ ವಸ್ತು ವಶ ● ಪೊಲೀಸರ ನೆರವಿಗೆ ಬಂದ ಜಿಪಿಎಸ್ ತಂತ್ರಜ್ಞಾನ

ಮೈಸೂರು,ಜು.30(ಆರ್‌ಕೆ)–ಮೂರು ಅತ್ಯಾಧುನಿಕ ಕಾರುಗಳ ಕಳ್ಳತನ ಪ್ರಕರಣವನ್ನು ಮೈಸೂರಿನ ವಿ.ವಿ.ಪುರಂ ಠಾಣೆ ಪೊಲೀಸರು ಭೇದಿಸಿದ್ದು, ಈ ಸಂಬಂಧ ಬೆಂಗಳೂರಿನ ಕುಖ್ಯಾತ ಕಳ್ಳನನ್ನು ಬಂಧಿಸಿದ್ದಾರೆ ಎಂದು ತಿಳಿದುಬಂದಿದೆ.

ವೃತ್ತಿನಿರತ ಕಾರು ಕಳ್ಳನಾಗಿರುವ ಈತ ಮನೆಗಳ್ಳತನವನ್ನೂ ಮಾಡಿದ್ದು, ಒಬ್ಬನೇ ದುಷ್ಕೃತ್ಯವೆಸಗುತ್ತಿದ್ದ. ಮೈಸೂರಿನಲ್ಲಿ ಕಳ್ಳತನ ಮಾಡಿದ್ದ ಕಾರುಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದ. ಈ ಬಗ್ಗೆ ಮಾಹಿತಿ ಪಡೆದ ಪೊಲೀಸರು ಮೂರು ಕಾರುಗಳು, ಚಿನ್ನಾಭರಣ ಹಾಗೂ ವಾಚ್‌ಗಳು ಸೇರಿದಂತೆ ಕೋಟಿ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆಂದು ಮೂಲಗಳು ಹೇಳಿವೆ.

ವಿ.ವಿ.ಪುರಂ ಹಾಗೂ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅತ್ಯಾಧುನಿಕ ಕಾರುಗಳ ಕಳ್ಳತನವಾಗಿದ್ದು ಪೊಲೀಸರ ನಿದ್ದೆಗೆಡಿಸಿತ್ತು. ಈ ಸಂಬಂಧ ತನಿಖೆಗೆ ರಚಿಸಲಾಗಿದ್ದ ವಿಶೇಷ ತಂಡ, ನಿರಂತರ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಈತ ಬೇರೆ ಕಡೆಯೂ ಕಾರು ಕಳ್ಳತನ ಮಾಡಿದ್ದಾನೆಯೇ ಎಂಬುದು ಮುಂದಿನ ತನಿಖೆಯಲ್ಲಿ ತಿಳಿಯಬೇಕಿದೆ.

ನಗರದ ಯಾದವಗಿರಿ 5ನೇ ಮುಖ್ಯರಸ್ತೆ ನಿವಾಸಿ, ಲೆಕ್ಕಪರಿಶೋಧಕ ಬಿ.ಸತೀಶ್ ರಾವ್ ಅವರು ಮನೆ ಮುಂದೆ ನಿಲ್ಲಿಸಿದ್ದ ಮಹೀಂದ್ರಾ ಎಕ್ಸ್‌ಯುವಿ 700(ಕೆಎ–09–ಎಂಜೆ–2677) ಕಾರು ಜುಲೈ 25ರಂದು ರಾತ್ರಿ ಕಳುವಾಗಿತ್ತು. ಈ ಸಂಬಂಧ ವಿ.ವಿ.ಪುರಂ ಪೊಲೀಸ್ ಠಾಣೆಗೆ ದೂರು ನೀಡಿದ ಸತೀಶ್ ರಾವ್, ಕಳುವಾದ ತಮ್ಮ ಕಾರಿನಲ್ಲಿ ಜಿಪಿಎಸ್ ಸೌಲಭ್ಯವಿದ್ದು ಅದರ ಸಂಚಾರದ ಬಗ್ಗೆ ಗೊತ್ತಾಗುತ್ತದೆ ಎಂದು ಮಾಹಿತಿ ನೀಡಿದ್ದರು.



ಜಿಪಿಎಸ್ ತಂತ್ರಜ್ಞಾನ ನೆರವು

ವೃತ್ತಿಪರ ಕಾರು ಕಳ್ಳ ಗುಜರಾತ್, ಮುಂಬೈ, ದೆಹಲಿ ಮತ್ತು ಕೋಲ್ಕತ್ತಾದಲ್ಲಿ ವ್ಯಾಪಕವಾದ ಗ್ರಾಹಕರ ಜಾಲವನ್ನು ಹೊಂದಿದ್ದ. ಕದ್ದ ಕಾರುಗಳನ್ನು ಜಾಲದಲ್ಲಿನ ಖರೀದಿದಾರರಿಗೆ ಕೂಡಲೇ ಮಾರಾಟ ಮಾಡುತ್ತಿದ್ದ. ಮೈಸೂರಿನಲ್ಲಿ ಕಳವು ಮಾಡಿದ್ದರಲ್ಲಿ 2 ಕಾರುಗಳನ್ನು ಹೊರ ರಾಜ್ಯದ ಗ್ರಾಹಕರಿಗೆ ಮಾರಾಟ ಮಾಡಿದ್ದ. 2 ತಿಂಗಳಿಂದ ಹಿಂದೆ ಬಿದ್ದಿದ್ದ ಪೊಲೀಸರಿಗೂ ಸಿಕ್ಕಿ ಹಾಕಿಕೊಳ್ಳದಂತೆ ಎಚ್ಚರ ವಹಿಸಿದ್ದ. ಟೆಕ್ಕಿಗಳನ್ನೂ ಮೀರಿಸುವಂತಹ ತಾಂತ್ರಿಕ ಪ್ರಾವೀಣ್ಯತೆ ಹಾಗೂ ಕಳ್ಳತನದಲ್ಲಿ ನಿಪುಣನಾಗಿದ್ದ. ಯಾವುದೇ ಕುರುಹುಗಳಿಲ್ಲದ ಕಾರಣದಿಂದ ಪೊಲೀಸರಿಗೂ ತನಿಖೆ ಸವಾಲಾಗಿತ್ತು. ಆದರೆ ಅಂತಿಮವಾಗಿ ಜಿಪಿಎಸ್ ತಂತ್ರಜ್ಞಾನದ ನೆರವಿನಿಂದ ನರಸಿಂಹರಾಜ ಉಪವಿಭಾಗದ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ಮತ್ತು ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರಪ್ರಸಾದ್ ಮಾರ್ಗದರ್ಶನದಲ್ಲಿ ವಿಜಯನಗರ ಇನ್ಸ್‌ಪೆಕ್ಟರ್ ರವಿಶಂಕರ್, ವಿ.ವಿ.ಪುರಂ ಇನ್ಸ್‌ಪೆಕ್ಟರ್ ಮೋಹನ್ ನೇತೃತ್ವದ ತಂಡ ಆರೋಪಿಯನ್ನು ಬಂಧಿಸಿದೆ ಎನ್ನಲಾಗಿದೆ.

ಜಿಪಿಎಸ್ ಸೌಲಭ್ಯದ ನೆರವು ಪಡೆದ ತನಿಖಾ ತಂಡ ಕಾರ್ಯಾಚರಣೆಯನ್ನು ಚುರುಕುಗೊಳಿಸಿತು. ಐಟಿ ವಿಭಾಗದ ಮೂಲಕ ಕಾರಿನ ಜಿಪಿಎಸ್ ಟ್ರ್ಯಾಕಿಂಗ್ ಮಾಡಲಾಯಿತು. ಇದರಿಂದ ದೊರೆತ ಮಾಹಿತಿ ಆಧಾರದಲ್ಲಿ ಕಳುವಾಗಿದ್ದ ಕಾರನ್ನು ಬೆನ್ನತ್ತಲು ಪ್ರಾರಂಭಿಸಿತು. ಕಾರಿನಲ್ಲಿರುವ ಜಿಪಿಎಸ್ ವ್ಯವಸ್ಥೆ ಬಗ್ಗೆ ಆರೋಪಿಗೆ ಮಾಹಿತಿ ಇಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡ ಪೊಲೀಸರು, ಐಟಿ ವಿಭಾಗದ ಮಾಹಿತಿ ಆಧರಿಸಿ ಸೂಕ್ಷ್ಮವಾಗಿ ಕಾರ್ಯಾಚರಣೆ ಮುಂದುವರೆಸಿದರು. ಬೆಂಗಳೂರಿನ ಒಂದು ಸ್ಥಳದಲ್ಲಿ ಕಾರನ್ನು ಸುತ್ತುವರೆದು ಆರೋಪಿಯನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾದರು.

ಗುಜರಾತ್‌ನಲ್ಲಿದ್ದ ಕಾರು

ಸರಸ್ವತಿಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನವಾಗಿದ್ದ ಕಾರೊಂದು ಗುಜರಾತ್‌ನಲ್ಲಿರುವುದನ್ನು ಪತ್ತೆಹಚ್ಚಿ, ವಶಪಡಿಸಿಕೊಳ್ಳಲಾಗಿದೆ. ನಿವೇದಿತಾನಗರ ನಿವಾಸಿ, ನಿರ್ಮಿತಿ ಕೇಂದ್ರದ ನಿವೃತ್ತ ನಿರ್ದೇಶಕ ಮಂಜುನಾಥ್ ಅವರ ಪುತ್ರ ನಿಖಿಲ್ ಮಂಜುನಾಥ್ ಅವರ ಟೊಯೊಟಾ ಇನ್ನೋವಾ(ಕೆಎ–09–ಎಂಸಿ–5199) ಕಾರನ್ನು ಮೇ 12ರಂದು ರಾತ್ರಿ ಕಳವು ಮಾಡಲಾಗಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಸರಸ್ವತಿಪುರಂ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ಮತ್ತು ಸಿಬ್ಬಂದಿ ತನಿಖೆ ನಡೆಸಿದಾಗ ಕಾರು ಗುಜರಾತ್‌ನಲ್ಲಿರುವುದು ಖಚಿತವಾಯಿತು. ಅಲ್ಲಿನ ಸೂರತ್ ಬಳಿ ವಾಪಿ ಪೊಲೀಸ್ ಠಾಣೆ ಪೊಲೀಸರ ನೆರವಿನೊಂದಿಗೆ ನಿರ್ಜನ ಪ್ರದೇಶದ ಗೋಡೌನ್‌ನಲ್ಲಿ ಅಡಗಿಸಿಟ್ಟಿದ್ದ ಕಾರನ್ನು ವಶಪಡಿಸಿಕೊಂಡು, ಮಾಲೀಕರಿಗೆ ಒಪ್ಪಿಸಿದ್ದಾರೆ ಎಂದು ತಿಳಿದು ಬಂದಿದೆ.

ಆತನನ್ನು ವಿಚಾರಣೆಗೊಳಪಡಿಸಿದಾಗ ಮೈಸೂರಿನಲ್ಲಿ ಮತ್ತೆರಡು ಕಾರುಗಳನ್ನು ಕಳ್ಳತನ ಮಾಡಿದ್ದು ತಿಳಿಯಿತು ಎನ್ನಲಾಗಿದೆ.

ಇನ್ನೆರಡು ಪ್ರಕರಣ: ವಿಜಯನಗರ 3ನೇ ಹಂತದ 80 ಅಡಿ ರಸ್ತೆಯಲ್ಲಿರುವ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರ ಮನೆ ಬಳಿ ನಿಲ್ಲಿಸಿದ್ದ ಮಲ್ಟಿ ಯುಟಿಲಿಟಿ ವೆಹಿಕಲ್(ಎಂಯುವಿ) ಹಾಗೂ ಹೋಟೆಲ್ ಉದ್ಯಮಿಯೊಬ್ಬರಿಗೆ ಸೇರಿದ ಫಾರ್ಚುನರ್ ಕಾರು ಕಳ್ಳತನವಾಗಿದ್ದವು.

ಜೂನ್ 5ರಂದು ಮಧ್ಯರಾತ್ರಿ 1 ಗಂಟೆ ಸಮಯದಲ್ಲಿ ಎಂ.ಶಿವಣ್ಣ ಅವರ ಟೊಯೊಟಾ ಇನ್ನೋವಾ ಕ್ರಿಸ್ಟಾ(ಕೆಎ–09–ಎಂಇ–6996) ವಾಹನವನ್ನು ಕಳವು ಮಾಡಿದ್ದು ಸಿಸಿಟಿವಿ ಕ್ಯಾಮರಾ ದೃಶ್ಯಾವಳಿಯಲ್ಲಿ ಸೆರೆಯಾಗಿತ್ತು. ಹೊಂಚು ಹಾಕಿದ್ದ ಕಳ್ಳ, ಹಿಂಬಾಗಿಲಿನಿಂದ ಮನೆಗೆ ಪ್ರವೇಶಿಸಿ ಹಾಲ್‌ನಲ್ಲಿದ್ದ ಕಾರಿನ ಕೀಯನ್ನು ತೆಗೆದುಕೊಂಡು ನಿರ್ಭಯವಾಗಿ ಕಾರು ಕದ್ದೊಯ್ದಿದ್ದ. ಅಲ್ಲಿಂದ ತೆರಳುವ ಮುನ್ನ ಕಾರಿನಲ್ಲಿದ್ದ ಗಣಪತಿ ವಿಗ್ರಹ ಹಾಗೂ ಕೆಲ ದಾಖಲೆಗಳನ್ನು ಕವರ್‌ನಲ್ಲಿ ಹಾಕಿ ವಾಹನ ನಿಲ್ಲಿಸಿದ್ದ ಜಾಗದಲ್ಲಿಟ್ಟು ಹೋಗಿದ್ದ. ಸಿಸಿಟಿವಿ ಕ್ಯಾಮರಾದ ದೃಶ್ಯಾವಳಿ ನೋಡಿದ ಬಳಿಕವಷ್ಟೇ ಮನೆಯ ಕಾಂಪೌಂಡ್ ಗೋಡೆ ಹಾರಿ, ಹಾಲ್‌ನಲ್ಲಿದ್ದ ಕೀ ತೆಗೆದುಕೊಂಡು ಕಾರು ಕಳ್ಳತನ ಮಾಡಿದ್ದು ಖಚಿತವಾಗಿತ್ತು. ಶಿವಣ್ಣ ಅವರ ಮನೆಯಿಂದ 100 ಮೀಟರ್ ದೂರದಲ್ಲಿರುವ ಹೋಟೆಲ್ ಉದ್ಯಮಿಯೊಬ್ಬರ ಕಾರು ಮೇ ತಿಂಗಳಲ್ಲಿ ಕಳುವಾಗಿತ್ತು. ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಬಾಸ್ : ಎಲ್ರೂ ಆಫೀಸ್‌ಗೆ ಸರಿಯಾದ ಸಮಯಕ್ಕೆ ಒಟ್ಟಿಗೆ ಬರ್ತಾರೆ ನೀನೊಬ್ಬ ಯಾಕೆ ಲೇಟು?

ನೌಕರ : ಗುಂಪಾಗಿ ಬರೋದು ಕುರಿಗಳು ಸಾರ್. ಸಿಂಹ ಯಾವಾಗ್ಲೂ ಸಿಂಗಲ್ಲಾಗೇ ಬರೋದು...

ಮೈಸೂರು ಮಿತ್ರ

ಸೋಮವಾರ, 31 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಮನುಷ್ಯನ ದೇಹದಲ್ಲಿ ಅತೀ ಭಾರವಾದದ್ದು ಅಹಂಕಾರ. ಆ ಭಾರವನ್ನು ಹೊತ್ತುಕೊಂಡವರು ಜೀವನದಲ್ಲಿ ಸೋಲುತ್ತಾರೆ, ಇಳಿಸಿದವರು ಗೆಲ್ಲುತ್ತಾರೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.

ನಿಮ್ಮ ಪತ್ರಗಳು

ರಾಜ ಋಷಿ ಹಾಗೂ ತತ್ವಜ್ಞಾನಿ ರಾಜ

ಮಾನ್ಯರೇ,

ನಿಮ್ಮ ನೆನ್ನೆಯ 'ಮೈಸೂರು ಮಿತ್ರ'ದ ವಾರದ ಮಿತ್ರ ಸಾಪ್ತಾಹಿಕ ಪುರವಣಿಯಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಕುರಿತ ಪುಸ್ತಕ ಪರಿಚಯದ ಲೇಖನವನ್ನು ಓದಿ ಸಂತೋಷವಾಯಿತು. ಡಾ. ಸುಧಾಮಣಿ ಅವರು ಬರೆದ ಈ ಪುಸ್ತಕದ ಹೆಸರು "ರಾಜರ್ಷಿ ಶ್ರೀ ಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್–ಜೀವನ ಮತ್ತು ಸಾಧನೆಗಳು (1919–1974)" ಇಷ್ಟು ಉದ್ದದ ಹೆಸರನ್ನು ಒಂದು ಪುಸ್ತಕಕ್ಕೆ ಕೊಟ್ಟಿದ್ದನ್ನು ನಾನು ಈ ಮೊದಲು ನೋಡಿರಲಿಲ್ಲ. ಅದೇನೂ ಒಂದು ವಾಕ್ಯವೋ ಎಂಬಂತೆ ಇತ್ತು. ಇರಲಿ.

ಹಿರಿಯ ಪತ್ರಕರ್ತ ಗೌರಿ ಸತ್ಯ ಅವರು ಈ ಪುಸ್ತಕವನ್ನು ತುಂಬ ವಿವರವಾಗಿ ವಿಮರ್ಶೆ ಮಾಡಿದ್ದಾರೆ. ಆದರೆ ನನಗೇಕೋ ಆ ಪುಸ್ತಕದ ಹೆಸರಿನ ಬಗ್ಗೆ ವಿಮರ್ಶೆ ಮಾಡಬೇಕು ಎನಿಸಿತು. ಅದಕ್ಕಾಗಿ ಈ ಪತ್ರ.

ಶ್ರೀ ಜಯಚಾಮರಾಜ ಒಡೆಯರ್ ಅವರ ದೊಡ್ಡಪ್ಪ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಮಹಾತ್ಮ ಗಾಂಧೀಜಿ ಅವರು 'ರಾಜರ್ಷಿ' ಎಂದು ಕರೆದಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ, ನಡೆ–ನುಡಿ, ಆಚಾರ–ವಿಚಾರ, ಅವರ ಜನಪರ ಆಡಳಿತ ಹಾಗೂ ಅವರು ಪ್ರಜೆಗಳ ದುಃಖ ದುಮ್ಮಾನಗಳಿಗೆ ಸ್ಪಂದಿಸುವ ರೀತಿ ಗಮನಿಸಿ ಅವರನ್ನು ಗಾಂಧೀಜಿ ರಾಜ ಋಷಿ ಎಂದು ಸಂಬೋಧಿಸಿ ಗೌರವಿಸಿದ್ದರು. ಪುರಾಣದಲ್ಲಿ ರಾಜ ಋಷಿ ಎಂದು ನಾವು ಕೇಳುವ ಒಂದು ಹೆಸರು ಎಂದರೆ, ಅದು ಜನಕ ಮಹಾರಾಜರು.

ಗ್ರೀಸ್ ದೇಶದ ತತ್ವಜ್ಞಾನಿ ಪ್ಲೇಟೋ ರಾಜರುಗಳು ಹೇಗಿರಬೇಕು ಎಂಬ ಬಗ್ಗೆ ಮಾತನಾಡುತ್ತಾರೆ. ಅವರ ಪ್ರಕಾರ ಒಬ್ಬ ಉತ್ತಮ ರಾಜ ಎಂದರೆ ತತ್ವಜ್ಞಾನಿ ರಾಜನಾಗಿರಬೇಕು (He must be a Philosopher-King). ರೋಮನ್ನರ ಚರಿತ್ರೆಯಲ್ಲಿ ನಾವು ಈ ರೀತಿಯ ಒಬ್ಬ ದೊರೆಯನ್ನು ಕಾಣುತ್ತೇವೆ. ಅವನ ಹೆಸರು ಮಾರ್ಕಸ್ ಅರಿಲಸ್ (Marcus Aurelius).

ಶ್ರೀ ಜಯಚಾಮರಾಜ ಒಡೆಯರ್ ಅವರು ದೊಡ್ಡ ವೇದಾಂತಿ, ವಿದ್ವಾಂಸ, ಸಂಗೀತಗಾರರು ಹಾಗೂ ತತ್ವಜ್ಞಾನಿಯಾಗಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆ ದೃಷ್ಟಿಯಿಂದ ಇವರನ್ನು ರಾಜ ಋಷಿ ಎಂದು ಪರಿಗಣಿಸುವುದಕ್ಕಿಂತ ಒಬ್ಬ ತತ್ವಜ್ಞಾನಿ ದೊರೆ (Philosopher-King) ಎಂದು ಹೇಳಬಹುದೇ?

ಅಂದ ಹಾಗೆ ನಮ್ಮ ರಾಷ್ಟ್ರದ ಎರಡನೇ ರಾಷ್ಟ್ರಪತಿ ತತ್ವಜ್ಞಾನಿ ಉಪನ್ಯಾಸಕರಾದ ಡಾ.ಎಸ್.ರಾಧಾಕೃಷ್ಣನ್ ಅವರನ್ನು ತತ್ವಜ್ಞಾನಿ ರಾಷ್ಟ್ರಾಧ್ಯಕ್ಷ (Philosopher President) ಎಂದು ಕರೆಯುತ್ತಿದ್ದರು.

ಮೈಸೂರು,
30.7.2023

–ಕೆ.ಬಿ.ಗಣಪತಿ,
ಹಿರಿಯ ಪತ್ರಕರ್ತರು,

ರಾಜ್ಯದಲ್ಲಿ ಹೆಚ್ಚುತ್ತಿರುವ ಡ್ರಗ್ಸ್ ಜಾಲ

ಮಾನ್ಯರೆ,

ರಾಜ್ಯದೆಲ್ಲೆಡೆ ಮಾದಕ ವಸ್ತುಗಳ ಜಾಲ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದು ಆರೋಗ್ಯಕರ ಸಮಾಜದ ಲಕ್ಷಣವಲ್ಲ. ಮಾದಕ ವಸ್ತುಗಳಿಗೆ ಜನರು ಮಾರುಹೋಗುತ್ತಿದ್ದಾರೆ. ಕೊಲೆ, ಅತ್ಯಾಚಾರ, ಹಲ್ಲೆ ಮತ್ತಿತರ ಹಿಂಸಾಕೃತ್ಯಗಳಿಗೆ ಮಾದಕ ಪದಾರ್ಥಗಳ ಬಳಕೆ ವ್ಯಾಪಕವಾಗಿರುವುದೇ ಕಾರಣ ಎಂಬುದು ಪೊಲೀಸರ ತನಿಖೆಯಲ್ಲಿ ಸಾಬೀತಾಗಿದೆ, ವಿದ್ಯಾರ್ಥಿಗಳು ಡ್ರಗ್ಸ್‌ಗೆ ಬಲಿಯಾಗಿ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ.

ಕೆಲವು ಕಾಲೇಜು ಬಳಿ ಮಾದಕ ವಸ್ತುಗಳು ಧಾರಾಳವಾಗಿ ದೊರಕುತ್ತಿವೆ, ಈ ಮೊದಲು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮಾದಕ ವ್ಯಸನಿಗಳಾಗಿರುತ್ತಿದ್ದರು, ಈಗ ವಿದ್ಯಾರ್ಥಿ ಸಮೂಹ ಮೊದಲ ಸ್ಥಾನದಲ್ಲಿದೆ. ಪೊಲೀಸ್ ಇಲಾಖೆಯ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ ಮಾದಕ ಜಾಲಕ್ಕೆ ಬಲಿಯಾದವರಲ್ಲಿ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪೊಲೀಸ್ ಇಲಾಖೆ ಜಾಗ್ರತೆ ವಹಿಸಿ ಕಾಲೇಜುಗಳ ಬಳಿ ನಡೆಯುತ್ತಿರುವ ಈ ದಂಧೆಯನ್ನು ಹತ್ತಿಕ್ಕಬೇಕಾಗಿ ಮನವಿ.

–ಪ್ರಿಯಾಂಕ ಹೆಚ್.ಎಸ್, ಪತ್ರಿಕೋದ್ಯಮ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.

ಮೂಢನಂಬಿಕೆ ಕೂಪದಿಂದ ಹೊರಬರಲಾರದೆ...!

ಮಾನ್ಯರೆ,

ನಮ್ಮ ದೇಶ ಜನಸಂಖ್ಯೆಯಲ್ಲಿ ಇದೀಗ ಪ್ರಥಮ ಸ್ಥಾನವನ್ನು ಗಿಟ್ಟಿಸಿಕೊಂಡಿದೆ. ಜೊತೆಗೆ ವಿಜ್ಞಾನ ತಂತ್ರಜ್ಞಾನದಲ್ಲಿ ಮಹತ್ತರವಾದ ಸಾಧನೆಯನ್ನು ಮಾಡುತ್ತಿದೆ. ಇದಕ್ಕೆ ಸ್ಪಷ್ಟ ಉದಾಹರಣೆ ಎಂದರೆ ನಮ್ಮ ದೇಶದ ವಿಜ್ಞಾನಿಗಳು ಉಡಾವಣೆ ಮಾಡಿದ ಚಂದ್ರಯಾನ–3 ಎಸ್‌ಎಲ್‌ವಿ ರಾಕೆಟ್, ಕೃಷಿಯಲ್ಲಿ, ತಂತ್ರಜ್ಞಾನದಲ್ಲಾಗಲಿ ಯಾವುದರಲ್ಲೂ ನಾವು ಯಾರಿಗೂ ಕಡಿಮೆ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದೇವೆ. ಆದರೂ ಎಲ್ಲೋ ಒಂದು ಕಡೆ ನಮ್ಮ ದೇಶ, ನಮ್ಮ ರಾಜ್ಯ ಕೈಜಾರುತ್ತಿದೆ. ಕೆಲವು ಅನಿಷ್ಟಗಳ ಕೂಪಕ್ಕೆ ಬಲಿಯಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ದೇಶ ಹಳ್ಳಿಗಳ ನಾಡು. ಕೃಷಿಯೇ ನಮ್ಮ ದೇಶದ ಬೆನ್ನೆಲುಬು. ಹೀಗಿರುವಾಗ ಹಳ್ಳಿಯ ಜನರನ್ನು ಸಂರಕ್ಷಿಸುವುದು ನಮ್ಮ ದೇಶ ಹಾಗೂ ರಾಜ್ಯದ ಕರ್ತವ್ಯವಾಗಿದೆ.

ನಮ್ಮ ದೇಶ ಪ್ರಗತಿ ಹೊಂದಿರುವ ರಾಷ್ಟ್ರವಾದರೂ ಹಳ್ಳಿಗಾಡುಗಳಲ್ಲಿ ಸಾಮಾಜಿಕ ಪಿಡುಗುಗಳು ಇನ್ನೂ ಜೀವಂತವಾಗಿದೆ. ಇವುಗಳನ್ನು ಬುಡ ಸಮೇತವಾಗಿ ಕಿತ್ತೊಗೆದಾಗ ಮಾತ್ರ ನಮ್ಮ ನಾಡು ಇನ್ನೂ ಉತ್ತುಂಗಕ್ಕೆ ಏರಲು ಸಾಧ್ಯ. ತುಮಕೂರಿನಲ್ಲಿ ನಡೆದ ಒಂದು ಹಸುಗೂಸಿನ ಸಾವು ನಿಜಕ್ಕೂ ಎಲ್ಲಾ ತಾಯಂದಿರ ಮನಕಲಕುತ್ತದೆ. ಗರ್ಭಿಣಿಯಾದ ತಾಯಿಯನ್ನು ಮೂಢನಂಬಿಕೆಯಿಂದ ಸೂತಕದ ನೆಪದಲ್ಲಿ ಊರ ಹೊರಗಿಟ್ಟ ಪ್ರಸಂಗ ತುಮಕೂರಿನ ಹಳ್ಳಿಯೊಂದರಲ್ಲಿ ನಡೆದಿರುವುದು ನಿಜಕ್ಕೂ ಖಂಡನೀಯ. ಮಹಿಳೆಯರು ದೇವತೆಗೆ ಸಮಾನರು ಎಂದು ಪೂಜಿಸುವ ನಮ್ಮ ನಾಡಿನಲ್ಲಿ ಇಂತಹ ಮೂಢನಂಬಿಕೆಯಿಂದಾಗಿ ಋತುಮತಿಯಾದಳು ಇಲ್ಲ ಗರ್ಭಿಣಿ ಆದಳು ಎಂಬ ಕ್ಷುಲ್ಲಕ ಕಾರಣಗಳಿಂದಾಗಿ ಮಹಿಳೆಯರನ್ನು ಊರಿನಿಂದಲೇ ಹೊರ ಹಾಕುವ ಕೆಟ್ಟ ಪದ್ಧತಿಯು ತುಮಕೂರಷ್ಟೇ ಅಲ್ಲ, ಇನ್ನು ಕೆಲವು ಹಳ್ಳಿಗಳಲ್ಲಿ ತಾಂಡವವಾಡುತ್ತಿರಬಹುದು. ಇಂತಹ ಪದ್ಧತಿಗಳು ಕಂಡಲ್ಲಿ ಸ್ಥಳೀಯ ಅಧಿಕಾರಿಗಳು, ಬುದ್ಧಿಜೀವಿಗಳು ಅವರಿಗೆ ಜ್ಞಾನದ ಅರಿವು ಮೂಡಿಸಿ ಅವರನ್ನು ಮೂಢನಂಬಿಕೆಯಿಂದ ಹೊರ ತರಬೇಕೆಂದು ಆಶಿಸುತ್ತೇನೆ. ಇದಷ್ಟೇ ಅಲ್ಲದೆ ಜಾತಿ ಪದ್ಧತಿ, ಲಿಂಗ ತಾರತಮ್ಯಗಳು ಕೆಲವೊಂದು ಹಳ್ಳಿಗಳಲ್ಲಿ ಇನ್ನೂ ಸಹ ತಾಂಡವವಾಡುತ್ತಿವೆ. ಇವುಗಳನ್ನು ತೊಲಗಿಸಬೇಕು.

ಇಂತಹ ಅನಿಷ್ಟಗಳನ್ನು ಬೆಂಕಿಯಲ್ಲಿ ಸುಟ್ಟು ಹಾಕಬೇಕು. ಅವುಗಳ ಕುರುಹು ಸಿಗದ ಹಾಗೆ ದಹಿಸಬೇಕು. ಇದು ಸ್ಥಳೀಯ ಮುಖಂಡರುಗಳ, ಅಧಿಕಾರಿಗಳ, ಅಲ್ಲಿಯ ಬುದ್ಧಿಜೀವಿಗಳ ಹೊಣೆಯಾಗಿರುತ್ತದೆ. 21ನೆಯ ಶತಮಾನದ ಕಾಲದಲ್ಲಿಯೂ ಇಂತಹ ಮೂಢನಂಬಿಕೆಗಳಿರುವುದು ನಿಜಕ್ಕೂ ನಮ್ಮ ದೇಶ ಹಾಗೂ ನಮ್ಮ ರಾಜ್ಯಕ್ಕೆ ಕಪ್ಪು ಚುಕ್ಕೆಯಾಗಿದೆ. ಇಂದಿನಿಂದಲೇ ಎಲ್ಲರೂ ಇಂತಹ ಅನಿಷ್ಟಗಳನ್ನು ತೊಲಗಿಸಲು ಒಗ್ಗೂಡೋಣ ಮುಂದಿನ ದಿನಗಳಲ್ಲಿ ಮೂಢನಂಬಿಕೆಗಳಿಂದ ಆಗುವ ಕೃತ್ಯಗಳನ್ನು ತಡೆಯೋಣ...!

– ಅನಿಲ್ ರಾಜ, ಸಹ ಶಿಕ್ಷಕ, ಕುಕ್ಕರಹಳ್ಳಿ, ಮೈಸೂರು

ಬೆರಗು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಸಮಾಜದಲ್ಲಿಂದು ಪ್ರಭಾವಕ್ಕೆ ಅಭಾವ; ಪ್ರಚೋದನೆಗಿದೆ ಸ್ಪಂದನೆ!



> "ಇಂದು ಗಾಳಿಗಿಂತ ವೇಗವಾಗಿ ಗಾಳಿಸುದ್ದಿ ಹರಡುತ್ತದೆ ಎಂದರೆ ತಪ್ಪಿಲ್ಲ. ಜನರು ಶುದ್ಧವಾದ ಆಮ್ಲಜನಕಕ್ಕೆ ಸ್ಪಂದಿಸುವುದಕ್ಕಿಂತ ವಿಷಾನಿಲಕ್ಕೆ ಹೆಚ್ಚು ಸ್ಪಂದಿಸುವ ರೀತಿ ತಮ್ಮ ಬದುಕನ್ನು ಸುಂದರಗೊಳಿಸುವ, ದೇಶವನ್ನು ಸುಸ್ಥಿತಿಯಲ್ಲಿ ಇಡುವ, ಜನರ ಮನೋಬಲವನ್ನು ಹೆಚ್ಚಿಸುವ, ದೇಶಪ್ರೇಮವನ್ನು ಬೆಳೆಸುವ ಒಳ್ಳೆಯ ಸುದ್ದಿಗಳಿಗೆ ಸ್ಪಂದಿಸದೆ, ಅವುಗಳ ಪ್ರಭಾವಕ್ಕೆ ಒಳಗಾಗದೆ ಭಾವರಹಿತರಾಗಿ ಇದ್ದುಬಿಡುವ ಜನ, ಒಂದು ಗಾಳಿಸುದ್ದಿಗೆ ಭಾವೋದ್ರೇಕರಾಗಿ ಮದ್ರಾಸ್‌ನಲ್ಲಿ ಮಳೆಯಾದರೆ ಮೈಸೂರಿನಲ್ಲಿ ನೆಗಡಿಯಾಯಿತು ಎನ್ನುವಂತೆ ಎಲ್ಲೋ ನಡೆದ ಒಂದು ಕ್ಷುಲ್ಲಕ ಘಟನೆಗೆ ಇನ್ನಿಲ್ಲದ ಪ್ರಚಾರ ನೀಡಿ, ಅದಕ್ಕೆ ಅಗತ್ಯಕ್ಕಿಂತ ಹೆಚ್ಚಾಗಿ ಪ್ರತಿಕ್ರಿಯಿಸಿಬಿಡುತ್ತಾರೆ. ಅನೇಕ ಸುದ್ದಿಗಳಿಗೆ ರಾಜಕೀಯ ಪ್ರಚೋದನೆಯೂ ಸಹ ಇರುತ್ತದೆ. ಇದರ ಅರಿವಿಲ್ಲದೆ ಜನರು ಯಾರದೋ ತಪ್ಪಿಗೆ ಮತ್ತ್ಯಾರಿಗೋ ಶಿಕ್ಷೆ ನೀಡಿಬಿಡುತ್ತಾರೆ. ಅನೇಕ ಕೋಮುಗಲಭೆಗಳ ಸಂದರ್ಭದಲ್ಲಿ ಯಾವುದೋ ರಾಜ್ಯದಲ್ಲಿ ನಡೆದ ದುಷ್ಕೃತ್ಯಕ್ಕೆ ಸಹೋದರರಂತೆ ಇದ್ದ ಅಕ್ಕಪಕ್ಕದವರೊಡನೆ ಹೊಡೆದಾಡಿಕೊಂಡ ಉದಾಹರಣೆಗಳಿವೆ.

'ಸರ್ವಜನಾಂಗದ ಶಾಂತಿಯ ತೋಟ' ಎಂದು ರಾಷ್ಟ್ರಕವಿ ಕುವೆಂಪುರವರು 'ಜೈ ಭಾರತ ಜನನಿಯ ತನುಜಾತೆ' ಎಂಬ ಗೀತೆಯಲ್ಲಿ ಭಾರತದ ಹಿರಿಮೆಯ ಜೊತೆಗೆ ಕರ್ನಾಟಕದ ಹೆಮ್ಮೆಯನ್ನು ಕೊಂಡಾಡಿದ್ದಾರೆ. ದೇಶ ಎಂದ ಮೇಲೆ ಕಾನೂನು ಏಕ ರೂಪವಾಗಿ ಇದ್ದರೂ ನಾಗರಿಕರ ಧರ್ಮ, ನಂಬಿಕೆ, ಆಚಾರ, ವಿಚಾರ, ಸಂಪ್ರದಾಯ, ಆಚರಣೆ ಭಿನ್ನಭಿನ್ನವಾಗಿಯೇ ಇರುತ್ತದೆ. ಇಡೀ ಪ್ರಪಂಚದಲ್ಲಿ ಭಾರತ ಇಂದು ತನ್ನದೇ ಆದ ಘನತೆಯನ್ನು ಹೊಂದಿದೆ, ಅನೇಕ ಕಾರಣಗಳಿಗೆ ಐತಿಹಾಸಿಕವಾಗಿಯೂ ಶ್ರೇಷ್ಠ ರಾಷ್ಟ್ರ ಎಂಬ ಖ್ಯಾತಿ ಇದೆ. ಕಲೆ, ಸಾಹಿತ್ಯ, ಸಂಸ್ಕೃತಿ ವಿಚಾರದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯಿಂದ ಜಗತ್ತಿನ ಮೂಲೆ ಮೂಲೆಗಳಿಂದ ಜನರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಜಾಗತೀಕರಣದ ಪ್ರಭಾವದಿಂದ ಇಂದು ಭಾರತ ಗಂಧದಕಡ್ಡಿಯಿಂದ ಹಿಡಿದು ಉಪಗ್ರಹ ಉಡಾಯಿಸುವ ರಾಕೆಟ್‌ವರೆಗೆ ಪ್ರಪಂಚದಾದ್ಯಂತ ಮನ್ನಣೆಯನ್ನು ಗಳಿಸಿದೆ. ದೇಶದಲ್ಲಿ ಅನೇಕ ಶ್ರೇಷ್ಠ ಸಾಹಿತಿಗಳು, ವಿಜ್ಞಾನಿಗಳು, ಉದ್ಯಮಿಗಳು ಅಷ್ಟೇ ಏಕೆ ರಾಜಕಾರಣಿಗಳು ಹೊರಹೊಮ್ಮಿದ್ದಾರೆ. ಇವರೆಲ್ಲರೂ ಶ್ರೇಷ್ಠರಾಗಲು ಕಾರಣ ತಮ್ಮ ಬದುಕಿನಲ್ಲಿ ಯಾರಾನ್ನೋ ರೋಲ್ ಮಾಡೆಲ್ ಆಗಿ ಸ್ವೀಕರಿಸಿ ಅವರ ತತ್ವ ಸಿದ್ಧಾಂತ, ಜೀವನ ಕ್ರಮದ ಪ್ರಭಾವಕ್ಕೆ ಒಳಗಾಗಿ ಸಾಧನೆ ಮಾಡಿದ್ದಾರೆ, ಅವರಾರು ಪ್ರಚೋದನೆಗೆ ಒಳಗಾಗಿ ಸಾಧನೆ ಮಾಡಿದವರಲ್ಲ.

ಅನೇಕ ಕ್ಷೇತ್ರಗಳಲ್ಲಿ ಜಾಗತಿಕ ಮನ್ನಣೆ ಹೊಂದಿರುವ ರಾಷ್ಟ್ರ ಭಯೋತ್ಪಾದನೆಯಲ್ಲೂ ಹಿಂದೆ ಬಿದ್ದಿಲ್ಲ ಎನ್ನಬಹುದು. ಶತ್ರು ರಾಷ್ಟ್ರಗಳ ಚಿತಾವಣೆಯಿಂದ ನಮ್ಮ ದೇಶದ ದೇಶದ್ರೋಹಿ ಯುವಕರೇ ಭಯೋತ್ಪಾದನೆ ಮಾಡುತ್ತಾ ದೇಶದ ಶಾಂತಿಯನ್ನು ಕದಡುತ್ತಾ ಭಾರತದ ಸುಭದ್ರತೆಗೆ, ಐಕ್ಯತೆಗೆ ಧಕ್ಕೆ ತರುತ್ತಿದ್ದಾರೆ. ಭಯೋತ್ಪಾದಕರು ಒಳ್ಳೆಯ ವ್ಯಕ್ತಿ ಹಾಗೂ ವಿಷಯಗಳಿಗೆ ಪ್ರಭಾವಿತರಾಗದೇ ಯಾವನೋ ಧರ್ಮಾಂಧನ ಪ್ರಚೋದನೆಯ ಮಾತುಗಳಿಗೆ ಮರುಳಾಗಿ, ರಾಷ್ಟ್ರಪ್ರೇಮದ ವಿಚಾರಕ್ಕೆ ಕುರುಡಾಗಿ, ಹಿರಿಯರ ಮಾತಿಗೆ ಕಿವುಡಾಗಿ ಅಮಾನವೀಯ ಕೃತ್ಯಗಳಲ್ಲಿ ಭಾಗಿಯಾಗಿ ಸಾರ್ವಜನಿಕರಲ್ಲಿ ಇನ್ನಿಲ್ಲದ ಭಯ ಹುಟ್ಟುಹಾಕುತ್ತಿದ್ದಾರೆ. ದೇಶದ ರಕ್ಷಣಾ ವ್ಯವಸ್ಥೆಯು ಹೊರಗಿನ ಶತೃಗಳ ಜೊತೆ ಹೋರಾಡಲು ಸದಾ ಸಿದ್ಧವಾಗಿದ್ದರೂ, ದೇಶದೊಳಗಿನ ಶತೃಗಳ ನಾಡಿಮಿಡಿತ ಅರಿತು ಸೆದೆಬಡಿಯಲು ಕಷ್ಟವಾಗುತ್ತಿದೆ. ಇಂತಹ ದೇಶದ್ರೋಹಿಗಳ ಕೃತ್ಯಗಳನ್ನು ನಿಯಂತ್ರಿಸಲು ಪ್ರತಿಯೊಬ್ಬ ಪ್ರಜೆಯೂ ಯೋಧನಂತೆ ಯೋಚಿಸಿ, ಕಾರ್ಯಪ್ರವೃತ್ತರಾದರೆ ಮಾತ್ರ ದೇಶ ಸುಭದ್ರವಾಗಿರಲು ಸಾಧ್ಯ.

ಪ್ರಜಾಪ್ರಭುತ್ವ ವ್ಯವಸ್ಥೆಯ ಅನುಷ್ಠಾನಕ್ಕೆ ಪ್ರಮುಖ ಮೂರು ಅಂಗಗಳಾದ ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗಗಳ ಜೊತೆಗೆ ಅಲಿಖಿತವಾಗಿ ಮಾಧ್ಯಮ ರಂಗವನ್ನು ನಾಲ್ಕನೇ ಅಂಗ ಎಂದು ಪರಿಗಣಿಸಲಾಗುತ್ತಿದೆ. ಇಂದು ಮುದ್ರಣ ಮಾಧ್ಯಮಕ್ಕಿಂತ ಎಲೆಕ್ಟ್ರಾನಿಕ್ ಮಾಧ್ಯಮ ಬಹಳ ಪ್ರಭಾವಶಾಲಿಯಾಗಿ ಕಾರ್ಯನಿರ್ವಹಿಸುತ್ತದೆ. ಸರ್ಕಾರದ ಯೋಜನೆಗಳ ಕುರಿತು, ಕಾರ್ಯತಂತ್ರಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವುದರ ಜೊತೆಗೆ ಸರ್ಕಾರದ ತಪ್ಪು ಹೆಜ್ಜೆಗಳನ್ನು ಪತ್ತೆ ಹಚ್ಚಿ ಸಾರ್ವಜನಿಕರಿಗೆ ಅವುಗಳ ಕುರಿತು ಜಾಗೃತಿ ಮೂಡಿಸುವಂತಹ ಸತ್ಕಾರ್ಯವನ್ನು ಸಹ ಇಂದು ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮ ಮಾಡುತ್ತಿವೆ. ಆದರೆ ಇತ್ತೀಚೆಗೆ ಐದನೇ ಅಂಗ ಇವುಗಳ ಒಟ್ಟಿಗೆ ಸೇರಿದೆ. ಅದೇ ಸಾಮಾಜಿಕ ಜಾಲತಾಣ ಎಂಬ ಅಂಗ. ಸಾಮಾಜಿಕ ಜಾಲತಾಣವು ಸಾಮಾಜಿಕ ಹಿತಾಸಕ್ತಿಯನ್ನು ಕಾಪಾಡುವುದಕ್ಕಿಂತಲೂ ಹುಳಿ ಹಿಂಡುವ ಕೆಲಸವನ್ನು ಮಾಡುತ್ತಿದೆ. ಮಾಹಿತಿ ತಂತ್ರಜ್ಞಾನದಲ್ಲಿ ದಾಪುಗಾಲು ಇಡುತ್ತಿರುವ ಈ ಯುಗದಲ್ಲಿ ಕ್ಷಣ ಮಾತ್ರದಲ್ಲೇ ಸುದ್ದಿಯು ಮನೆಮನಗಳಿಗೆ ಮುಟ್ಟಿಬಿಡುತ್ತದೆ.

ಸಾಮಾಜಿಕ ಜಾಲತಾಣದಲ್ಲಿ ಅನೇಕ ಉಪಯುಕ್ತ ಮಾಹಿತಿಗಳು, ಜನರನ್ನು ಜಾಗೃತಿಗೊಳಿಸಿ ದೇಶದ ಉತ್ತಮ ಪ್ರಜೆಗಳನ್ನಾಗಿಸುವ ಸಾಧುಸಂತರ, ಆಧ್ಯಾತ್ಮಿಕ ಗುರುಗಳ, ದಾರ್ಶನಿಕರ, ಸಾಹಿತಿಗಳ, ವಿಜ್ಞಾನಿಗಳ ನುಡಿಗಳು ಫೋಟೋ ಹಾಗೂ ವಿಡಿಯೋ ತುಣುಕುಗಳ ಮೂಲಕ ನಿತ್ಯ ಸಾವಿರಾರು ಅಪ್‌ಲೋಡ್ ಆಗುತ್ತಲೇ ಇರುತ್ತವೆ. ಇವುಗಳನ್ನು ಕೋಟ್ಯಾಂತರ ಜನ ವೀಕ್ಷಿಸುತ್ತಿರುತ್ತಾರೆ. ಆದರೆ ಇವುಗಳಿಂದ ಪ್ರಭಾವಿತರಾಗುವವರು ವಿರಳಾತಿವಿರಳ. ಸಮಾಜದ ಸ್ವಾಸ್ಥ್ಯ ವೃದ್ಧಿಸುವಂತಹ ಕಾರ್ಯಕ್ರಮಗಳು ಅನೇಕ ಟಿವಿ ವಾಹಿನಿಗಳಲ್ಲಿ ನಿತ್ಯ ಗಂಟೆಗಟ್ಟಲೇ ಪ್ರಸಾರವಾಗುತ್ತವೆ. ಅವುಗಳಿಂದ ಪ್ರಭಾವಿತರಾಗುವುದಿರಲಿ, ಅವುಗಳನ್ನು ವೀಕ್ಷಿಸುವ ಗೋಜಿಗೂ ಜನ ಹೋಗುತ್ತಿಲ್ಲ. ಆದರೆ ಒಂದು ಸಮಾಜದ ಸ್ವಾಸ್ಥ್ಯ ಕದಡುವಂತಹ ಒಂದು ಸುದ್ದಿಯನ್ನು ನ್ಯೂಸ್ ಚಾನೆಲ್ ಒಂದು ಪ್ರಸಾರ ಮಾಡಿತ್ತೆಂದರೆ ಹತ್ತು ನಿಮಿಷಗಳಲ್ಲಿ ಇಡೀ ದೇಶಕ್ಕೆ ಹರಡಿಬಿಟ್ಟಿರುತ್ತದೆ. ಜೊತೆಗೆ ಒಂದು ದೃಶ್ಯವನ್ನು ಜನರು ತಮಗೆ ತಿಳಿದ ಆಯಾಮದಲ್ಲಿ ವಿಶ್ಲೇಷಿಸಿ ಅದಕ್ಕೆ ಇಲ್ಲಸಲ್ಲದ ರೆಕ್ಕೆಪುಕ್ಕಗಳನ್ನು ಸೇರಿಸಿ ತಮ್ಮ ಅನಾರೋಗ್ಯಕರ ಕಮೆಂಟ್‌ಗಳನ್ನು ಹಾಕಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುತ್ತಾರೆ.

ಇಂದು ಗಾಳಿಗಿಂತ ವೇಗವಾಗಿ ಗಾಳಿಸುದ್ದಿ ಹರಡುತ್ತದೆ ಎಂದರೆ ತಪ್ಪಿಲ್ಲ. ಜನರು ಶುದ್ಧವಾದ ಆಮ್ಲಜನಕಕ್ಕೆ ಸ್ಪಂದಿಸುವುದಕ್ಕಿಂತ ವಿಷಾನಿಲಕ್ಕೆ ಹೆಚ್ಚು ಸ್ಪಂದಿಸುವ ರೀತಿ ತಮ್ಮ ಬದುಕನ್ನು ಸುಂದರಗೊಳಿಸುವ, ದೇಶವನ್ನು ಸುಸ್ಥಿತಿಯಲ್ಲಿ ಇಡುವ, ಜನರ ಮನೋಬಲವನ್ನು ಹೆಚ್ಚಿಸುವ, ದೇಶಪ್ರೇಮವನ್ನು ಬೆಳೆಸುವ ಒಳ್ಳೆಯ ಸುದ್ದಿಗಳಿಗೆ ಸ್ಪಂದಿಸದೆ, ಅವುಗಳ ಪ್ರಭಾವಕ್ಕೆ ಒಳಗಾಗದೆ ಭಾವರಹಿತರಾಗಿ ಇದ್ದುಬಿಡುವ ಜನ, ಒಂದು ಗಾಳಿ ಸುದ್ದಿಗೆ ಭಾವೋದ್ರೇಕರಾಗಿ ಮದ್ರಾಸ್‌ನಲ್ಲಿ ಮಳೆಯಾದರೆ ಮೈಸೂರಿನಲ್ಲಿ ನೆಗಡಿಯಾಯಿತು ಎನ್ನುವಂತೆ ಎಲ್ಲೋ ನಡೆದ ಒಂದು ಕ್ಷುಲ್ಲಕ ಘಟನೆಗೆ ಇನ್ನಿಲ್ಲದ ಪ್ರಚಾರ ನೀಡಿ, ಅದಕ್ಕೆ ಅಗತ್ಯಕ್ಕಿಂತ ಹೆಚ್ಚಾಗಿ ಪ್ರತಿಕ್ರಿಯಿಸಿಬಿಡುತ್ತಾರೆ. ಅನೇಕ ಸುದ್ದಿಗಳಿಗೆ ರಾಜಕೀಯ ಪ್ರಚೋದನೆಯೂ ಸಹ ಇರುತ್ತದೆ. ಇದರ ಅರಿವಿಲ್ಲದೆ ಜನರು ಯಾರದೋ ತಪ್ಪಿಗೆ ಮತ್ತ್ಯಾರಿಗೋ ಶಿಕ್ಷೆ ನೀಡಿಬಿಡುತ್ತಾರೆ. ಅನೇಕ ಕೋಮುಗಲಭೆಗಳ ಸಂದರ್ಭದಲ್ಲಿ ಯಾವುದೋ ರಾಜ್ಯದಲ್ಲಿ ನಡೆದ ದುಷ್ಕೃತ್ಯಕ್ಕೆ ಸಹೋದರರಂತೆ ಇದ್ದ ಅಕ್ಕಪಕ್ಕದವರೊಡನೆ ಹೊಡೆದಾಡಿಕೊಂಡ ಉದಾಹರಣೆಗಳಿವೆ.

ಸಮಾಜಘಾತುಕ ಕೃತ್ಯಗಳನ್ನು ಪ್ರಶ್ನಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಆದರೆ ಕಾನೂನನ್ನು ಕೈಗೆತ್ತಿಕೊಂಡು ಸೋಷಿಯಲ್ ಪೋಲಿಸಿಂಗ್ ಮಾಡುವ ಹಕ್ಕು ಯಾರಿಗೂ ಇಲ್ಲ. ಇದರಲ್ಲಿ ದೇಶದ ಪ್ರಜೆಗಳ ಮಾನಸಿಕ ಸ್ಥಿತಿಯು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮನುಷ್ಯರಿಗೆ ಜ್ಞಾನವೃದ್ಧಿಸುವ ವಿಚಾರಗಳಿಗಿಂತ ಗಾಸಿಪ್‌ನಿಂದ ಕೂಡಿದ ವಿಷಯಗಳ ಕುರಿತು ಒಂದು ಕೆಟ್ಟದಾದ ಆಸಕ್ತಿ ಇರುತ್ತದೆ. ಅಂತೆ ಕಂತೆಗಳಿಗೆ ಒತ್ತುಕೊಡುವಷ್ಟು ವಾಸ್ತವಕ್ಕೆ ಕೊಡುವುದಿಲ್ಲ. ಯಾವುದೇ ಸುದ್ದಿಯನ್ನು ನೋಡಿದಾಗ, ಕೇಳಿದಾಗ ಅದರ ಕನಿಷ್ಠ ಸತ್ಯಶೋಧನೆ ಮಾಡದೇ ಇದನ್ನು ಪ್ರಚಾರ ಮಾಡಿದ್ದು ನಾವೇ ಮೊದಲು ಎಂಬ ಕ್ರೆಡಿಟ್ ಪಡೆಯಲು ಸ್ಪರ್ಧೆಗೆ ಬಿದ್ದವರಂತೆ ಸುಳ್ಳು ಸುದ್ದಿಯನ್ನು ಹರಡಿ ಬಿಡುತ್ತಾರೆ. ಈ ಸುದ್ದಿಗಳನ್ನು ಬಕ ಪಕ್ಷಿಯಂತೆ ಕಾಯುತ್ತಿರುವ ಮಂದಿ ಇದೇ ಚಾಳಿಯನ್ನು ಮುಂದುವರಿಸಿ, ಹತ್ತು ಸಾರಿ ಹೇಳಿದ ಸುಳ್ಳು ಸತ್ಯವಾಗುತ್ತದೆ ಎನ್ನುವಂತೆ ಒಂದು ಸತ್ಯರೂಪ ವನ್ನು ಪಡೆದು ತನ್ನ ವಿರಾಟ್ ರೂಪವನ್ನು ಪ್ರದರ್ಶಿಸಿ, ಸಮಾಜದಲ್ಲಿ ತಾಂಡವವಾಡು ವಂತೆ ಮಾಡಿಬಿಡುತ್ತದೆ.

ಆಗುವುದಾದರೆ ಪ್ರಭಾವಕ್ಕೆ ಒಳಗಾಗಿ ಪ್ರಚೋ ದನೆಗಲ್ಲ. ಎಷ್ಟೋ ಸಮಾಜಘಾತುಕ ಸಂಘಸಂಸ್ಥೆ ಗಳು ಜನರಲ್ಲಿ ವಿಷಬೀಜ ಬಿತ್ತುವ ಕಾರ್ಯಗಳನ್ನು ಮಾಡುತ್ತವೆ. ಅವುಗಳಿಗೆ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸಿ, ಕಾನೂನು ರೀತಿಯ ಕ್ರಮಕ್ಕೆ ಮುಂದಾಗಬೇಕು. ಅದರ ಬದಲು ಕಾನೂನನ್ನು ಕೈಗೆತ್ತಿ ಕೊಳ್ಳಬಾರದು. ವಿವೇಚನೆಯಿಂದ ವರ್ತಿಸಿ, ಸೌಹಾರ್ದ ಯುತವಾಗಿ ಪ್ರತಿಭಟನೆ ನಡೆಸಿ ಬಗೆಹರಿಸಿಕೊಳ್ಳಬೇಕು. ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಅನೇಕ ಬಾರಿ ಇಲ್ಲಸಲ್ಲದ ಸುದ್ದಿಗಳನ್ನು ಹರಿಬಿಡುವುದು ಉಂಟು. ಅವುಗಳ ಸತ್ಯಾಸತ್ಯತೆಯನ್ನು ತಿಳಿದು ಪ್ರತಿಕ್ರಿಯಿಸಬೇಕು. ದೇಶದ ಐಕ್ಯತೆಗೆ ಧಕ್ಕೆ ತರುವಂತಹ ಕೆಲಸಗಳಾದಾಗ ಎಲ್ಲರೂ ಒಗ್ಗಟ್ಟಿನಿಂದ ಪ್ರತಿಭಟಿಸಬೇಕು. ಅದರಲ್ಲಿ ಜಾತಿ, ಧರ್ಮ, ರಾಜಕಾರಣವಿರಬಾರದು. ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೊಬೆಲ್ ಪುರಸ್ಕೃತರಾದ ನೆಲ್ಸನ್ ಮಂಡೇಲಾ ಅವರ ಮಾತುಗಳು ಇಲ್ಲಿ ಉಲ್ಲೇಖಯೋಗ್ಯವಾಗಿವೆ 'ಯಾರೂ ಹುಟ್ಟುತ್ತಲೇ ಇನ್ನೊಬ್ಬರನ್ನು ಚರ್ಮದ ಬಣ್ಣಕ್ಕಾಗಿಯೋ, ಹಿನ್ನೆಲೆಗಾಗಿಯೋ ಅಥವಾ ಧರ್ಮದ ಕಾರಣಕ್ಕಾಗಿಯೋ ದ್ವೇಷಿಸುವುದಿಲ್ಲ. ದ್ವೇಷ ಮಾಡಲು ಕಲಿಸಬಹುದಾದರೆ ಪ್ರೀತಿಸಲು ಸಹ ಕಲಿಸಬಹುದು. ಯಾಕೆಂದರೆ ಮನುಷ್ಯರ ಮನಸ್ಸುಗಳಿಗೆ ದ್ವೇಷಕ್ಕಿಂತಲೂ ಪ್ರೀತಿ ಹೆಚ್ಚು ಸ್ವಾಭಾವಿಕವಾದುದ್ದು." ಮುಂದಿನ ಪೀಳಿಗೆಗೆ ಶಾಂತಿಮಂತ್ರವನ್ನು ಬೋಧಿಸಬೇಕೆ ಹೊರತು ಪ್ರಚೋದಿಸಿ ಭ್ರಾಂತಿ ಹುಟ್ಟಿಸುವ ಪಾಠ ಮಾಡಬಾರದು. ದ್ವೇಷದ ಬೆಂಕಿ ಹಚ್ಚಲು ನಿಮಿಷ ಸಾಕು, ಆದರೆ ಪ್ರೀತಿಯ ಹೂತೆ ಹಚ್ಚಲು ವರುಷಗಳೇ ಬೇಕು. ಏನಂತೀರಿ?

ಪದ ತಾಂಬೂಲ:

ಪ್ರಭಾವಕ್ಕೆ ಒಳಗಾದವರು ಆಪ್ಯಾಯಮಾನಕರ
ಪ್ರಚೋದನೆಗೆ ಒಳಗಾದವರು ಅಪಾಯಕರ !

ಕರ್ನಾಟಕ, ಆಂಧ್ರದಲ್ಲಿ ಮಳೆಯಿಂದ ಬೆಳೆಗೆ ಹಾನಿ; ತಮಿಳುನಾಡಿನಲ್ಲಿ ಟೊಮೆಟೊ ಬೆಲೆ ಕೆಜಿಗೆ 200 ರೂ.!

ಚೆನ್ನೈ: ತಮಿಳುನಾಡಿನಲ್ಲಿ ದಿನೇ ದಿನೆ ಟೊಮೆಟೊ ಬೆಲೆ ಹೆಚ್ಚುತ್ತಿದ್ದು, ರಾಜಧಾನಿ ಚೆನ್ನೈ ಸೇರಿದಂತೆ ಹಲವು ಪಟ್ಟಣಗಳಲ್ಲಿ ಭಾನುವಾರ ಟೊಮೆಟೊ ದರ ಕಿಲೋಗೆ 200 ರೂ. ತಲುಪಿದೆ.



ಚೆನ್ನೈನ ಕೊಯಂಬೇಡು ಸಗಟು ಮಾರುಕಟ್ಟೆಯಲ್ಲಿ ಉತ್ಪನ್ನದ ಕೊರತೆಯಿಂದ ಟೊಮೆಟೊ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ.

ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಮಧ್ಯಂತರ ಮಳೆಯಿಂದ ಬೆಳೆ ನಷ್ಟವಾಗಿದೆ. ಇದರಿಂದ ತಮಿಳುನಾಡಿನಲ್ಲಿ ಟೊಮೆಟೊ ಕೊರತೆಯಾಗಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಟೊಮೆಟೊ ಬೆಲೆ ಏರಿಕೆಯಾಗಿದೆ ಎಂದು ಕೊಯಂಬೇಡು ಮಾರುಕಟ್ಟೆಯ ಸಗಟು ತರಕಾರಿ ವ್ಯಾಪಾರಿ ಪಿ.ವಿ.ಅಹ್ಮದ್ ಅವರು ಹೇಳಿದ್ದಾರೆ.

ಇನ್ನು ಒಂದು ವಾರದಲ್ಲಿ ಕೆಜಿಗೆ 250 ರೂ.ಗೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

ಈ ಮಾರುಕಟ್ಟೆ ಪ್ರಾರಂಭವಾದ ನಂತರ ಇದೇ ಮೊದಲ ಬಾರಿಗೆ ಟೊಮೆಟೊ ಬೆಲೆ ಕಿಲೋ ಗ್ರಾಂಗೆ 200 ರೂ.ಗೆ ತಲುಪಿದೆ. ಇದು ಸಾರ್ವಕಾಲಿಕ ದಾಖಲೆಯ ಬೆಲೆ ಏರಿಕೆ ಎಂದು ಕೊಯಂಬೇಡು ಸಗಟು ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಪಿ ಸುಕುಮಾರನ್ ಅವರು ಹೇಳಿದ್ದಾರೆ.

ನಾವು ದರ ಇಳಿಕೆಯಾಗಬಹುದು ಎಂದು ನಿರೀಕ್ಷಿಸಿದ್ದೇವೆ. ಆದರೆ ಹಠಾತ್ ಮಳೆಯಿಂದ ಬೆಳೆ ನಷ್ಟಕ್ಕೆ ಕಾರಣವಾಗಿದೆ ಮತ್ತು ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಬೆಳೆಯಲಾದ ಶೇಕಡಾ 50 ಕ್ಕಿಂತ ಹೆಚ್ಚು ಟೊಮೆಟೊ ಮಳೆಯಿಂದಾಗಿ ನಷ್ಟವಾಗಿದೆ ಎಂದಿದ್ದಾರೆ.

ನಾಳೆ ಗಣಪತಿ ಆಶ್ರಮದಲ್ಲಿ ಸತ್ಯನಾರಾಯಣ ಪೂಜೆ

ಮೈಸೂರು, ಜು.30– ಮೈಸೂರಿನ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಅಧಿಕ ಶ್ರಾವಣ ಮಾಸದ ಹುಣ್ಣಿಮೆ ಪ್ರಯುಕ್ತ ಆ.1ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ ಸತ್ಯನಾರಾಯಣ ವ್ರತ ಮತ್ತು ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ.



ಈವರೆಗೆ ಅನೇಕ ವರ್ಷಗಳಿಂದ ಆಶ್ರಮದ ವಿಶ್ವ ಪ್ರಾರ್ಥನಾ ಮಂದಿರದಲ್ಲಿ ಪ್ರತಿ ಹುಣ್ಣಿಮೆಯಂದು ಪವಮಾನ ಹೋಮ ನಡೆಯುತ್ತಿತ್ತು. ಇನ್ನು ಮುಂದೆ ಪ್ರತಿ ಹುಣ್ಣಿಮೆಗಳಂದು ಪವಮಾನ ಹೋಮದ ಜೊತೆಗೆ ಶ್ರೀ ಸತ್ಯ ನಾರಾಯಣ ವ್ರತ ಮತ್ತು ಪೂಜೆಯನ್ನೂ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಲಿದೆ. ಭಕ್ತಾದಿಗಳು ವ್ರತ ಮತ್ತು ಪೂಜೆಯನ್ನು ವೇದ ಪಂಡಿತರ ಸೂಚನೆಯಂತೆ ಸ್ವತಃ ಆಚರಣೆ ಮಾಡಲು ಅವಕಾಶ ಕಲ್ಪಿಸಲಾಗುವುದು. ಅಗತ್ಯ ಪೂಜಾ ದ್ರವ್ಯಗಳು ಆಶ್ರಮದಲ್ಲಿ ದೊರೆಯುತ್ತದೆ. ಮನೆಗಳಲ್ಲಿ ಸತ್ಯನಾರಾಯಣ ವ್ರತ, ಪೂಜೆ ಮಾಡಲು ಇಚ್ಛೆ ಇದ್ದರೂ ಅವಕಾಶವಾಗದವರಿಗೂ ಇದು ಸದವಕಾಶ. ಎಲ್ಲಾ ಭಕ್ತರಿಗೂ ಪ್ರಸಾದ ವ್ಯವಸ್ಥೆ ಇರಲಿದೆ. ಮಾಹಿತಿಗೆ ದೂ.ನಂ. 0821–2486486 ಸಂಪರ್ಕಿಸಬಹುದು.

ನಮ್ಮನ್ನು ನಾವು ಅರಿತುಕೊಳ್ಳಲು ಶಿಕ್ಷಣದಿಂದ ಮಾತ್ರ ಸಾಧ್ಯ

ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಅಭಿಮತ

ಮೈಸೂರು, ಜು.30(ಎಸ್‌ಪಿಎನ್)– ನಮ್ಮನ್ನು ನಾವು ಅರಿತು ಕೊಳ್ಳಬೇಕಾದರೆ ಮತ್ತು ತಿದ್ದಿಕೊಳ್ಳಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ತಿ.ನರಸೀಪುರ ಸಿದ್ದರಹಳ್ಳಿ ಪಾರಮಾರ್ಥಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕೃಷ್ಣಮೂರ್ತಿಪುರಂ ನಮನ ಕಲಾಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಅಭಿರುಚಿ ಬಳಗ, ಎನ್.ವಿ. ರಮೇಶ್ ಕಲಾ ಬಳಗ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗ ಹಾಗೂ ಬೆಂಗಳೂರಿನ ಮಿಡಿಯಾ ಐಕಾನ್‌ನ ವೈದ್ಯ ಲೋಕ ಮತ್ತು ಹೆಲ್ತ್ ವಿಷನ್ ಸಹಯೋಗದೊಂದಿಗೆ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಲಯ ಮಟ್ಟದ ಪ್ರಥಮ ಸಮ್ಮೇಳನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಎಲ್ಲರೂ ಭಾಷಾಭಿಮಾನ ಬೆಳೆಸಿಕೊಳ್ಳಬೇಕು. ನಾವು ಎಷ್ಟೇ ಭಾಷೆಗಳನ್ನೂ ಕಲಿತರೂ ಕರುಳುಬಳ್ಳಿಯಂತಿರುವ ಮಾತೃ ಭಾಷೆಯನ್ನು ಮರೆಯಬಾರದು. ಚುಟುಕು ಸಾಹಿತ್ಯವು ಅಧ್ಯಾತ್ಮ ಸಾಹಿತ್ಯಕ್ಕೆ ಪೂರಕವಾಗಿದೆ. ಚುಟುಕು ಸಾಹಿತ್ಯ ಸ್ವಲ್ಪವೇ ವಿಷಯಗಳಲ್ಲಿ ಸಂಪೂರ್ಣ ಅರ್ಥಕೊಡುವ ಸಾಹಿತ್ಯವಾಗಿದೆ ಎಂದು ತಿಳಿಸಿದರು.

ಕವಿಗಳು ಪ್ರಚಲಿತ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಗಮನ ಹರಿಸಿ ಸಾಹಿತ್ಯ ರಚಿಸಬೇಕು. ಅಲ್ಲದೇ ಕವಿಗಳು ಪ್ರಚಲಿತ ವಿದ್ಯಮಾನಕ್ಕೆ ಹೆಚ್ಚಿನ ಮಹತ್ವ ಕೊಡಬೇಕು. ಬರೆಯುವ ಕವನಗಳಲ್ಲಿ ನೈಜತೆ ಇರಬೇಕು. ನವ್ಯ, ನವೋದಯ ಸಾಹಿತ್ಯಕ್ಕೆ ಹೋಲಿಸಿದರೆ, ಈಗಿನ ಚುಟುಕು ಸಾಹಿತ್ಯದ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಈಗ ಚುಟುಕು ಬರೆಯುವವರ ಸಂಖ್ಯೆ ಹೆಚ್ಚಾಗುತ್ತಿದ್ದರು ಮತ್ತೊಂದೆಡೆ ಅಧ್ಯಯನದ ಕೊರತೆ ಎದ್ದು ಕಾಣುತ್ತಿದೆ' ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ರಾಜಶೇಖರ ಜಮದಂಡಿ, ಹಾಸನ ಕನ್ನಡ ಸಾಹಿತ್ಯ ಚುಟುಕು ಪರಿಷತ್ ಜಿಲ್ಲಾಧ್ಯಕ್ಷ ವಿರೂಪಾಕ್ಷ ಲಮಾಣಿ, ರಾಜ್ಯ ಸಂಚಾಲಕ ಕೃಷ್ಣ ಮೂರ್ತಿ ಕುಲಕರ್ಣಿ, ಅಭಿರುಚಿ ಬಳಗದ ಸಂಸ್ಥಾಪಕ ಅಧ್ಯಕ್ಷ ಎನ್.ವಿ ರಮೇಶ್, ವಿಶ್ರಾಂತ ಪ್ರಾಧ್ಯಾಪಕ ಎಚ್.ಜಿ ಕೃಷ್ಣಪ್ಪ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾರೇಗೌಡನ ಹಳ್ಳಿ, ಹಲೀಂ ನಗರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಜು.30(ಜಿಎ)–ಎಐಡಿಎಸ್‌ಓ, ಎಂಎಸ್‌ಸಿ ಮತ್ತು ವೈಟ್ ಸ್ಪಾರ್ಕ್ ಸಹಯೋಗದೊಂದಿಗೆ ನಗರದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಭಾನುವಾರ ನಡೆಸಲಾಯಿತು.

ಮೈಸೂರಿನ ಬನ್ನಿಮಂಟಪದ ಮಾರೇಗೌಡನ ಹಳ್ಳಿ ಹಾಗೂ ಹಲೀಂ ನಗರದಲ್ಲಿ ಉಚಿತ ವೈದ್ಯಕೀಯ ಶಿಬಿರವನ್ನು ಮಕ್ಕಳ ತಜ್ಞ ಹಾಗೂ ಎಂ.ಎಸ್.ಸಿ ಸಂಘಟನೆಯ ರಾಜ್ಯ ಸಹ ಕಾರ್ಯದರ್ಶಿ ಡಾ. ಶಿವಕುಮಾರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಸಮುದಾಯದ ಆರೋಗ್ಯ ಬಹಳ ಮುಖ್ಯ, ಎಷ್ಟೋ ಕಾಯಿಲೆಗಳು ಆರೋಗ್ಯ ಇಲಾಖೆ ಮತ್ತು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಈ ರೀತಿಯ ಉಚಿತ ಕ್ಯಾಂಪ್ ಮಾಡುವುದರ ಮೂಲಕ ಜನಗಳ ಹಲವಾರು ಸಮಸ್ಯೆಗಳು ಖಾಯಿಲೆಗಳು ನಮ್ಮ ಗಮನಕ್ಕೆ ಬರುತ್ತವೆ. ಇದನ್ನು ಸರ್ಕಾರಕ್ಕೆ ಮುಟ್ಟಿಸುವುದರ ಮೂಲಕ, ವೈದ್ಯಕೀಯ ತಜ್ಞರೊಂದಿಗೆ ಚರ್ಚಿಸುವುದರೊಂದಿಗೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ಎಂಎಸ್‌ಸಿ ಹಾಗೂ ವೈಟ್ ಸ್ಪಾರ್ಕ್ ವೇದಿಕೆಗಳು ರಾಜ್ಯದಾದ್ಯಂತ ಈ ರೀತಿಯ ಉಚಿತ ಕ್ಯಾಂಪ್‌ಗಳನ್ನು ಆಯೋಜಿಸುತ್ತಿದೆ. ಉತ್ತಮ ಆರೋಗ್ಯದಿಂದ ವಂಚಿತರಾಗಿರುವ ಬಡ ಜನಗಳಿಗಾಗಿ ಸೇವಾ ಮನೋಭಾವದಿಂದ ಉಚಿತ ವೈದ್ಯಕೀಯ ಶಿಬಿರ ಮಾಡಲಾಗುತ್ತಿದೆ. ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಶಿಬಿರದಲ್ಲಿ ಎಂಎಸ್‌ಸಿ ರಾಜ್ಯ ಖಜಾಂಚಿ ಡಾ. ರಾಜಶೇಖರ್, ವೈಟ್ ಸ್ಪಾರ್ಕ್‌ನ ಡಾ.ನೀರಜ್, ಜಿಲ್ಲಾ ಸಂಚಾಲಕಿ ಚಂದ್ರಕಲಾ, ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷ ಸುನೀಲ್, ಕಾರ್ಯದರ್ಶಿ ಸುಮಾ, ಶಿಬಿರದ ಸಂಘಟನಾಕಾರರಾದ ಬಸವ ರಾಜು, ನೀತು, ನಿತಿನ್, ಚೈತ್ರ ಸ್ವಾತಿ, ಹೇಮಾ ಹಾಗೂ ಶಿಬಿರದಲ್ಲಿ ಸ್ವಯಂ ಸೇವಕರಾಗಿ ಮೈಸೂರು ಮೆಡಿಕಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಕಾರ್ಪೊರೇಟರ್ ಲೋಕೇಶ್ ಪಿಯಾ ನೇತೃತ್ವದಲ್ಲಿ ಮೈಸೂರಿನ ಸವಿನೆನಪು ಫೌಂಡೇಶನ್ ಸೇವಾಶ್ರಮದಲ್ಲಿ ಆಯೋಜಿಸಲಾಗಿದ್ದ ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಅವರ 62ನೇ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಅವರು ಧ್ರುವನಾರಾಯಣ್ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಸೇವಾಶ್ರಮದ ಶಾಲಾ ಮಕ್ಕಳಿಗೆ ನೋಟ್ ಬುಕ್, ಪೆನ್, ಪುಸ್ತಕ ವಿತರಿಸಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಕೃಷ್ಣ ನಾಯಕ್, ವಸಂತ್, ಶೇಖರ್ ಆಶ್ರಮದ ಸಿಬ್ಬಂದಿ ಉಪಸ್ಥಿತರಿದ್ದರು.

ಪಿಎಫ್‌ಎ ಸಂಸ್ಥೆಯಲ್ಲಿ ನಾಯಿ, ಬೆಕ್ಕಿನ ಮರಿಗಳನ್ನು ದತ್ತು ಪಡೆದು ಸಾರ್ಥಕತೆ ಮೆರೆದ ಸಾರ್ವಜನಿಕರು



ಮೈಸೂರು, ಜು.30(ಜಿಎ)–ಅನಾಥ ನಾಯಿ ಮತ್ತು ಬೆಕ್ಕಿನ ಮರಿಗಳನ್ನು ದತ್ತು ಸ್ವೀಕರಿಸುವ ಮೂಲಕ ಪ್ರಾಣಿ ಪ್ರಿಯರು ಮೂಕ ಪ್ರಾಣಿಗಳಿಗೆ ಆಸರೆಯಾದರು.

ಮೈಸೂರಿನ ಬೋಗಾದಿಯಲ್ಲಿರುವ ಪೀಪಲ್ ಫಾರ್ ಅನಿಮಲ್(ಪಿಎಫ್‌ಎ) ಸಂಸ್ಥೆ ವತಿಯಿಂದ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ಅನಾಥ ಮತ್ತು ಸಂಸ್ಥೆ ಸಂರಕ್ಷಣೆ ಮಾಡಿರುವ ನಾಯಿ ಮತ್ತು ಬೆಕ್ಕಿನ ಮರಿಗಳ ದತ್ತು ಸ್ವೀಕಾರ ಮೇಳದಲ್ಲಿ ಮೈಸೂರಿನ ಹಲವಾರು ಪ್ರಾಣಿ ಪ್ರಿಯರು ಅನಾಥ ಮರಿಗಳನ್ನು ದತ್ತು ತೆಗೆದುಕೊಳ್ಳುವ ಮೂಲಕ ಸಾರ್ಥಕತೆ ಮೆರೆದಿದ್ದಾರೆ.

ಇಂದು ಬೆಳಗ್ಗೆ ಆರಂಭವಾದ ದತ್ತು ಸ್ವೀಕಾರ ಮೇಳಕ್ಕೆ 60 ಮಂದಿ ಭೇಟಿ ನೀಡಿದ್ದು, 6 ಬೆಕ್ಕಿನ ಮರಿ ಮತ್ತು 3 ನಾಯಿ ಮರಿಗಳನ್ನು ದತ್ತು ತೆಗೆದುಕೊಂಡಿದ್ದು, ಈ ವೇಳೆ ಸಾಕುಪ್ರಾಣಿಗಳ ಮಾಲೀಕತ್ವ, ಪ್ರಾಣಿಗಳ ಆರೋಗ್ಯ ಮತ್ತು ಪೋಷಣೆಯ ಕುರಿತು ಶೈಕ್ಷಣಿಕ ಸಂಪನ್ಮೂಲಗಳು ಮತ್ತು ಪಶುವೈದ್ಯರ ಬೆಂಬಲದ ಬಗ್ಗೆ ಮಾರ್ಗದರ್ಶನ ನೀಡಲಾಯಿತು.

ಈ ವೇಳೆ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಸವಿತಾ ನಾಗಭೂಷಣ್ ಮಾತನಾಡಿ, ಸಂಸ್ಥೆ ವತಿಯಿಂದ ನಿತ್ಯವೂ ದತ್ತು ಕಾರ್ಯಕ್ರಮ ನಡೆಯುತ್ತಿದೆ. ಆದರೆ, ಜನರಲ್ಲಿ ಇದರ ಬಗ್ಗೆ ಅರಿವು ಹೆಚ್ಚು ಮೂಡಿಸಲು ಈ ಬಾರೀ ಮೇಳ ಆಯೋಜಿಸಲಾಗಿದೆ. ನಾಳೆ(ಜು.31) ರಾಜವಂಶಸ್ಥರಾದ ತ್ರೀಷಿಕಾ ಕುಮಾರಿ ಒಡೆಯರ್ ಅವರು ನಾಯಿಗಳಿಗೆ ಆರೈಕೆ ಮಾಡಿ ಉಪಚರಿಸುವ ಆಶ್ರಯ ತಾಣವನ್ನು ಉದ್ಘಾಟಿಸುವರು ಅವರಿಗೆ ಪ್ರಾಣಿಗಳ ಮೇಲೆ ಬಹಳಷ್ಟು ಕಾಳಜಿ, ಪ್ರೀತಿ ಇದೆ ಎಂದು ತಿಳಿಸಿದರು.

ವಿಡಿಯೋ ವಿವಾದ: ನಾಳೆ ಉಡುಪಿಗೆ ಮುಖ್ಯಮಂತ್ರಿ ಭೇಟಿ

ಬೆಂಗಳೂರು, ಜು.30– ಉಡುಪಿ ಕಾಲೇಜಿನ ವಿದ್ಯಾರ್ಥಿನಿಯ ವಿಡಿಯೋ ಪ್ರಕರಣ ಕರಾವಳಿ ಜಿಲ್ಲೆಯಲ್ಲಿ ಹೊತ್ತಿ ಉರಿಯುತ್ತಿರುವಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಆ.1ರಂದು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಭೇಟಿ ನೀಡಿ ನೆರೆ, ಪ್ರವಾಹ ಪರಿಸ್ಥಿತಿಯ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ.

ಮುಖ್ಯವಾಗಿ ಕರಾವಳಿ ಜಿಲ್ಲೆಗಳಲ್ಲಿ ವಿವಾದಗಳ ಮೇಲೆ ವಿವಾದಗಳು ಸೃಷ್ಟಿಯಾಗಿ ಶಾಂತಿ ಸುವ್ಯವಸ್ಥೆಯನ್ನು ಭಂಗಗೊಳಿಸುವ ಯತ್ನಗಳು ನಡೆದಿವೆ. ಇದರಿಂದ ಸರ್ವ ಜನಾಂಗದ ಶಾಂತಿಯ ತೋಟದ ಆಶಯಗಳಿಗೆ ಧಕ್ಕೆ ಒದಗುತ್ತಿದೆ. ಈ ಹಿನ್ನೆಲೆಯಲ್ಲಿ ಸಿಎಂ ಭೇಟಿ ಮಹತ್ವ ಪಡೆದುಕೊಂಡಿದೆ.

ಪ್ರವಾಹ ಪೀಡಿತ ಪ್ರದೇಶಗಳಿಗೆ ಸಿಎಂ ಭೇಟಿ ಪೂರ್ವ ನಿಯೋಜಿತವಾಗಿದ್ದರೂ ಉಡುಪಿ ಕಾಲೇಜು ವಿಡಿಯೋ ಪ್ರಕರಣ ದಿನೇ ದಿನೆ ಹೊಸ ಹೊಸ ತಿರುವು ಪಡೆಯುತ್ತಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಭೇಟಿ ನೀಡುತ್ತಿದ್ದಾರೆ. ಬಿಜೆಪಿಯ ಸ್ಥಳೀಯ ಪ್ರತಿನಿಧಿಗಳು ವಿಡಿಯೋ ಪ್ರಕರಣವನ್ನು ಆಧಾರವಾಗಿಟ್ಟುಕೊಂಡು ಪ್ರತಿಭಟನೆ ನಡೆಸುತ್ತಿದ್ದಾರೆ. ಆ ಮೂಲಕ ಸರ್ಕಾರದ ವೈಫಲ್ಯ ಮತ್ತು ಕಾಂಗ್ರೆಸ್‌ನ್ನು ಹಿಂದೂ ವಿರೋಧಿ ಎಂದು ಬಿಂಬಿಸುವ ಪ್ರಯತ್ನಗಳು ನಡೆದಿವೆ. ಹೀಗಾಗಿ ವಿಡಿಯೋ ಪ್ರಕರಣ ರಾಜ್ಯಾದ್ಯಂತ ಸಂಚಲನ ಮೂಡಿಸಿದೆ.

ಲೋಕಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ ಬಿಜೆಪಿ ವಿಡಿಯೋ ಪ್ರಕರಣವನ್ನು ಮುನ್ನೆಲೆಗೆ ತಂದಿದೆ. ಪರಿಸ್ಥಿತಿಯನ್ನು ಹತೋಟಿಗೆ ತರಲು ಈಗಾಗಲೇ ಸರ್ಕಾರ ಸರ್ಕಸ್ ಮಾಡುತ್ತಿದೆ. ಪ್ರಕರಣದ ತನಿಖಾಧಿಕಾರಿಯನ್ನು ಬದಲಾಯಿಸಿದೆ. ಈ ಎಲ್ಲ ಬೆಳವಣಿಗೆಗಳ ನಡುವೆ ಆ.1 ರಂದು ಸಿಎಂ ಸಿದ್ದರಾಮಯ್ಯ ಭೇಟಿ ನೀಡಿ ಉಡುಪಿ, ದ.ಕನ್ನಡ ಜಿಲ್ಲಾ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ವಿಡಿಯೋ ಪ್ರಕರಣ, ಕಾನೂನು ಸುವ್ಯವಸ್ಥೆ ಕೂಡ ಚರ್ಚೆಯ ಪ್ರಮುಖ ವಸ್ತುಗಳಾಗಲಿವೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಸಂಚಾಲಕರಾಗಿ ನೇಮಕ

ಮೈಸೂರು, ಜು.30– ಮೈಸೂರಿನ ಶ್ರೀ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠ ಸೇವಾ ಟ್ರಸ್ಟ್ ರಾಜ್ಯ ಸಂಚಾಲಕರಾಗಿ ರಾಜ್ ಕಿರಣ್ ಅವರನ್ನು ನೇಮಕ ಮಾಡಲಾಗಿದೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.





ಮೈಸೂರು ತಾಲೂಕು ನಾಗನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಶ್ರೀಮತಿ ರಶ್ಮಿ ಹಾಗೂ ಉಪಾಧ್ಯಕ್ಷ ಮೋಹನ್ ಕುಮಾರ್ ಅವರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ನಾಗನಹಳ್ಳಿ ದಿನೇಶ್, ಗ್ರಾಪಂ ಮಾಜಿ ಅಧ್ಯಕ್ಷ ಭಾಸ್ಕರ್, ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷ ಮಾದೇಶ್, ಗ್ರಾಮದ ಮುಖಂಡರಾದ ಅರ್ಕೇಶ್, ಮಂಜು, ಕಳಸ್ತವಾಡಿ ಪುರಂದರ, ಯಶು, ನಾಗನಹಳ್ಳಿಯ ಯಾದವೇಂದ್ರ, ಸಿಂಗಪ್ಪ, ಕುಮಾರ್, ಕಿರಣ್, ರವಿಕಾಂತ್, ಲಕ್ಷ್ಮೀಪುರ ಕೃಷ್ಣಪ್ಪ, ರಾಮಣ್ಣ, ಶ್ಯಾದನಹಳ್ಳಿ ತಮ್ಮಯ್ಯ ಮತ್ತಿತರರು ಉಪಸ್ಥಿತರಿದ್ದರು.

ಮೆಲ್ಬೋರ್ನ್‌ನಲ್ಲಿ ಭಾರತೀಯ ಮೂಲದ ಬಾಲಕನ ಇರಿದು, ದರೋಡೆ

ಮೆಲ್ಬೋರ್ನ್, ಜು.30– ಮೆಲ್ಬೋರ್ನ್‌ನಲ್ಲಿ 16 ವರ್ಷದ ಭಾರತೀಯ ಮೂಲದ ಬಾಲಕನೊಬ್ಬನಿಗೆ ಆತನ ಹುಟ್ಟುಹಬ್ಬದ ದಿನವೇ ಚೂರಿಯಲ್ಲಿ ಇರಿದು ದರೋಡೆ ಮಾಡಲಾಗಿದೆ. ಟಾರ್ನೈಟ್ ಸಿಟಿಯಲ್ಲಿ ಈ ಘಟನೆ ನಡೆದಿದ್ದು, ರಿಯಾನ್ ಸಿಂಗ್ ತನ್ನ ಇಬ್ಬರು ಸ್ನೇಹಿತರ ಜೊತೆಗೆ ಬಾಸ್ಕೆಟ್ ಬಾಲ್ ಆಡುತ್ತಿದ್ದಾಗ ಗುಂಪೊಂದು ಅಪ್ರಚೋದಿತ ದಾಳಿ ನಡೆಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಸುಮಾರು ಏಳರಿಂದ ಎಂಟು ಜನರ ಗುಂಪು ಮೂವರ ಮೇಲೆ ದಾಳಿ ನಡೆಸಿತು. ಕ್ರಿಕೆಟಿಗನಾಗಬೇಕು ಎಂಬ ಹಂಬಲ ಹೊಂದಿದ್ದ ರಿಯಾನ್ ಸಿಂಗ್ ಪಕ್ಕೆಲುಬುಗಳು, ತೋಳುಗಳು, ಕೈ ಮತ್ತು ಬೆನ್ನಿಗೆ ಇರಿಯಲಾಗಿದ್ದು ಆತನ ತಲೆಯ ಹಿಂಭಾಗಕ್ಕೆ ಪೆಟ್ಟಾಗಿದೆ ಎಂದು ವರದಿ ತಿಳಿಸಿದೆ.

ಗಾಮನಹಳ್ಳಿ ಬಳಿ ನಾಲೆಗೆ ಕಾರು ಉರುಳಿ ನಾಲ್ವರ ಸಾವು ಪ್ರಕರಣ

ಮಿಮ್ಸ್‌ಗೆ ಸಚಿವದ್ವಯರ ಭೇಟಿ, ಕುಟುಂಬದವರಿಗೆ ಸಾಂತ್ವನ

●ವೈಯಕ್ತಿಕ ಪರಿಹಾರ ವಿತರಿಸಿದ ಸಚಿವರಾದ ಸಿಆರ್‌ಎಸ್, ಹೆಚ್‌ಸಿಎಂ ●ಮೃತರ ಸ್ವಗ್ರಾಮಗಳಲ್ಲಿ ಅಂತ್ಯಕ್ರಿಯೆ


ಮಹದೇವಮ್ಮ


ಮಮತಾ


ರೇಖಾ


ಸಂಜನಾ

ಮಂಡ್ಯ, ಜು.30– ಶ್ರೀರಂಗಪಟ್ಟಣ ತಾಲೂಕಿನ ಗಾಮನಹಳ್ಳಿ ಬಳಿ ಶನಿವಾರ ರಾತ್ರಿ ವಿ.ಸಿ.ನಾಲೆಗೆ ಕಾರು ಉರುಳಿ ನಾಲ್ವರು ಮಹಿಳೆಯರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ ಮಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ, ಮೃತ ಕುಟುಂಬದವರಿಗೆ ಸಾಂತ್ವನ ಹೇಳಿದರು. ಅಲ್ಲದೇ ಸಚಿವದ್ವಯರು ಪರಿಹಾರ ವಿತರಿಸಿದರು.

ಮೊನ್ನೆಯಷ್ಟೇ ಮಂಡ್ಯ ತಾಲೂಕಿನ ತಿಬ್ಬನಹಳ್ಳಿಯಲ್ಲಿ ನಾಲೆಗೆ ಕಾರು ಉರುಳಿ ವ್ಯಕ್ತಿಯೊಬ್ಬ ಸಾವನ್ನಪ್ಪಿದ ಘಟನೆ ಮಾಸುವ ಮುನ್ನವೇ ಕಳೆದ ಶನಿವಾರ ರಾತ್ರಿ ತಿ.ನರಸೀಪುರ ತಾಲೂಕಿನ ಗೊರವನಹಳ್ಳಿಯಿಂದ ನಾಗಮಂಗಲ ತಾಲೂಕಿನ ಆದಿಚುಂಚನಗಿರಿಗೆ ತೆರಳುತ್ತಿದ್ದ ಕಾರು ಶ್ರೀರಂಗಪಟ್ಟಣ ತಾಲೂಕಿನ ಗಾಮನಹಳ್ಳಿ ಬಳಿ ವಿ.ಸಿ. ನಾಲೆಗೆ ಉರುಳಿದ ಪರಿಣಾಮ ನಾಲ್ವರು ಮಹಿಳೆಯರು ಜಲಸಮಾಧಿಯಾಗಿದ್ದರು. ಅದೃಷ್ಟವಶಾತ್ ಕಾರು ಚಾಲಕ ಮನೋಜ್ ಪ್ರಾಣಾಪಾಯದಿಂದ ಪಾರಾಗಿದ್ದ. ಘಟನೆಯಲ್ಲಿ ಗಾಮನಹಳ್ಳಿ ಗ್ರಾಮದ ಮಹದೇವಮ್ಮ, ಗೊರವನಹಳ್ಳಿ ಗ್ರಾಮದ ಸಂಜನಾ, ಮಮತಾ, ರೇಖಾ ಮೃತಪಟ್ಟಿದ್ದರು. ಮೃತದೇಹಗಳನ್ನು ಮಂಡ್ಯದ ಮಿಮ್ಸ್‌ಗೆ ರವಾನಿಸಿ, ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಆಸ್ಪತ್ರೆಗೆ ಚಲುವರಾಯಸ್ವಾಮಿ ಭೇಟಿ: ಭಾನುವಾರ ಬೆಳಗ್ಗೆ ನಗರದ ಜಿಲ್ಲಾಸ್ಪತ್ರೆಗೆ ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭೇಟಿ ನೀಡಿ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ವೇಳೆ ಆಕ್ರಂದನ ಮುಗಿಲು ಮುಟ್ಟಿತ್ತು. ಬಳಿಕ ಘಟನೆಯಲ್ಲಿ ಸಾವನ್ನಪ್ಪಿದ ನಾಲ್ವರು ಕುಟುಂಬದ ಸದಸ್ಯರಿಗೆ ವೈಯಕ್ತಿಕವಾಗಿ ತಲಾ 50 ಸಾವಿರ ರೂ. ಪರಿಹಾರ ನೀಡಿದರು.

ಬಳಿಕ ಮಾತನಾಡಿದ ಸಚಿವ ಎನ್.ಚಲುವರಾಯಸ್ವಾಮಿ, ವಿ.ಸಿ.ನಾಲೆಗೆ ಕಾರು ಉರುಳಿ ಸಾವನ್ನಪ್ಪಿದವರ ಕುಟುಂಬದವರಿಗೆ ವೈಯಕ್ತಿಕವಾಗಿ 50 ಸಾವಿರ ನೀಡಿದ್ದೇನೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ 2 ಲಕ್ಷ ಪರಿಹಾರ ಬರಲಿದೆ. ನನ್ನ ಹಾಗೂ ಸಚಿವ ಹೆಚ್.ಸಿ.ಮಹದೇವಪ್ಪ ಅವರ ಮನವಿ ಮೇರೆಗೆ ಪರಿಹಾರ ನೀಡಲು ಸಿಎಂ ಸೂಚನೆ ನೀಡಿದ್ದಾರೆ. ಮಂಡ್ಯ ಹಾಗೂ ಮೈಸೂರು ಜಿಲ್ಲಾಧಿಕಾರಿಗಳು ಪರಿಹಾರಕ್ಕೆ ವರದಿ ನೀಡಲಿದ್ದಾರೆ ಎಂದರು.

ಈ ರೀತಿ ಘಟನೆ ಜರುಗಬಾರದಿತ್ತು. ನಿಜಕ್ಕೂ ಈ ದುರಂತದಲ್ಲಿ ನಾಲ್ವರು ಸಾವನ್ನಪ್ಪಿರುವುದು ದುಃಖಕರ. ಮೊನ್ನೆ ತಡೆಗೋಡೆ ಇಲ್ಲದೇ ಮಂಡ್ಯದ ತಿಬ್ಬನಹಳ್ಳಿ ಬಳಿ ಒಬ್ಬರು ಸಾವನ್ನಪ್ಪಿದ್ದರು. ಈ ಪ್ರಕರಣದಲ್ಲಿ ತಡೆಗೋಡೆ ಇದ್ದರೂ ನಾಲ್ವರು ಸಾವನ್ನಪ್ಪಿದ್ದಾರೆ. ಸಾವು ಎಂಬುದು ಹೇಗೆ ಬರುತ್ತೆ ಎಂದು ಗೊತ್ತಿಲ್ಲ. ಕೆಲವರು ಬಿಲ್ಡಿಂಗ್ ಮೇಲಿಂದ ಬಿದ್ದರೂ ಬದುಕುತ್ತಾರೆ. ಇನ್ನೂ ಕೆಲವರು ಎಡವಿ ಬಿದ್ದರೆ ಸಾವನ್ನಪ್ಪುತ್ತಾರೆ. ಸಾಂತ್ವನ ಹೇಳುವುದು ಸುಲಭ. ಆದರೆ ಆ ನೋವು ಕುಟುಂಬ ದವರಿಗೆ ಮಾತ್ರಗೊತ್ತಿರುತ್ತದೆ ಎಂದರು.

ವಿ.ಸಿ.ನಾಲೆ ವ್ಯಾಪ್ತಿ ಕೆಲ ಕಾಮಗಾರಿ ಬಾಕಿ ಇದೆ. ಈಗಾಗಲೇ ಕಾಮಗಾರಿಗಳು ಮಂಜೂರು ಆಗಿವೆ. ಆದರೆ ಇನ್ನೂ ಕೆಲಸಗಳು ಆಗಿಲ್ಲ. ವಿ.ಸಿ. ನಾಲೆಯಲ್ಲಿ ಎಲ್ಲೆಲ್ಲಿ ತಡೆಗೋಡೆ ಇಲ್ಲ. ಆಕ್ಸಿಡೆಂಟ್ ಸ್ಪಾಟ್‌ಗಳು ಯಾವುದು ಎಂದು ಸರ್ವೇ ಮಾಡುತ್ತೇವೆ. ಬಳಿಕ ಎಲ್ಲಾ ಕಡೆ ಸೂಕ್ತ ಭದ್ರತೆ ಕೈಗೊಳ್ಳುತ್ತೇವೆ. ಜನರು ಸಹ ಜಾಗರೂಕತೆಯಿಂದ ವಾಹನಗಳನ್ನು ಚಾಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಸಚಿವ ಮಹದೇವಪ್ಪ ಭೇಟಿ: ಮಂಡ್ಯ ಜಿಲ್ಲಾಸ್ಪತ್ರೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ಬಳಿಕ ತಲಾ 50 ಸಾವಿರ ವೈಯಕ್ತಿಕ ಪರಿಹಾರ ನೀಡಿದರು.

ಸಚಿವ ಮಹದೇವಪ್ಪ ಮಾತನಾಡಿ, ಮೃತರ ಪೈಕಿ ಮೂವರು ತಿ.ನರಸೀಪುರದವರಾಗಿದ್ದು, ಘಟನೆ ನಡೆದ ತಕ್ಷಣ ಮಂಡ್ಯ ಶಾಸಕರು ಹಾಗೂ ಅಧಿಕಾರಿಗಳು ಭೇಟಿ ನೀಡಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ಘಟನೆ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ್ದು, ಮುಖ್ಯಮಂತ್ರಿಗಳು 2 ಲಕ್ಷ ರೂ. ಪರಿಹಾರ ನೀಡುವುದಾಗಿ ತಿಳಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ, ಗಣಿಗ ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಮಿಮ್ಸ್ ನಿರ್ದೇಶಕ ಡಾ.ಮಹೇಂದ್ರ ಉಪಸ್ಥಿತರಿದ್ದರು.



ಶ್ರೀರಂಗಪಟ್ಟಣದ ಗಾಮನಹಳ್ಳಿ ಬಳಿ ನಾಲೆಗೆ ಕಾರು ಉರುಳಿ ನಾಲ್ವರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಸ್ವಗ್ರಾಮಗಳಲ್ಲಿ ಮೃತರ ಅಂತ್ಯಕ್ರಿಯೆ

ನಾಲೆಗೆ ಕಾರು ಬಿದ್ದು ಸಾವನ್ನಪ್ಪಿದ ನಾಲ್ವರ ಅಂತ್ಯಕ್ರಿಯೆ ಮೃತರ ಸ್ವಗ್ರಾಮಗಳಲ್ಲಿ ನೆರವೇರಿತು. ಸಾವನ್ನಪ್ಪಿದ ನಾಲ್ವರ ಪೈಕಿ ಮೈಸೂರು ಜಿಲ್ಲೆ ಟಿ.ನರಸೀಪುರ ತಾಲೂಕಿನ ಗೊರವನಹಳ್ಳಿಯಲ್ಲಿ ಬಾಲಕಿ ಸಂಜನಾ, ರೇಖಾ, ಮಮತಾರ ಅಂತ್ಯಕ್ರಿಯೆಯಾದರೆ, ಶ್ರೀರಂಗಪಟ್ಟಣ ತಾಲೂಕಿನ ಗಾಮನಹಳ್ಳಿಯಲ್ಲಿ ಮಹದೇವಮ್ಮ ಅವರ ಅಂತ್ಯಕ್ರಿಯೆ ನೆರವೇರಿತು. ಈ ವೇಳೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

ಎಕ್ಸ್‌ಪ್ರೆಸ್ ವೇ ಸರ್ವೀಸ್ ರಸ್ತೆಯಲ್ಲಿ ವ್ಹೀಲಿಂಗ್: ನಾಲ್ವರಿಗೆ ಗಾಯ

ಮದ್ದೂರು, ಜು.30– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸರ್ವೀಸ್ ರಸ್ತೆಯಲ್ಲಿ ಬೈಕ್‌ಗಳಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ನಾಲ್ವರು ಯುವಕರು ಇನ್ನೋವಾ ಕಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುವ ಸೈಯದ್ ಅಸ್ಲಂ ಪುತ್ರ ಸೈಯದ್ ಶೋಹೆಬ್ (22), ಪಟ್ಟಣದ ಹೊಳೆ ಬೀದಿ ನಿವಾಸಿ ಸೈಯದ್ ಅಹಮದ್ ಪುತ್ರ ಸೈಯದ್ ಮಜದ್ (23), ತಾಲೂಕಿನ ಬೆಸಗರಹಳ್ಳಿಯ ರಿಯನ್ ಬೇಗ್ ಪುತ್ರ ಅಯೂಬ್ ಬೇಗ್ (23), ಬೆಳತೂರಿನ ಅಪ್ರಾಪ್ತ ವಯಸ್ಸಿನ ಯುವಕ ಗಾಯಗೊಂಡವರು.

ರಸ್ತೆ ಉಬ್ಬಿನ ಬಳಿ ಡಿಕ್ಕಿ: ಪಟ್ಟಣದ ಶಿಂಷಾ ನದಿ ಬಳಿಯ ಮೈಸೂರು – ಬೆಂಗಳೂರು ಎಕ್ಸ್‌ಪ್ರೆಸ್ ವೇ ಸರ್ವಿಸ್ ರಸ್ತೆಯಲ್ಲಿ ರಸ್ತೆ ಉಬ್ಬು ನಿರ್ಮಾಣ ಮಾಡಿದ್ದು, ಬೆಂಗಳೂರಿಗೆ ಹೋಗುತ್ತಿದ್ದ ಇನ್ನೋವಾ ಕಾರಿನ ಚಾಲಕ ರಸ್ತೆ ಉಬ್ಬಿನ ಬಳಿ ಸಹಜವಾಗಿಯೇ ಕಾರನ್ನು ನಿಧಾನ ಮಾಡಿದ್ದಾನೆ. ಹಿಂದೆಯೇ ಪಟ್ಟಣದ ಕೊಲ್ಲಿ ವೃತ್ತದಿಂದ ನಿಡಘಟ್ಟದ ಕಡೆಗೆ ಎರಡು ಬೈಕ್‌ಗಳಲ್ಲಿ ವೇಗವಾಗಿ ವ್ಹೀಲಿಂಗ್ ಮಾಡಿಕೊಂಡು ಬರುತ್ತಿದ್ದ ಸವಾರರು ಇನ್ನೋವಾ ಕಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದಾರೆ.

ಈ ವೇಳೆ ಬೈಕ್‌ನಲ್ಲಿದ್ದ ನಾಲ್ವರು ಯುವಕರ ತಲೆ, ಮುಖ ಹಾಗೂ ಕೈ ಕಾಲುಗಳಿಗೆ ತೀವ್ರ ಪೆಟ್ಟಾಗಿದೆ. ಘಟನೆಯಲ್ಲಿ ಬೈಕ್ ಹಾಗೂ ಕಾರಿನ ಹಿಂಬದಿ ಸಂಪೂರ್ಣ ಜಖಂಗೊಂಡಿವೆ. ತಕ್ಷಣ ವಾಹನ ಸವಾರರು ಹಾಗೂ ಸ್ಥಳೀಯರು ಗಾಯಗೊಂಡವರನ್ನು ಮದ್ದೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಸ್ಥಳಕ್ಕೆ ಮದ್ದೂರು ಸಂಚಾರಿ ಪೊಲೀಸರು ಭೇಟಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಪ್ರತಿಯೊಬ್ಬ ವಿದ್ಯಾರ್ಥಿಗೂ ಕಂಪ್ಯೂಟರ್ ಜ್ಞಾನ ಅಗತ್ಯ



ಕೆ.ಆರ್.ಪೇಟೆ, ಜು.30– ಇಂದಿನ ಆಧುನಿಕ ಯುಗದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಕಂಪ್ಯೂಟರ್ ಜ್ಞಾನದ ಅಗತ್ಯವಿದೆ ಎಂದು ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಂಪ್ಯೂಟರ್ ಲ್ಯಾಬ್ ಉದ್ಘಾಟನೆ ಹಾಗೂ ಮೈಸೂರು ವಿವಿಯಲ್ಲಿ ನಡೆದ ಅಂತರ ಕಾಲೇಜು ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಮಕ್ಕಳಿಗೆ ಪ್ರಾಥಮಿಕ ಶಾಲೆ ಹಂತದಿಂದಲೇ ಕಂಪ್ಯೂಟರ್ ಶಿಕ್ಷಣ ಅತ್ಯವಶ್ಯಕ. ಮಕ್ಕಳು ಪಠ್ಯೇತರ ವಿಷಯಗಳನ್ನು ಕಲಿಯುವುದರಿಂದಲೂ ಹೆಚ್ಚು ಫಲಿತಾಂಶ ಪಡೆಯಲು ಸಾಧ್ಯ ಎಂದ ಅವರು, ಈ ಬಾರಿ ಶೇ.100ರಷ್ಟು ಫಲಿತಾಂಶ ಪಡೆಯಲು ಈಗಿನಿಂದಲೇ ಸಿದ್ಧರಾಗಬೇಕು. ಇದಕ್ಕಾಗಿ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಕಾಲೇಜಿನ ಅಧ್ಯಾಪಕರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅವರ ಶ್ರಮಕ್ಕೆ ತಕ್ಕ ಪ್ರತಿಫಲ ನೀಡಬೇಕು ಎಂದು ಸಲಹೆ ನೀಡಿದರು.

ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಹೆಚ್.ಟಿ.ಲೋಕೇಶ್ ಮಾತನಾಡಿ, ಕಾಲೇಜಿಗೆ ಶೇ.80ರಷ್ಟು ಮಕ್ಕಳು ಗ್ರಾಮೀಣ ಪ್ರದೇಶದಿಂದ ಬರಲಿದ್ದು, ಅವರಿಗೆ ಕಂಪ್ಯೂಟರ್ ಶಿಕ್ಷಣ ನೀಡಲು ಕಾಲೇಜಿನಲ್ಲಿ ಹೊಸದಾಗಿ ಕಂಪ್ಯೂಟರ್ ಕೊಠಡಿ ಉದ್ಘಾಟಿಸಿದ್ದೇವೆ. ಇಲ್ಲಿನ ಅಧ್ಯಾಪಕರು ಖಾಸಗಿ ಕಾಲೇಜು ಮಕ್ಕಳಿಗೆ ಪೈಪೋಟಿ ನೀಡುವ ನಿಟ್ಟಿನಲ್ಲಿ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು. ಇದಕ್ಕೆ ವಿದ್ಯಾರ್ಥಿಗಳ ಪೋಷಕರು ಕೈ ಜೋಡಿಸಬೇಕು. ನಿರಂತರ ಅಭ್ಯಾಸ, ಏಕಾಗ್ರತೆ, ಕಠಿಣ ಪರಿಶ್ರಮದಿಂದ ಉತ್ತಮ ಫಲಿತಾಂಶ ಪಡೆದುಕೊಳ್ಳಲು ಸಾಧ್ಯ ಎಂದರು.

ಈ ವೇಳೆ ಪುರಸಭಾ ಮಾಜಿ ಸದಸ್ಯ ಕೆ.ಎಸ್.ರಾಜೇಶ್, ಪ್ರಾಂಶುಪಾಲ ಡಾ.ಟಿ.ಎಂ. ದೇವರಾಜು, ಸಹಾಯಕ ಪ್ರಾಧ್ಯಾಪಕ ಡಿ.ನಂಜುಂಡಯ್ಯ, ಸಹಾಯಕ ಪ್ರಾಧ್ಯಾಪಕ ರೀನಾ, ಕಾರ್ಯಕ್ರಮಾಧಿಕಾರಿ ಶಶಿಕುಮಾರ್, ಸಂಚಾಲಕರು ಧನಂಜಯ್, ಮಂಜುನಾಥ್, ಗಾಯಿತ್ರಮ್ಮ, ಶ್ಯಾಮ್, ಜೆಡಿಎಸ್ ಮುಖಂಡ ಹೆಚ್.ಜೆ. ಬಾಬು ಸೇರಿದಂತೆ ಮತ್ತಿತರರಿದ್ದರು.


ಮದ್ದೂರಲ್ಲಿ ಕಾಡಾನೆ ಹಿಂಡು ಪ್ರತ್ಯಕ್ಷ



ಮದ್ದೂರು, ಜು.30– ಪಟ್ಟಣದ ಪ್ರಸಿದ್ಧ ಶ್ರೀ ಹೊಳೆ ಆಂಜನೇಯಸ್ವಾಮಿ ದೇವಾಲಯದ ಬಳಿ ಭಾನುವಾರ ಮುಂಜಾನೆ ಕಾಡಾನೆಗಳ ಹಿಂಡು ಪ್ರತ್ಯಕ್ಷವಾಗಿವೆ.

ಪಟ್ಟಣದ ಶಿಂಷಾ ನದಿ ಪಕ್ಕದಲ್ಲಿರುವ ಹೊಳೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ನಾಲ್ಕು ಆನೆಗಳು ಪ್ರತ್ಯಕ್ಷವಾಗಿದ್ದು, ಪೂಜೆಗೆ ಬಂದ ಭಕ್ತರು ಕಾಡಾನೆ ಹಿಂಡು ಕಂಡು ಗಾಬರಿಯಾಗಿದ್ದು, ತಕ್ಷಣ ದೇವಾಲಯ ಆಡಳಿತ ಮಂಡಳಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ರಾಮನಗರ ಜಿಲ್ಲೆ ತೆಂಗನಕಲ್ಲು ಅರಣ್ಯ ಪ್ರದೇಶದಿಂದ ರಾತ್ರಿ ವೇಳೆ 4 ಆನೆಗಳು ದಾರಿತಪ್ಪಿ ಬಂದಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಮೊಕ್ಕಾಂ ಹೂಡಿದ್ದು, ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಮತ್ತು ಮದ್ದೂರು ಪಟ್ಟಣದ ಕಡೆಗೆ ಚದುರದಂತೆ ಕಾವಲು ಕಾಯುತ್ತಿದ್ದಾರೆ.

ದೊಡ್ಡಸ್ವಾಮಿಗೌಡ ನಿಧನ



ಕೆ.ಆರ್.ಪೇಟೆ, ಜು.30– ತಾಲೂಕಿನ ಗಂಜಿಗೆರೆ ಕೊಪ್ಪಲು ಗ್ರಾಮದ ಹಿರಿಯ ಮುಖಂಡ ದೊಡ್ಡಸ್ವಾಮಿಗೌಡ (75) ಭಾನುವಾರ ನಿಧನರಾದರು.

ಮೃತರು ಪತ್ನಿ ಕಾಮಾಕ್ಷಮ್ಮ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಹುಟ್ಟೂರಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜು.30– 2023–24ನೇ ಸಾಲಿನಲ್ಲಿ ಟಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, ಪ.ಜಾತಿ, ಪ.ವರ್ಗ ಮತ್ತು ಇತರೆ ವಿವಿಧ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ www.bcwd.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ bcwd.hostel@karnataka.gov.in ಅಥವಾ ದೂ.ಸಂ: 8050370005 ಅನ್ನು ಸಂಪರ್ಕಿಸಬಹುದು ಎಂದು ಟಿ.ನರಸೀಪುರ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಸೈನಿಕ ಮಂಡಳಿಯಲ್ಲಿ ಕಾರ್ಯ ನಿರ್ವಹಿಸಲು ಅರ್ಜಿ ಆಹ್ವಾನ

ಮೈಸೂರು, ಜು.30– ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ ಮಾಜಿ ಸೈನಿಕರು ಜಿಲ್ಲಾ ಸೈನಿಕ ಮಂಡಳಿಯಲ್ಲಿ ವೇತನ–ಭತ್ಯೆ ರಹಿತವಾಗಿ ಸ್ವ–ಇಚ್ಛೆಯಿಂದ ಕಾರ್ಯನಿರ್ವಹಿಸಲು ಆಸಕ್ತಿಯುಳ್ಳವರು ಆ.2ರೊಳಗಾಗಿ ಸ್ವವಿವರಗಳನ್ನೊಳಗೊಂಡ ಅರ್ಜಿಯನ್ನು ಮೈಸೂರಿನ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಉಪನಿರ್ದೇಶಕರ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ದೂರವಾಣಿ ಸಂಖ್ಯೆ 08212–2425240 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ಮಹಿಳೆ ಶವ ಪತ್ತೆ

ಮೈಸೂರು, ಜು.30– ಜುಲೈ 27ರಂದು ಎಂಎನ್‌ಜಿಟಿ–ನಾಗನಹಳ್ಳಿ ರೈಲ್ವೆ ನಿಲ್ದಾಣಗಳ ನಡುವೆ ರೈಲು ಹಳಿಯ ಪಕ್ಕದಲ್ಲಿ ಸುಮಾರು 30ರಿಂದ 35 ವರ್ಷದ ಅಪರಿಚಿತ ಮಹಿಳೆ ಮೃತಪಟ್ಟಿದ್ದು, ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸುಮಾರು 5 ಅಡಿ ಎತ್ತರವಿರುವ ಈ ಮಹಿಳೆಯು ಗೋಧಿ ಮೈಬಣ್ಣ, ದುಂಡು ಮುಖ ಹಾಗೂ ಸದೃಢ ಮೈಕಟ್ಟು ಹೊಂದಿದ್ದಾರೆ. ತಲೆಯಲ್ಲಿ ಎರಡೂವರೆ ಇಂಚು ಕಪ್ಪು ಕೂದಲು ಇದ್ದು, ಕಪ್ಪು ಬಣ್ಣದ ನೈಕಿ ಕಂಪನಿಯ ತುಂಬು ತೋಳಿನ ಜರ್ಕಿನ್, ಸಿಮೆಂಟ್ ಬಣ್ಣದ ರೌಂಡ್ ನೆಕ್ ಇರುವ ಅರ್ಧ ತೋಳಿನ ಟೀ ಶರ್ಟ್ ಹಾಗೂ ಕಪ್ಪು ನೀಲಿ ಮಿಶ್ರಿತ ಲೆಗ್ಗಿನ್ಸ್ ಪ್ಯಾಂಟ್ ಧರಿಸಿರುತ್ತಾರೆ. ಎಡಗೈನಲ್ಲಿ ಹಾರ್ಟ್ ಸಿಂಬಲ್ ಇದ್ದು, ಇಂಗ್ಲೀಷ್‌ನಲ್ಲಿ #GOWTHU, #MANASA ಎಂಬ ಹಚ್ಚೆ ಗುರುತು ಇರುತ್ತದೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ.ಸಂ.0821–2516579 ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಕೇಶ್ವರ ದೇಗುಲ ಅಭಿವೃದ್ಧಿಗೆ ಅನುದಾನ


ಶ್ರೀರಂಗಪಟ್ಟಣ ತಾಲೂಕಿನ ಹೊಸ ಆನಂದೂರು ಗ್ರಾಮದ ಶ್ರೀಅರ್ಕೇಶ್ವರ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 2 ಲಕ್ಷ ರೂ. ಅನುದಾನದ ಚೆಕ್ ವಿತರಿಸಲಾಯಿತು. ಈ ವೇಳೆ ದೇವಸ್ಥಾನ ಸಮಿತಿ ಅಧ್ಯಕ್ಷ ನಂದೀಶ್, ಯೋಜನೆ ಜಿಲ್ಲಾ ನಿರ್ದೇಶಕ ಮುರಳೀಧರ್, ತಾಲೂಕು ಯೋಜನಾಧಿಕಾರಿ ಯಶವಂತ್, ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ವಿಶ್ವೇಶ್ವರ, ಕಾರ್ಯದರ್ಶಿ ಮಹೇಂದ್ರಸ್ವಾಮಿ, ಜನಜಾಗೃತಿ ವೇದಿಕೆ ಸದಸ್ಯರಾದ ಉಮಾ, ವಾಸು, ವಲಯ ಮೇಲ್ವಿಚಾರಕ ಕುಪ್ಪುಸ್ವಾಮಿ, ವಿಶ್ವನಾಥ್, ಸೇವಾಪ್ರತಿನಿಧಿ ನಾಗಮ್ಮ, ಮುಖಂಡರಾದ ಮಹದೇವೇಗೌಡ, ಜಯರಾಮು, ಗ್ರಾಪಂ ಸದಸ್ಯ ನಾಗಾಚಾರಿ, ಕೃಷ್ಣ ದೇವಸ್ಥಾನ ಸಮಿತಿ ಸದಸ್ಯರಾದ ಮಂಜುನಾಥ್, ರವಿಕುಮಾರ್, ಸತೀಶ್, ರಾಜ್‌ಕುಮಾರ್, ಬೆಟ್ಟೇಗೌಡ ದಿನೇಶ್ ಹಾಜರಿದ್ದರು.

ವಿದ್ಯಾರ್ಥಿಗಳು ಆರೋಗ್ಯದ ಬಗ್ಗೆ ಕಾಳಜಿ ವಹಿಸಿ



ಪಾಂಡವಪುರ, ಜು.30– ವಿದ್ಯಾರ್ಥಿಗಳು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಆರೋಗ್ಯ ನಿರೀಕ್ಷಣಾಧಿಕಾರಿ ವಿಜಯ್‌ಕುಮಾರ್ ತಿಳಿಸಿದರು.

ಪಟ್ಟಣದ ವಿಜಯ ಬಿ.ಎಡ್ ಕಾಲೇಜಿನಲ್ಲಿ ಆರೋಗ್ಯ ಇಲಾಖೆ, ನೆಹರು ಯುವ ಕೇಂದ್ರದ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯ ಇಲಾಖೆ ವಿದ್ಯಾರ್ಥಿಗಳು, ಸಾರ್ವಜನಿಕರಿಗಾಗಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕ್ಷಯ, ಕುಷ್ಠ, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ, ಆಯುಷ್ಮಾನ್ ಭಾರತ್ ಹೆಲ್ತ್ ಅಕೌಂಟ್, ಇಂದ್ರ ಧನುಷ್ ಲಸಿಕೆ ಸೇರಿದಂತೆ ಇನ್ನಿತರ ಸೌಲಭ್ಯಗಳು, ರೋಗಗಳ ಬಗ್ಗೆ ಅರಿವು ಮೂಡಿಸುತ್ತಿದೆ. ಇವುಗಳನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳು ಜಾಗೃತರಾಗಬೇಕು. ಜತೆಗೆ ಇತರರ ಆರೋಗ್ಯದ ಬಗ್ಗೆ ಯೂ ಕಾಳಜಿ ವಹಿಸಬೇಕು ಎಂದರು. ಬಿ.ಎಡ್ ಕಾಲೇಜಿನ ಪ್ರಾಂಶುಪಾಲ ಸೋಮಶೇಖರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಆರೋಗ್ಯ ನಿರೀಕ್ಷಣಾಧಿಕಾರಿ ಪುಟ್ಟಸ್ವಾಮಿ, ಆರೋಗ್ಯ ಶಿಕ್ಷಣಾಧಿಕಾರಿ ಶ್ವೇತಲತಾ, ಹಿರಿಯ ಆರೋಗ್ಯ ಸುರಕ್ಷಾಧಿಕಾರಿ ದಮಯಂತಿ ಸೇರಿದಂತೆ ಹಲವರಿದ್ದರು.

ಪಠ್ಯಪುಸ್ತಕಗಳ ಪರಿಷ್ಕರಣೆ ಶೈಕ್ಷಣಿಕ ಪ್ರಗತಿಗೆ ಸಹಕಾರಿ

ಚಾಮರಾಜನಗರ, ಜು.30– ಶಿಕ್ಷಣ ನೀತಿ ಮತ್ತು ಕಾಲ ಕಾಲಕ್ಕೆ ನಡೆಯುವ ಪಠ್ಯ, ಪುಸ್ತಕಗಳ ಪರಿಷ್ಕರಣೆ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಿದೆ. ಉಪನ್ಯಾಸಕರು ಇದನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಉತ್ತಮ ಫಲಿತಾಂಶ ನೀಡಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥಪ್ರಸನ್ನ ತಿಳಿಸಿದರು.

ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಭೌತಶಾಸ್ತ್ರ ಉಪನ್ಯಾಸಕರ ವೇದಿಕೆಯಿಂದ ನಡೆದ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪದವಿ ಪೂರ್ವ ಶಿಕ್ಷಣ ಬಹಳ ಉತ್ಕೃಷ್ಟವಾಗಿದೆ. ಮೈಸೂರು ಜಿಲ್ಲೆಗೆ ಹೋಲಿಸಿದರೆ ಜಿಲ್ಲೆ ಫಲಿತಾಂಶದಲ್ಲಿ ಬಹಳ ಮುಂದಿದೆ. ಇಲ್ಲಿನ ಉಪನ್ಯಾಸಕರ ವೃಂದ ಹಾಗೂ ಪ್ರಾಂಶುಪಾಲರು ಸೇವೆ ಅನನ್ಯ ಎಂದರು.

ಎಂಐಟಿ ಇಂಜಿನಿಯರಿಂಗ್ ಕಾಲೇಜಿನ ಸಂಸ್ಥಾಪಕ ಹಾಗೂ ಪ್ರಾಂಶುಪಾಲ ಡಾ.ವೈ.ಟಿ. ಕೃಷ್ಣೇಗೌಡ ಮಾತನಾಡಿದರು. ಇದೇ ವೇಳೆ ದ್ವಿತೀಯ ಪಿಯುಸಿ ಭೌತಶಾಸ್ತ್ರದಲ್ಲಿ ಹೆಚ್ಚು ಅಂಕ ಪಡೆದ 31 ವಿದ್ಯಾರ್ಥಿಗಳನ್ನು ಹಾಗೂ ಭೌತಶಾಸ್ತ್ರ ವಿಷಯದಲ್ಲಿ ಶೇ. 100ರಷ್ಟು ಫಲಿತಾಂಶ ನೀಡಿದ 16 ಮಂದಿ ಉಪನ್ಯಾಸಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಂಡ್ಯದ ಅಭಿನವ ಭಾರತಿ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಶಿವಮೂರ್ತಿ, ಜಿಲ್ಲಾ ಭೌತಶಾಸ್ತ್ರ ಉಪನ್ಯಾಸಕರ ವೇದಿಕೆ ಅಧ್ಯಕ್ಷ ಟಿ.ಮಧು, ಗೌರವಾಧ್ಯಕ್ಷ ಸಿದ್ದಪ್ಪ, ಕಾರ್ಯದರ್ಶಿ ಷಡಕ್ಷರಸ್ವಾಮಿ, ಬಸವರಾಜಪ್ಪ, ಸೋಮಣ್ಣ, ನರೇಂದ್ರನಾಥ್ ಇತರರಿದ್ದರು.

ರೈತರು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಿ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕರೆ



ನಾಗಮಂಗಲ, ಜು.30– ರೈತರು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ಆರ್ಥಿಕವಾಗಿ ಸದೃಢರಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕರೆ ನೀಡಿದರು.

ತಾಲೂಕಿನ ಚೌಡೇನಹಳ್ಳಿ ಗ್ರಾಮದ ಬಳಿಯ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ಓಡಿಪಿ ಸಂಸ್ಥೆ ಮೈಸೂರು, ಕೃಷಿ ರೈತ ಉತ್ಪಾದಕರ ಸಮಿತಿ ನಾಗಮಂಗಲ, ಕೃಷಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಬಿತ್ತನೆ ರಾಗಿ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈಗಲೂ ರೈತರು ಹಳೇ ಕೃಷಿ ಪದ್ಧತಿಗೆ ಜೋತು ಬಿದ್ದು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೊಳ್ಳುವ ಮೂಲಕ ಉತ್ತಮ ಬೆಳೆ ಬೆಳೆಯುವ ಜೊತೆಗೆ ಆರ್ಥಿಕವಾಗಿಯೂ ಸದೃಢರಾಗಬಹುದು. ಕೃಷಿ ಬಗ್ಗೆ ಇಲಾಖೆ ಅಧಿಕಾರಿಗಳು ರೈತರಿಗೆ ಜಾಗೃತಿ ಮೂಡಿಸಬೇಕು ಎಂದರು.

ಈ ಬಾರಿ ಜೂನ್‌ನಲ್ಲಿ ಬೀಳಬೇಕಾದ ಮಳೆ ಸರಿಯಾಗಿ ಆಗದ ಕಾರಣ ಕೃಷಿ ಚಟುವಟಿಕೆ ನಿಂತಿದೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವುದಾಗಿ ತಜ್ಞರು ತಿಳಿಸಿದ್ದು, ಕೃಷಿ ಕಾರ್ಯ ಪ್ರಾರಂಭವಾಗುವ ಭರವಸೆ ಇದೆ. ಪ್ರಸ್ತುತ ಕೆಆರ್‌ಎಸ್ ಮತ್ತು ಹೇಮಾವತಿ ಜಲಾಶಯಗಳು ಭರ್ತಿಯಾಗುವ ಸಾಧ್ಯತೆಗಳಿವೆ. ಹೀಗಾಗಿ ತಾಲೂಕಿನ ಕೆರೆ ಕಟ್ಟೆಗಳಿಗೆ ನೀರು ಹರಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಮತ್ತು ರೈತ ಮಹಿಳೆಯರಿಗೆ ಉಚಿತವಾಗಿ ಬಿತ್ತನೆ ರಾಗಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಓಡಿಪಿ ಸಂಸ್ಥೆ ನಿರ್ದೇಶಕರಾದ ಸ್ವಾಮಿ, ಅಲೆಕ್ಸ್, ಪ್ರಶಾಂತ್, ವಕೀಲರ ಸಂಘದ ಅಧ್ಯಕ್ಷ ರಮೇಶ್‌ಗೌಡ, ರಾಜೇಶ್, ಮಾಜಿ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ರಾಜೇಗೌಡ, ತಾಲೂಕು ಓಡಿಪಿ ಸಂಸ್ಥೆ ಅಧ್ಯಕ್ಷ ವೆಂಕಟೇಶ್, ಕೃಷಿ ಅಧಿಕಾರಿ ಜಯರಾಜ್ ಇತರರಿದ್ದರು.

ಮಾರ್ಚ್ ತಿಂಗಳೊಳಗೆ ಎಲ್ಲಾ ಗ್ಯಾರಂಟಿಗಳು ಜಾರಿ

ನಾಗಮಂಗಲ: 2024ರ ಮಾರ್ಚ್ ತಿಂಗಳೊಳಗೆ ಚುನಾವಣಾ ಪೂರ್ವದಲ್ಲಿ ಘೋಷಿಸಿದ್ದ ಎಲ್ಲಾ ಐದು ಗ್ಯಾರಂಟಿಗಳು ಜಾರಿಯಾಗಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಭರವಸೆ ನೀಡಿದರು.

ಈಗಾಗಲೇ ರಾಜ್ಯದಲ್ಲಿ ಶಕ್ತಿ ಯೋಜನೆ ಯಶಸ್ವಿಯಾಗಿದ್ದು, ನಿತ್ಯ 50 ಲಕ್ಷ ಮಹಿಳೆಯರು ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಈಗಾಗಲೇ ಗೃಹಲಕ್ಷ್ಮಿ ಯೋಜನೆಗೂ ಚಾಲನೆ ನೀಡಲಾಗಿದ್ದು, ನೋಂದಾಯಿಸಿಕೊಂಡ ತಕ್ಷಣ 2 ಸಾವಿರ ರೂ. ಖಾತೆಗೆ ಜಮೆಯಾಗಲಿದೆ. ಈ ಯೋಜನೆಗೆ 16 ಸಾವಿರ ಕೋಟಿ ಹಣ ಬೇಕಾಗಿದೆ. ಗೃಹಜ್ಯೋತಿ ಯೋಜನೆ ಜುಲೈನಿಂದಲೇ ಜಾರಿಯಾಗಲಿದೆ. ಅದಕ್ಕೆ ಬೇಕಾದ ಹಣವನ್ನು ಸರ್ಕಾರ ಭರಿಸುತ್ತಿದೆ. ಇನ್ನುಳಿದ ಯೋಜನೆಗಳನ್ನು ಮುಂದಿನ ಮಾರ್ಚ್ ಒಳಗೆ ಈಡೇರಿಸಲಾಗುವುದು ಎಂದು ತಿಳಿಸಿದರು.

ಉತ್ತಮ ಸಮಾಜ ನಿರ್ಮಾಣಕ್ಕೆ ಸಲಹೆ



ಚಾಮರಾಜನಗರ, ಜು.30– ಯುವ ಪೀಳಿಗೆ ವಚನಗಳ ಸಾರವನ್ನು ಜೀವನ ದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಿಸಲು ಮುಂದಾಗಬೇಕು ಎಂದು ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಮರಿಯಾಲದಲ್ಲಿರುವ ಬಸವ ಮಹಾಮನೆಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಹಾಗೂ ಜಿಲ್ಲಾ ಘಟಕದ ಸಹಯೋಗದಲ್ಲಿ ನಡೆದ ಇಮ್ಮಡಿ ಮಹಾಂತ ಸ್ವಾಮೀಜಿ ನೆನಪಿನ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜೇಂದ್ರ ಸ್ವಾಮೀಜಿಗಳಿಂದ ಸ್ಥಾಪಿತವಾಗಿರುವ ಶರಣ ಸಾಹಿತ್ಯ ಪರಿಷತ್ ವಚನಗಳ ಸಂರಕ್ಷಣೆ ಹಾಗೂ ಯುವ ಜನಾಂಗಕ್ಕೆ ವಚನಗಳ ಸಾರಗಳನ್ನು ತಿಳಿಸುವ ಜೊತೆಗೆ ಅದರ ಮೌಲ್ಯವನ್ನು ತಿಳಿಸಿ, ಶರಣರ ವಿಚಾರಧಾರೆಗಳು ವಿಶ್ವ ವ್ಯಾಪಿಯಾಗುವಂತೆ ಮಾಡುತ್ತಿದೆ. ಈಗಿನ ಸುತ್ತೂರು ದೇಶಿಕೇಂದ್ರ ಸ್ವಾಮೀಜಿಗಳು ಸಹ ಶರಣ ಸಾಹಿತ್ಯ ಪರಿಷತ್ ಕಾರ್ಯ ಯೋಜನೆಗಳು ಹಾಗೂ ರಾಜೇಂದ್ರ ಶ್ರೀಗಳ ಆಶಯ ಈಡೇರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಉಪನ್ಯಾಸಕ ಅಶೋಕ ಇಮ್ಮಡಿ ಮಾತನಾಡಿ, ಇಮ್ಮಡಿ ಮಹಾಂತ ಸ್ವಾಮೀಜಿ ಬಹಳ ಕಷ್ಟ ಕಾಲದಲ್ಲಿ ಶ್ರೀಮಠದ ಪೀಠಾಧಿಪತಿಗಳಾದವರು. ಅವರ ಪರಿಶ್ರಮ ದಿಂದ ಇಂದು ಮರಿಯಾಲ ಮುರುಘ ರಾಜೇಂದ್ರ ಸ್ವಾಮಿ ವಿದ್ಯಾಸಂಸ್ಥೆ ದೊಡ್ಡಾಗಿದೆ ಬೆಳೆದಿದೆ. ಬಸವಾದಿ ಶರಣರ ಹಾದಿಯಲ್ಲಿ ನಡೆದ ಮಹಾಂತ ಸ್ವಾಮೀಜಿ ಅವರು ನೇರ ನಡೆ, ನುಡಿ ಹೊಂದಿದ್ದರು ಎಂದರು. ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ದುಗ್ಗಟ್ಟಿ ಮಲ್ಲಿಕಾರ್ಜುನ, ಪ್ರಧಾನ ಕಾರ್ಯದರ್ಶಿ ಬಿ.ಕೆ.ರವಿಕುಮಾರ್, ತಾಲೂಕು ಘಟಕದ ಅಧ್ಯಕ್ಷ ಎಸ್.ಮಹದೇವಪ್ರಭು, ಮರಿಯಾಲ ಎಸ್‌ಎಂಎಸ್‌ಆರ್ ವಿದ್ಯಾಸಂಸ್ಥೆ ಅಧ್ಯಕ್ಷ ಆರ್.ಡಿ. ನಾಗರಾಜು, ಶಿವಪ್ರಸಾದ್, ಬೇಡಗುಳಿ ಸುಂದರ್, ಆರ್.ಎಸ್.ಲಿಂಗರಾಜು ಇದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	112.60 ಅಡಿ
ಒಳಹರಿವು	10715 ಕ್ಯುಸೆಕ್
ಹೊರಹರಿವು	3159 ಕ್ಯುಸೆಕ್

ಕಬಿನಿ ನೀರಿನ ಮಟ್ಟ




ಗರಿಷ್ಠ ಮಟ್ಟ	2284.00 ಅಡಿ
ಭಾನುವಾರ	2283.15 ಅಡಿ
ಒಳ ಹರಿವು	6126 ಕ್ಯುಸೆಕ್
ಹೊರ ಹರಿವು	3500 ಕ್ಯುಸೆಕ್

ಧಾರಾಕಾರ ಮಳೆಯಿಂದ ಕಾಫಿ ಬೆಳೆಗಾರರಿಗೆ ಸಂಕಷ್ಟ

ಉದುರುತ್ತಿರುವ ಕಾಫಿ ಮಿಡಿಗಳು, ಕೊಳೆ ರೋಗದ ಆತಂಕ





"ಈ ವರ್ಷದ ಭಾರೀ ಗಾಳಿ ಮಳೆಯಿಂದ ಕಾಫಿ ತೋಟಗಳಲ್ಲಿ ಕೊಳೆರೋಗ ಬಂದಿದ್ದು ಕಾಫಿ ಉದುರುತ್ತಿದೆ. ಬಿಸಿಲು ಬಂದ ಕೂಡಲೇ ಇನ್ನಷ್ಟು ಕಾಫಿ ಫಸಲು ಉದುರಲಿವೆ. ಬೆಳೆಗಾರರಿಗೆ ಇದರಿಂದ ನಷ್ಟ ಸಂಭವಿಸುತ್ತಿದೆ. ಸರ್ಕಾರ ಬೆಳೆಗೆ ಸೂಕ್ತ ಪರಿಹಾರ ಒದಗಿಸುವಲ್ಲಿ ಕ್ರಮ ಕೈಗೊಳ್ಳಬೇಕು."

-ಪಾಂಡಂಡ ನರೇಶ್
ಕಾಫಿ ಬೆಳೆಗಾರ, ಕಕ್ಕಬೆ

"ಕೃಷಿ ತೋಟಗಾರಿಕೆ, ಕಾಫಿ ಮಂಡಳಿ, ಕಂದಾಯ ಇಲಾಖೆ ಜಂಟಿ ಸಮೀಕ್ಷೆಗೆ ಜಿಲ್ಲಾಧಿಕಾರಿಗಳು ಸೂಚಿಸಿದ್ದು ಸಮೀಕ್ಷೆ ನಡೆಸಲಾಗುವುದು. ರೋಗ ನಿರ್ವಹಣೆಗೆ ಸಲಹೆ,ಸೂಚನೆ ನೀಡಲಾಗಿದೆ.

-ಚಂದ್ರಶೇಖರ್
ಕಾಫಿ ಮಂಡಳಿ ಉಪನಿರ್ದೇಶಕರು.

ನಾಪೋಕ್ಲು, ಜು.30– ರೈತರು ದೇಶದ ಬೆನ್ನೆಲುಬು ಎನ್ನುತ್ತಾರೆ. ಆದರೆ ಅವರು ಒಂದಲ್ಲ ಒಂದು ಸಮಸ್ಯೆಗಳಿಂದ ನಲುಗುತ್ತಿದ್ದು ಇದೀಗ ಕೊಡಗಿನ ಕಾಫಿ ಬೆಳೆಗಾರರು ವರ್ಷವಿಡೀ ಜತನದಿಂದ ಕಾಪಾಡಿಕೊಂಡು ಬಂದಿದ್ದ ಕಾಫಿ ಫಸಲು ಉದುತ್ತಿರುವುದರಿಂದ ಅವರ ಆತ್ಮಸ್ಥೈರ್ಯ ಹುದುಗಿದಂತಾಗಿದೆ.

ಜಿಲ್ಲೆಯ ಎಲ್ಲೆಡೆ ಕಳೆದ ಕೆಲವು ದಿನಗಳಿಂದ ಧಾರಾಕಾರವಾಗಿ ಮಳೆ ಸುರಿದಿದ್ದು, ಮಳೆಯಿಂದಾಗಿ ಕಾಫಿ ತೋಟಗಳಲ್ಲಿ ಕಾಫಿ ಮಿಡಿಗಳು ಉದುರುವಿಕೆಯ ಪ್ರಮಾಣ ಹೆಚ್ಚಾಗಿ ಕಂಡು ಬಂದಿದ್ದು ಬೆಳೆಗಾರರು ಚಿಂತಿತರಾಗಿದ್ದಾರೆ. ಕೆಲವು ಗಿಡಗಳಲ್ಲಿ ಕಾಫಿಯ ಫಸಲು ಸಂಪೂರ್ಣವಾಗಿ ಧಾರಾಶಾಹಿಯಾಗಿ ಕಾಫಿಯ ಗಿಡಗಳ ರೆಂಬೆಗಳಲ್ಲಿನ ಫಸಲು ಕಪ್ಪಾಗಿ ಕಾಫಿಯ ಮಿಡಿಗಳು ಇನ್ನಷ್ಟು ಉದುರುವ ಆತಂಕ ರೈತರಲ್ಲಿ ಮನೆ ಮಾಡಿದೆ. ಮತ್ತಷ್ಟು ಮಳೆ ಸುರಿದರೆ ಬಹುತೇಕ ಫಸಲು ಉದುರಿಹೋಗುವ ಸಾಧ್ಯತೆ ಇದ್ದು ಕೈಗೆ ಬಂದ ತುತ್ತು ಬಾಯಿಗೆ ಬರದ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆಗಳು ಕಂಡು ಬರುತ್ತಿದೆ .

ನಾಪೋಕ್ಲುವಿನಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಇದುವರೆಗಿನ ಮಳೆಯ ಪ್ರಮಾಣ ಸುಮಾರು 35 ಇಂಚು ಕಡಿಮೆಯಾಗಿದ್ದರೆ, ಕಕ್ಕಬೆ ಯವಕಪಾಡಿ ಗ್ರಾಮದಲ್ಲಿ ಸುಮಾರು 55 ಇಂಚು ಕೊರತೆ ಇದೆ. ಆದರೂ ಕಾಫಿ ಉದುರುತ್ತಿರುವುದು ರೈತರಿಗೆ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ.

ಮಳೆಯಿಂದಾಗಿ ಹಾಗೂ ಕಾರ್ಮಿಕರ ಕೊರತೆಯಿಂದಾಗಿ ಕಾಫಿ ಉದುರುವುದನ್ನು ತಡೆಗಟ್ಟಲು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಬೆಳೆಗಾರರಿಗೆ ಸಾಧ್ಯವಾಗಿಲ್ಲ. ಈಗ ಮಳೆ ಬಿಡುವು ಕೊಟ್ಟರೂ ವಾಡಿಕೆಯ ಮಳೆಯಾಗದ ಹಿನ್ನೆಲೆಯಲ್ಲಿ ಮುಂದಿನ ಎರಡು ತಿಂಗಳು ಬಿರುಸಿನ ಮಳೆಯಾಗುವ ಸಾಧ್ಯತೆಗಳಿದ್ದು ಕಾಫಿ ಫಸಲು ಉದುರಿ ಬೆಳೆಗಾರರಿಗೆ ಹೆಚ್ಚಿನ ನಷ್ಟ ಸಂಭವಿಸಲಿದೆ ಎನ್ನಲಾಗುತ್ತಿದೆ.

ಈ ಬಾರಿ ಹೂ ಮಳೆ ಬೇಗನೆ ಆಗಿರುವುದರಿಂದ ಕಾಫಿಯ ಉದುರುವಿಕೆ ಸಂಭವಿಸಿರಬಹುದು ಎನ್ನುತ್ತಾರೆ ಬೆಳೆಗಾರರು. ನಾಪೋಕ್ಲು, ಕಕ್ಕಬೆ, ನಾಲಡಿ, ಯವಕಪಾಡಿ ಸೇರಿದಂತೆ ನಾಲ್ಕುನಾಡು ವ್ಯಾಪ್ತಿಯ ಭಾಗಗಳಲ್ಲಿ ಕಳೆದ ಕೆಲವು ದಿನಗಳಿಂದ ಹೆಚ್ಚಿನ ಮಳೆಯಾಗಿದ್ದು, ಕಾಫಿ ತೋಟಗಳಲ್ಲಿ ಗಿಡಗಳಲ್ಲಿನ ಫಸಲು ಉದುರುತ್ತಿದೆ. ಜೊತೆಗೆ ಇದೀಗ ಕಾಫಿಗಿಡಗಳಿಗೆ ಕೊಳೆರೋಗ ತಗಲಿದೆ.

ಹಾನಿಗೀಡಾದ ಪ್ರದೇಶಗಳಲ್ಲಿ ಕಾಫಿ ಮಂಡಳಿ ಸಮೀಕ್ಷೆ ಬೆಳೆಸಿ ಬೆಳೆಗಾರರಿಗೆ ಸೂಕ್ತ ಪರಿಹಾರ ಒದಗಿಸಿಕೊಡಬೇಕು ಎಂದು ಕಾಫಿ ಮಂಡಳಿ ಮಾಜಿ ಉಪಾಧ್ಯಕ್ಷ ಸಣ್ಣುವಂಡ ಕಾವೇರಪ್ಪ ಒತ್ತಾಯಿಸಿದ್ದಾರೆ.

ಜಿಲ್ಲೆಯ ಜನರ ಸಂಕಷ್ಟಗಳಿಗೆ ಜಾತಿ, ಮತ, ಭೇದವಿಲ್ಲದೆ ಸ್ಪಂದಿಸುತ್ತೇವೆ

ಶಾಸಕರುಗಳಾದ ಎ.ಎಸ್. ಪೊನ್ನಣ್ಣ, ಡಾ. ಮಂಥರ್‌ಗೌಡ ಭರವಸೆ



ಮಡಿಕೇರಿ, ಜು.30– ಕೊಡಗು ಜಿಲ್ಲೆಯ ಜನರ ಸಂಕಷ್ಟಗಳಿಗೆ ಜಾತಿ, ಮತ, ಭೇದವಿಲ್ಲದೇ ಸ್ಪಂದಿಸುವುದಾಗಿ ಶಾಸಕದ್ವಯರಾದ ಎ.ಎಸ್.ಪೊನ್ನಣ್ಣ ಮತ್ತು ಡಾ. ಮಂಥರ್ ಗೌಡ ಅವರು ಭರವಸೆ ನೀಡಿದ್ದಾರೆ.

ಕೊಡಗು ಗೌಡ ಸಮಾಜಗಳ ಒಕ್ಕೂಟ, ಕೊಡಗು ಗೌಡ ಸಮಾಜ ಮಡಿಕೇರಿ ಸೇರಿದಂತೆ ಜಿಲ್ಲೆಯ ಎಲ್ಲಾ ಗೌಡ ಸಮಾಜ ಮತ್ತು ಸಂಘಟನೆಗಳ ವತಿಯಿಂದ ವಿರಾಜಪೇಟೆ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ ಹಾಗೂ ಮಡಿಕೇರಿ ಕ್ಷೇತ್ರದ ಶಾಸಕರಾದ ಡಾ.ಮಂತರ್‌ಗೌಡ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು. ಮಡಿಕೇರಿಯ ಗೌಡ ಸಮಾಜದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯ ನೂತನ ಶಾಸಕರಾದ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಹಾಗೂ ಡಾ.ಮಂಥರ್ ಗೌಡ ಅವರನ್ನು ಕೊಡಗು ಗೌಡ ಸಮಾಜಗಳ ಒಕ್ಕೂಟ, ಕೊಡಗು ಗೌಡ ಸಮಾಜದ ವತಿಯಿಂದ ಸನ್ಮಾನಿಸುವುದರ ಮೂಲಕ ಅಭಿನಂದಿಸಲಾಯಿತು. ಈ ವೇಳೆ ಜಿಲ್ಲೆಯ ವಿವಿಧ ಗೌಡ ಸಮಾಜದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಶಾಸಕರನ್ನು ಸನ್ಮಾನಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಎ.ಎಸ್. ಪೊನ್ನಣ್ಣ, ಜನಸಾಮಾನ್ಯರ ಮೂಲಭೂತ ಸಮಸ್ಯೆಗಳಿಗೆ ಸಂವಿಧಾನಾತ್ಮಕವಾಗಿ ಮತ್ತು ಕಾನೂನಿಗೆ ಅನುಗುಣವಾಗಿ ಪರಿಹಾರವನ್ನು ಕಂಡುಕೊಳ್ಳಬೇಕಿದೆ. ಜನರ ಭಾವನೆಗಳೊಂದಿಗೆ ಚೆಲ್ಲಾಟವಾಡುವುದಕ್ಕೆ ನಾವೆಂದಿಗೂ ಹೋಗುವುದಿಲ್ಲ. ಮುಂದಿನ 5 ವರ್ಷಗಳ ಆಡಳಿತದ ಅವಧಿಯಲ್ಲಿ ಜಿಲ್ಲೆಯನ್ನು ಪ್ರತಿನಿಧಿಸುವ ನಾವಿಬ್ಬರು ಶಾಸಕರು, ಜಾತಿ, ಮತ, ಭೇದಗಳನ್ನು ಮರೆತು, ಜನರ ಸಂಕಷ್ಟಗಳಿಗೆ ಸ್ಪಂದಿಸುವ ಮೂಲಕ ಸಾಮರಸ್ಯದ ಸುಭದ್ರ ನಾಡನ್ನು ಕಟ್ಟುವ ಪ್ರಯತ್ನ ಮಾಡಬೇಕಿದೆ. ಇದಕ್ಕೆ ಪೂರಕವಾಗಿ ಜಿಲ್ಲೆಯ ಎಲ್ಲಾ ವರ್ಗದ ಮಂದಿ ಮಾರ್ಗದರ್ಶಕರಾಗಿರಲಿ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಡಾ.ಮಂತರ್‌ಗೌಡ ಅವರು, ಯಾವುದೇ ಸಂಘ ಸಂಸ್ಥೆಗಳು ಆ ಸಮುದಾಯದ ಬಡವರು, ಆರ್ಥಿಕವಾಗಿ ಹಿಂದುಳಿದವರು, ಸಂಕಷ್ಟ ದಲ್ಲಿರುವವರಿಗೆ ನೆರವಾಗಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆ ತರುವ ಪ್ರಯತ್ನಗಳನ್ನು ಮಾಡಬೇಕೆಂದು ಆಶಿಸಿದರು. ಜಿಲ್ಲೆಯನ್ನು ಪ್ರತಿನಿಧಿಸುವ ನಾವಿಬ್ಬರು ಶಾಸಕರು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತ ಸದಾ ಅವರೊಂದಿಗೆ ಇರುತ್ತೇವೆ ಎಂದರು.

ಕೊಡಗು ಗೌಡ ಸಮಾಜಗಳ ಒಕ್ಕೂಟದಿಂದ ಇದೇ ಸಂದರ್ಭ ಬೇಡಿಕೆಗಳ ಮನವಿ ಪತ್ರವನ್ನು ಶಾಸಕರುಗಳಿಗೆ ಸಲ್ಲಿಸಲಾಯಿತು. ಒಕ್ಕೂಟದ ಆನಂದ ಕರಂದ್ಲಾಜೆ ಬೇಡಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿ, ಜಿಲ್ಲೆಯ ಜಮ್ಮಾ ಕೋವಿಯ ವಿನಾಯಿತಿ ಹಕ್ಕು ಇಲ್ಲಿನ ಎಲ್ಲಾ ಮೂಲ ನಿವಾಸಿಗಳಿಗೆ ಒದಗಿಸಬೇಕು. ಭಾಗಮಂಡಲ ಮತ್ತು ತಲಕಾವೇರಿ ಕ್ಷೇತ್ರದ ವ್ಯವಸ್ಥೆಗಳ ಕುರಿತು ಸಾರ್ವಜನಿಕವಾಗಿ ಬರುತ್ತಿರುವ ವ್ಯತಿರಿಕ್ತ ಹೇಳಿಕೆಗಳನ್ನು ಪರಿಶೀಲಿಸುವ ಮೂಲಕ, ಕ್ಷೇತ್ರದ ತಕ್ಕಮುಖ್ಯಸ್ಥರು ಹಾಗೂ ಪೂಜಾ ಕಾರ್ಯಗಳ ವ್ಯವಸ್ಥೆ ಯಥಾಸ್ಥಿತಿಯಲ್ಲಿ ಮುಂದುವರಿಯಲು ಅಗತ್ಯ ಕ್ರಮ ಕೈಗೊಳ್ಳಬೇಕು. ಕ್ಷೇತ್ರದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಭಾಗಮಂಡಲ ವ್ಯಾಪ್ತಿಯ ಸ್ಥಳೀಯರಿಗೆ ಒದಗಿಸಬೇಕು ಮತ್ತು ಒಕ್ಕೂಟದ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಸರ್ಕಾರದಿಂದ ಅಗತ್ಯ ಅನುದಾನವನ್ನು ನೀಡಬೇಕೆಂದು ಮನವಿ ಮಾಡಿದರು. ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಅಂಬೆಕಲ್ ನವೀನ್, ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ಪೇರಿಯನ ಜಯಾನಂದ ಉಪಸ್ಥಿತರಿದ್ದರು.

ರಸ್ತೆಯಲ್ಲಿ ಅಡ್ಡಾಡಿದ ಆನೆ, ಮರಿ ಆನೆಗಳು

ಸುಂಟಿಕೊಪ್ಪ, ಜು.30– 7ನೇ ಹೊಸಕೋಟೆಯ ಅಂದಗೋವೆ ಪೈಸಾರಿಯಲ್ಲಿ ಮರಿ ಆನೆ ಸಹಿತ 3 ಆನೆಗಳು



ಬೆಳಗ್ಗೆ ನಡು ರಸ್ತೆಯಲ್ಲಿ ಸಂಚರಿಸುವ ಮೂಲಕ ಸಾರ್ವಜನಿಕರಲ್ಲಿ ಭೀತಿ ಮೂಡಿಸಿವೆ.

ಆನೆ ಕಾಡಿನಿಂದ ಮಳೆಯಲ್ಲಿಯೇ ಬೆಳಗ್ಗೆ 8.30ರ ಸಮಯದಲ್ಲಿ ಜನವಸತಿ ಪ್ರದೇಶಗಳ ಕಡೆ ಆಗಮಿಸಿದ ಕಾಡಾನೆಗಳನ್ನು ಕಂಡು ಗ್ರಾಮಸ್ಥರು ಬೊಬ್ಬೆ ಹೊಡೆದಿದ್ದಾರೆ. ಈ ಸಂದರ್ಭ ಜನರನ್ನು ಕಂಡ ಕಾಡಾನೆಗಳು ಮರಿ ಆನೆಯ ರಕ್ಷಣೆಗೆ ಘೀಳಿಟ್ಟವು. ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಕಾಡಾನೆಗಳನ್ನು ಅರಣ್ಯಕ್ಕೆ ಓಡಿಸಲು ಹರಸಾಹಸ ಪಡಬೇಕಾಯಿತು.

ಕಾರ್ಗಿಲ್ ಯೋಧರ ಧೈರ್ಯ, ತ್ಯಾಗ, ಆದರ್ಶವಾಗಲಿ

ವಿರಾಜಪೇಟೆಯಲ್ಲಿ ಕಾರ್ಗಿಲ್ ವಿಜಯ ದಿವಸ್ ಆಚರಣೆ




ವಿರಾಜಪೇಟೆ, ಜು.30– ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ ಯೋಧರ ಧೈರ್ಯ ಹಾಗೂ ತ್ಯಾಗವು ದೇಶದ ಪ್ರತಿಯೊಬ್ಬ ನಾಗರಿಕರಿಗೆ ಆದರ್ಶವಾಗಲಿ ಎಂದು ವಿರಾಜಪೇಟೆ ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ ತಿಳಿಸಿದರು.

ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ವತಿಯಿಂದ ಇಲ್ಲಿನ ತಾಲೂಕು ಕಚೇರಿ ಸಮೀಪವಿರುವ ಹುತಾತ್ಮರ ಸ್ಮಾರಕದ ಬಳಿ ಕಾರ್ಗಿಲ್ ವಿಜಯ ದಿವಸದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಮಾತನಾಡಿದರು.

ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರೇಡ್–2 ತಹಶೀಲ್ದಾರ್ ಪ್ರದೀಪ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ವಿರಾಜಪೇಟೆಯ ಇ.ಸಿ.ಎಚ್ ಕ್ಲಿನಿಕ್‌ನ ಲೆ.ಕರ್ನಲ್ ಲಕ್ಷ್ಮಿನಾರಾಯಣ, ಎಸ್‌ಬಿಐ ಶಾಖಾ ವ್ಯವಸ್ಥಾಪಕಿ ಉಮಾ, ಮಾಜಿ ಸೈನಿಕರ ಸಂಘದ ಉಪಾಧ್ಯಕ್ಷ ಪುಗ್ಗೇರ ನಂದ, ಸಿಎಸ್‌ಡಿ ಕ್ಯಾಂಟಿನ್‌ನ ವ್ಯವಸ್ಥಾಪಕ ಡಾಲಿ, ವಿರಾಜಪೇಟೆ ಕೊಡವ ಸಮಾಜದ ಅಧ್ಯಕ್ಷ ಕುಂಬೇರ ಮನು ಕುಮಾರ್, ಕೊಡವ ಮುಸ್ಲಿಂ ಅಸೋಸಿಯೇಷನ್‌ನ ಅಧ್ಯಕ್ಷ ದುದ್ದಿಯಡ ಸೂಫಿ, ವಿರಾಜಪೇಟೆ ಪ್ರೆಸ್ ಕ್ಲಬ್, ಬಿಲ್ಲವ ಸಮಾಜ, ಲಯನ್ಸ್ ಕ್ಲಬ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿದ್ದರು

ವಿದ್ಯುತ್ ತಂತಿ ತಗುಲಿ ಎತ್ತು ಸಾವು



ಗುಡ್ಡೆಹೊಸೂರು, ಜು.30– ಇಲ್ಲಿನ ರೈತರಾದ ಕೊಳಂಬೆ ಮನೆ ಪುರುಷೋತ್ತಮ್ ಎಂಬುವವರ ಸುಮಾರು 40 ಸಾವಿರ ಬೆಲೆಬಾಳುವ ಎತ್ತು ವಿದ್ಯುತ್ ತಂತಿ ತಗುಲಿ ಸಾವನ್ನಪ್ಪಿದ ಘಟನೆ ನಡೆದಿದೆ. ಪುರುಷೋತ್ತಮ್ ಅವರು ಭತ್ತದ ಗದ್ದೆ ಉಳುಮೆ ಮಾಡಿ ಅಗ್ಗ ಸಮೇತ ಮೇಯಲು ಬಿಟ್ಟ ಸಂದರ್ಭ ಈ ಘಟನೆ ಸಂಭವಿಸಿದೆ.

ಪಕ್ಕದಲ್ಲಿ ಕರೆಂಟ್ ಲೈನ್‌ನ ಒಂದು ತಂತಿ ತುಂಡಾಗಿ ಬಿದ್ದಿತ್ತು. ಎತ್ತಿನ ಕಾಲಿಗೆ ತಂತಿ ಸಿಲುಕಿ ಸಾವನ್ನಪ್ಪಿದೆ. ಸ್ಥಳೀಯರೊಬ್ಬರ ಜೀವಕ್ಕೂ ತೊಂದರೆಯಾಗುವುದು ತಪ್ಪಿದೆ. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಗೆ ದೂರು ನೀಡಲಾಗಿದೆ. ಪಶುವೈದ್ಯರು ಸ್ಥಳದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದರು. ಸೂಕ್ತ ಪರಿಹಾರ ಓದಗಿಸುವಂತೆ ಪುರುಷೋತ್ತಮ್ ಆಗ್ರಹಿಸಿದ್ದಾರೆ.

ಅರ್ಜಿ ಆಹ್ವಾನ

ಚಾಮರಾಜನಗರ, ಜು.30– ಜಿಲ್ಲಾ ಸೈನಿಕ ಮಂಡಳಿಯನ್ನು ಪುನರ್ ರಚಿಸಲಾಗುತ್ತಿದ್ದು, ಇದರಲ್ಲಿ ವೇತನ ಭತ್ಯೆ ರಹಿತವಾಗಿ ಕಾರ್ಯ ನಿರ್ವಹಿಸಲು ಆಸಕ್ತಿಯುಳ್ಳ ಮಾಜಿ ಸೈನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಮಾಜಿ ಸೈನಿಕರ ಕಲ್ಯಾಣ ಯೋಜನೆಗಳಿಗೆ ಪೂರಕವಾಗಿ ಮೈಸೂರು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಸೈನಿಕ ಮಂಡಳಿಯನ್ನು ಪುನರ್ ರಚಿಸಲಾಗುತ್ತಿದೆ. ಈ ಮಂಡಳಿಯಲ್ಲಿ ವೇತನ ಭತ್ಯೆ ರಹಿತವಾಗಿ ಸ್ವ–ಇಚ್ಛೆಯಿಂದ ಕಾರ್ಯನಿರ್ವಹಿಸಲು ಬಯಸುವ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ಮಾಜಿ ಸೈನಿಕರು ಸ್ವವಿವರಗಳನ್ನು ಒಳಗೊಂಡ ಅರ್ಜಿಯನ್ನು ಉಪನಿರ್ದೇಶಕರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಮೈಸೂರು ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಆ.2 ರೊಳಗಾಗಿ ಸಲ್ಲಿಸಬಹುದಾಗಿದೆ. ಮಾಹಿತಿಗೆ ಮೈಸೂರಿನ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ದೂ:0821–2425240 ಅನ್ನು ಸಂಪರ್ಕಿಸುವಂತೆ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಯಕ ಸಮುದಾಯದ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಒತ್ತು ನೀಡಿ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ ಸಲಹೆ



ಚಾಮರಾಜನಗರ, ಜು.30– ನಾಯಕ ಸಮುದಾಯದ ವಿದ್ಯಾರ್ಥಿಗಳು ಐಎಎಸ್, ಐಪಿಎಸ್‌ನಂತಹ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ ಸಲಹೆ ನೀಡಿದರು.

ನಗರದ ಶ್ರೀಮಹರ್ಷಿ ವಾಲ್ಮೀಕಿ ಭವನದಲ್ಲಿ ತಾಲೂಕು ನಾಯಕ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ನಾಯಕ ನೌಕರರ ಸ್ನೇಹ ಬಳಗ ಹಾಗೂ ಮಹರ್ಷಿ ಶ್ರೀವಾಲ್ಮೀಕಿ ನೌಕರರ ಸೌಹಾರ್ದ ಸಹಕಾರ ನಿಯಮಿತ ಸಹಯೋಗದಲ್ಲಿ ನಡೆದ 10ನೇ ವಾರ್ಷಿಕೋತ್ಸವ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಮುದಾಯದ ಮಕ್ಕಳು ಅರ್ಧಕ್ಕೆ ಶಿಕ್ಷಣ ಮೊಟಕುಗೊಳಿಸಬಾರದು. ನಾವು ವಿದ್ಯಾಭ್ಯಾಸ ಮಾಡುವ ಸಂದರ್ಭ ಸರ್ಕಾರಿ ಸೌಲಭ್ಯಗಳು ಕಡಿಮೆ ಇತ್ತು ಇಂದು ಸರ್ಕಾರ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಜನಾಂಗದ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದರು. ನಾಯಕ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ವಿದ್ಯಾರ್ಥಿಗಳ ಹೆಚ್ಚಿನ ಓದಿಗೆ ಪೂರಕವಾಗಿದ್ದು, ಜನಾಂಗದ ಮಕ್ಕಳ ಮತ್ತಷ್ಟು ಓದಿಗೆ ಪ್ರೇರಣೆಯಾಗಿದೆ. ಇಂದು ಪ್ರತಿಭಾ ಪುರಸ್ಕಾರ ಪಡೆದಿರುವ ವಿದ್ಯಾರ್ಥಿಗಳ ಜೀವನ ಪ್ರಜ್ವಲಿಸಲಿ ಎಂದು ಆಶಿಸಿದರು.

ತಾಪಂ ಮಾಜಿ ಅಧ್ಯಕ್ಷ ಹೆಚ್.ವಿ.ಚಂದ್ರು ಮಾತನಾಡಿ, ಸಮಾಜದಲ್ಲಿ ಬದಲಾವಣೆಗೆ ಇಂತಹ ಕಾರ್ಯಕ್ರಮ ಅಗತ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿ, ಪ್ರತಿವರ್ಷದಂತೆ ಈ ಬಾರಿಯು ಸಂಘದಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಗೌರವ ಸಮರ್ಪಣೆ ಮಾಡಲಾಗಿದೆ. ಪ್ರತಿಭಾ ಪುರಸ್ಕಾರ ಪಡೆದಿರುವ ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಲಿ ಎಂದು ಆಶಿಸಿದರು.

ಇದೇ ವೇಳೆ 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ, ಪ್ರಮಾಣಪತ್ರ ನೀಡಿ ಪ್ರತಿಭಾ ಪುರಸ್ಕಾರ ನೀಡಲಾಯಿತು. ಇದೇ ಸಂದರ್ಭ ನಿವೃತ್ತ ನೌಕರನ್ನು ಹಾಗೂ ಸಾಧಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ತಾಲೂಕು ದಾಸೋಹ ಅಧಿಕಾರಿ ವೆಂಕಟೇಶ್, ವಾಲ್ಮೀಕಿ ಟ್ರಸ್ಟ್ ಅಧ್ಯಕ್ಷ ಬಿ.ಕಾಂ. ಮಹದೇವ ನಾಯಕ, ಸಬ್ ಇನ್‌ಪೆಕ್ಟರ್ ರಾಜು ನಾಯಕ, ಸುರೇಶ್‌ನಾಗ್, ಮುಖ್ಯ ಶಿಕ್ಷಕಿ ಮೀನಾಕ್ಷಿ, ಮುಖಂಡರಾದ ರಾಮ ನಾಯಕ, ಕಪಿನಿನಾಯಕ, ಪ್ರಾಂಶುಪಾಲೆ ಪ್ರೇಮಲತಾ, ನಿವೃತ್ತ ಪ್ರಾಂಶುಪಾಲ ಬಂಗಾರ ನಾಯಕ, ಉಪನ್ಯಾಸಕ ನಾರಾಯಣ ಸ್ವಾಮಿ, ಇನ್ಸ್‌ಪೆಕ್ಟರ್ ಎಸ್.ನಾಗನಾಯಕ, ಸಂಘದ ಉಪಾಧ್ಯಕ್ಷ ಪೊಲೀಸ್ ನಾಗ ನಾಯಕ, ಖಜಾಂಚಿ ಕರಿಯಪ್ಪ, ಲಿಂಗ ರಾಜು, ವೈ.ಎಂ.ಮಂಜುನಾಥ್, ಕೆಲ್ಲಂಬಳ್ಳಿ ನಾಗರಾಜು, ನಾಗಲಕ್ಷ್ಮೀ, ಅರ್.ಚಂದ್ರು ಆರ್.ಮಾದೇಶ್, ರಾಜೇಶ್, ಎಸ್.ಎಂ. ಮಹೇಶ್, ಶಿಕ್ಷೆ ಪದ್ಮ ಕಿಟ್ಟು ಸಂಘದ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಕುಂಬೇಶ್ವರ ಕಾಲೋನಿ ಡೇರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಡೈರಿ ಸದಸ್ಯರಿಂದ ಶಾಸಕರಿಗೆ ಅಭಿನಂದನೆ



ಚಾಮರಾಜನಗರ, ಜು.30– ತಾಲೂಕಿನ ಕುಂಬೇಶ್ವರ ಕಾಲೋನಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಮಂಗಳಮ್ಮ, ಉಪಾಧ್ಯಕ್ಷರಾಗಿ ನಾಗಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇದೇ ವೇಳೆ ಡೈರಿ ಸದಸ್ಯರು ನಗರದ ಪ್ರವಾಸಿ ಮಂದಿರದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರನ್ನು ಅಭಿನಂದಿಸಿದರು. ಅಲ್ಲದೇ ಕಾಡಂಚಿನಲ್ಲಿರುವ ಕುಂಬೇಶ್ವರ ಕಾಲೋನಿ ಡೇರಿ ಅಭಿವೃದ್ಧಿಗೆ ಅನುದಾನ ನೀಡುವಂತೆ ಮನವಿ ಮಾಡಿದರು. ಬಳಿಕ ನಗರದ ಹೌಸಿಂಗ್ ಬೋರ್ಡ್‌ನಲ್ಲಿರುವ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರ ನಿವಾಸಕ್ಕೆ ತೆರಳಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅವರನ್ನು ಅಭಿನಂದಿಸಿದರು. ಈ ವೇಳೆ ನಿರ್ದೇಶಕರಾದ ಗುರಂಗಯ್ಯ, ರಾಜು, ಬಸವಣ್ಣ, ಶಕೀಲ್ ಅಹಮದ್, ರವಿ, ತಾಪಂ ಮಾಜಿ ಅಧ್ಯಕ್ಷ ಆರ್. ಮಹದೇವ್, ಮುಖಂಡರಾದ ಮರಿಸ್ವಾಮಿ, ಪುಟ್ಟಸ್ವಾಮಿ, ಚಿನ್ನಸ್ವಾಮಿ, ಸ್ವಾಮಿ, ಮಂಜು, ಪುಟ್ಟಸ್ವಾಮಿ, ಗ್ರಾಮದ ಯಜಮಾನರು ಮುಖಂಡರು ಉಪಸ್ಥಿತರಿದ್ದರು.



ಯಳಂದೂರು ತಾಲೂಕಿನ ಅಂಬಳೆ ಗ್ರಾಪಂ ನೂತನ ಅಧ್ಯಕ್ಷ ಸಿ.ನಂಜುಂಡಸ್ವಾಮಿ, ಉಪಾಧ್ಯಕ್ಷೆ ಮಹದೇವಮ್ಮ ಅವರನ್ನು ತಾಲೂಕಿನ ಭಗೀರಥ ಸಂಘದ ಪದಾಧಿಕಾರಿಗಳು ಅಭಿನಂದಿಸಿದರು.

ಹುಲಿಗಳ ಸಂರಕ್ಷಣೆಯಲ್ಲಿ ಚಾ.ನಗರ ವಿಶ್ವ ವಿಖ್ಯಾತವಾಗಲಿ

ರಾಷ್ಟ್ರ ಯುವಪ್ರಶಸ್ತಿ ಪುರಸ್ಕೃತ ಸುರೇಶ್ ಎನ್.ಋಗ್ವೇದಿ



ಚಾಮರಾಜನಗರ, ಜು.30– ಹುಲಿಗಳ ನಾಡು ಎಂದೇ ಪ್ರಸಿದ್ಧವಾಗಿರುವ ಚಾಮರಾಜನಗರ ಹುಲಿಗಳ ಸಂರಕ್ಷಣೆಯಲ್ಲಿ ವಿಶ್ವ ವಿಖ್ಯಾತಿ ಪಡೆಯಲಿ ಎಂದು ರಾಷ್ಟ್ರ ಯುವಪ್ರಶಸ್ತಿ ಪುರಸ್ಕೃತ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಜೈ ಹಿಂದ್ ಪ್ರತಿಷ್ಠಾನ ಮತ್ತು ಋಗ್ವೇದಿ ಯೂತ್ ಕ್ಲಬ್ ವತಿಯಿಂದ ಜೈ ಹಿಂದ್ ಕಟ್ಟೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಹುಲಿಗಳ ದಿನ ಕಾರ್ಯಕ್ರಮವನ್ನು ವಿವಿಧ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಗೊಂಡ ಹುಲಿಗಳ ಲೇಖನಗಳ ಓದುವ ಮೂಲಕ ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬರೂ ಅರಣ್ಯ ಉಳಿಸಲು ಮುಂದಾಗ ಬೇಕು. ಜು.29 ಹುಲಿಗಳ ದಿನವಾಗಿದೆ. ಅರಣ್ಯ ಇಲಾಖೆ ವಿಶೇಷ ಜಾಗೃತಿ ವಹಿಸಿದ ಹಿನ್ನೆಲೆಯಲ್ಲಿ ಇಂದು ಹುಲಿ ಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗು ತ್ತಿದೆ ಎಂದ ಅವರು, ಕರ್ನಾಟಕದಲ್ಲಿ ನೂರಾರು ಹುಲಿಗಳಿದ್ದು, ಚಾಮರಾಜ ನಗರದ ಬಂಡೀಪುರ, ಬಿಳಿಗಿರಿರಂಗನ ಬೆಟ್ಟ, ಮಲೆ ಮಹದೇಶ್ವರಬೆಟ್ಟ ಹುಲಿ ಯೋಜನೆಗಳು ವಿಶ್ವ ಪ್ರಸಿದ್ಧವಾಗಿರುವುದು ಮತ್ತಷ್ಟು ಹೆಮ್ಮೆ ತಂದಿದೆ ಎಂದರು.

ಬಂಡೀಪುರ ಹುಲಿ ಯೋಜನೆ ಮೂಲಕ ವಿಶ್ವ ವಿಖ್ಯಾತಿಯಾಗಿರುವ ಚಾಮರಾಜನಗರ ಜಿಲ್ಲೆ ಪ್ರವಾಸೋದ್ಯಮ ಕೇಂದ್ರವಾಗಲಿ. ಆ ಮೂಲಕ ಜಿಲ್ಲೆಯಲ್ಲಿ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಉದ್ಯೋಗ ಸೃಷ್ಟಿಯಾಗಲಿ. ಕೇಂದ್ರ ಸರ್ಕಾರ ಅರಣ್ಯ ಸಂರಕ್ಷಣೆಗೆ ಮತ್ತಷ್ಟು ಕಾನೂನುಗಳನ್ನು ಜಾರಿಗೆ ತಂದು ಪ್ರಕೃತಿ ಉಳಿಸುವ ಕೆಲಸ ಮಾಡಲಿ ಎಂದರು.

ಜೈಹಿಂದ್ ಪ್ರತಿಷ್ಠಾನದ ನಿರ್ದೇಶಕ ಶ್ರೀನಿವಾಸ್ ಮಾತನಾಡಿ, ಸಾರ್ವಜನಿಕರಿಗೆ ಅರಣ್ಯ ಸಂರಕ್ಷಣೆ ಮತ್ತು ಪ್ರಾಣಿಗಳ ಬಗ್ಗೆ ಅರಿವು ಮೂಡಿಸಬೇಕು. ಕಾಡಂಚಿನ ಪ್ರದೇಶಗಳ ಜನರಲ್ಲಿ ಪೂರ್ಣ ವಿಶ್ವಾಸ ತುಂಬಿ ಕಾಡನ್ನು ಸಂರಕ್ಷಿಸುವ ದಿಕ್ಕಿನಲ್ಲಿ ಅವರ ಸಹಕಾರ ಪಡೆಯಬೇಕು ಎಂದರು.

ಝಾನ್ಸಿ ಮಕ್ಕಳ ಪರಿಷತ್ತಿನ ಶ್ರಾವ್ಯ ಎಸ್.ಋಗ್ವೇದಿ, ಕಿಶೋರ್, ಜೈಹಿಂದ್ ಪ್ರತಿಷ್ಠಾನದ ರವಿ, ಸುಹಾಸ್, ಭಾರದ್ವಾಜ್, ಮಹದೇವ ಇತರರಿದ್ದರು.



ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಪಂ ನೂತನ ಅಧ್ಯಕ್ಷರಾಗಿ ತೊಂಡವಾಡಿ ಗ್ರಾಮದ ಹೊಣಕಾರ ನಾಯಕ, ಉಪಾಧ್ಯಕ್ಷೆಯಾಗಿ ಪದ್ಮ ಆಯ್ಕೆಯಾಗಿದ್ದಾರೆ.

ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿ: ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ, ಜು.30– ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಬೂದಿತಿಟ್ಟು ಗ್ರಾಮದ ಉಪ್ಪಾರ ಸಮುದಾಯ ಭವನದಲ್ಲಿ ಉಪ್ಪಾರ ಸಮುದಾಯದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಮುದಾಯದವರು ಮೂಢನಂಬಿಕೆಯಿಂದ ಹೊರಬರಬೇಕು. ಬಾಲ್ಯವಿವಾಹವನ್ನು ನಿಲ್ಲಿಸಬೇಕು. ಮಕ್ಕಳ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸದೆ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಪಡೆದು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಪಿ.ಲಿಂಗರಾಜು, ಗ್ರಾಪಂ ಉಪಾಧ್ಯಕ್ಷ ಸಿದ್ದರಾಜು, ಯಜಮಾನರಾದ ಮಹದೇವಸ್ವಾಮಿ, ಶಿವನಂಜಶೆಟ್ಟಿ, ಮಾಜಿ ಯಜಮಾನರಾದ ಚೌಡಶೆಟ್ಟಿ, ಮಹದೇವಶೆಟ್ಟಿ, ಲಿಂಗರಾಜ, ಮಹದೇವಶೆಟ್ಟಿ, ಮುಖಂಡರಾದ ನಾಗೇಶ್, ರಾಚಶೆಟ್ಟಿ, ಮಹೇಶ್, ರಮೇಶ್, ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು ಹಾಜರಿದ್ದರು.

ಅಂಗನವಾಡಿಗಳಿಗೆ ಆಹಾರ ಪದಾರ್ಥ ವಿತರಣೆ

ಚಾಮರಾಜನಗರ, ಜು.30– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಳ್ಳೇಗಾಲ ಹಾಗೂ ಹನೂರು ತಾಲೂಕು ವ್ಯಾಪ್ತಿಯ 479 ಅಂಗನವಾಡಿ ಕೇಂದ್ರಗಳಿಗೆ ಆ.5 ರವರೆಗೆ ಆಹಾರ ಪದಾರ್ಥ ವಿತರಿಸುತ್ತಿದೆ.

ಜು.31ರಂದು ಮಾರ್ಟಳ್ಳಿ, ಚಿಲಕವಾಡಿ, ಆ.1ರಂದು ಕೂಡ್ಲೂರು, 2ರಂದು ಕೌದಳ್ಳಿ, 3ರಂದು ದಂಟಳ್ಳಿ ಹಾಗೂ 5ರಂದು ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥ ವಿತರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಸೋಮವಾರ 31 ಜುಲೈ 2023

ಮೂರನೇ ಪುಟದಿಂದ

ಜಿ–20 ಶೃಂಗಸಭೆ



ಜಿ–20 ಶೃಂಗಸಭೆಗೆ ಮುಂಚಿತವಾಗಿ ವಸತಿಯನ್ನು ಕಾಯ್ದಿರಿಸಿದ ಹೋಟೆಲ್‌ಗೆ ಪ್ರತಿನಿಧಿಯೊಬ್ಬರು ಆಗಮಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ದಕ್ಷಿಣ ಆಫ್ರಿಕಾ, ಜಪಾನ್, ಭಾರತ, ಫ್ರಾನ್ಸ್, ಜರ್ಮನಿ ಸೇರಿದಂತೆ 20 ದೇಶಗಳು ಶೃಂಗಸಭೆಯಲ್ಲಿ ಇರುವ ದೇಶಗಳಾಗಿದೆ. ಮೈಸೂರಿನ ಎಂ.ಜಿ.ರಸ್ತೆಯ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಜುಲೈ 31, ಆಗಸ್ಟ್ 1, ಆಗಸ್ಟ್ 3 ರಂದು ಶೃಂಗಸಭೆ ನಡೆಯಲಿದೆ. ಆದರೆ ವಿದೇಶಿ ಪ್ರತಿನಿಧಿಗಳು ವಾಸ್ತವ್ಯ ಹೂಡಲು ಮೈಸೂರಿನ ಹೈವೇ ವೃತ್ತದ ಬಳಿ ಇರುವ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ನಲ್ಲಿ 70 ರೂಂಗಳನ್ನು ಬುಕ್ ಮಾಡಲಾಗಿದೆ. ಶೃಂಗಸಭೆ ನಂತರ ವಿದೇಶಿ ಪ್ರತಿನಿಧಿಗಳಿಗೆ ಮೈಸೂರಿನ ಪ್ರವಾಸಿ ತಾಣಗಳ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ. ಆಗಸ್ಟ್ 1ರಂದು ಮಧ್ಯಾಹ್ನದ ನಂತರ ಮೈಸೂರು ಅರಮನೆ ವೀಕ್ಷಣೆ ಮಾಡುವ ವಿದೇಶಿ ಪ್ರತಿನಿಧಿಗಳು ಆ.2ರಂದು ರಾತ್ರಿ ಧ್ವನಿ ಮತ್ತು ಬೆಳಕು ವೀಕ್ಷಿಸಲಿದ್ದಾರೆ. ವಿದೇಶಿ ರಾಯಭಾರಿಗಳು ಸೇರಿದಂತೆ ವಿದೇಶಿ ಪ್ರತಿನಿಧಿಗಳು ಶೃಂಗಸಭೆಯಲ್ಲಿ ಭಾಗವಹಿಸುತ್ತಿರುವ ಕಾರಣ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ರ‍್ಯಾಡಿಸನ್ ಬ್ಲೂ ಹಾಗೂ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ನಲ್ಲಿ ಪೊಲೀಸರು ಹದ್ದಿನ ಕಣ್ಣು ಇಟ್ಟಿದ್ದಾರೆ. ವಿದೇಶಿ ಪ್ರತಿನಿಧಿಗಳು ಸಂಚಾರ ಮಾಡುವ ರಸ್ತೆಗಳ ಸಿಸಿ ಕ್ಯಾಮರಾಗಳನ್ನು ಸಕ್ರಿಯಗೊಳಿಸಲಾಗಿದೆ. ಜೊತೆಗೆ ಖಾಸಗಿಯಾಗಿ ಅಳವಡಿಸಿರುವ ಸಿಸಿ ಕ್ಯಾಮರಾಗಳ ಬಗ್ಗೆ ಸರ್ವೆ ಕೂಡ ಮಾಡಲಾಗಿದೆ. ವಿದೇಶಿ ಪ್ರತಿನಿಧಿಗಳು ಆಗಮಿಸುತ್ತಿರುವ ಕಾರಣ ಪೊಲೀಸರು ಕಟ್ಟುನಿಟ್ಟಾಗಿ ಶಿಸ್ತು ಪಾಲಿಸಬೇಕು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಸೂಚಿಸಿದ್ದಾರೆ. ಎರಡೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡುವ ಇತರೆ ವ್ಯಕ್ತಿಗಳನ್ನು ಸಮಗ್ರವಾಗಿ ಶೋಧಿಸಬೇಕು. ಅಪರಿಚಿತ ವ್ಯಕ್ತಿಗಳು ಎರಡು ಹೋಟೆಲ್‌ನತ್ತ ಸುಳಿಯದಂತೆ ನೋಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಭದ್ರತಾ ದೋಪ ಆಗಬಾರದು ಎಂದು ಹೇಳಿದ್ದಾರೆ. ಜಾಗತಿಕ ತಾಪಮಾನ, ಮಾಲಿನ್ಯ ಸೇರಿದಂತೆ ಸಮಕಾಲೀನ ಜಾಗತಿಕ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಬಗ್ಗೆ ಜಿ–20 ಶೃಂಗಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಗುತ್ತಿದೆ. ಅಂತಿಮ ನಿರ್ಣಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ ಶೃಂಗಸಭೆಯಲ್ಲಿ ತೀರ್ಮಾನಗಳಾಗುತ್ತದೆ. ವಿಶ್ವದ ಹಲವು ದೇಶಗಳು ಭಾಗಿಯಾಗುವ ಜಿ–20 ಶೃಂಗಸಭೆ ಭಾರತದಲ್ಲಿ ನಡೆಯುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಈಗ ಇಂತಹ ಉನ್ನತ ಮಟ್ಟದ ಜಾಗತಿಕ ಸಭೆ ಮೈಸೂರಿನಲ್ಲಿ ನಡೆಯುತ್ತಿರುವುದು ಸಂತಸದ ಸಂಗತಿಯಾಗಿದೆ.

ಜಿ–20 ಶೃಂಗಸಭೆ ನಡೆಯುತ್ತಿರುವ ಹಿನ್ನೆಲೆ ಸೆಕ್ಷನ್ 144 ಪ್ರಕಾರ ಮೈಸೂರು ಅರಮನೆ ಸೇರಿದಂತೆ ಕೆಲವು ಸ್ಥಳಗಳನ್ನು 'Temporary No Flying Zone' ಎಂದು ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಘೋಷಿಸಿದ್ದಾರೆ.



ಜಿ–20 ಶೃಂಗಸಭೆಯ ಕಾರ್ಯಕ್ರಮಗಳು ಜುಲೈ 31ರಂದು ಆ.3ರವರೆಗೆ ನಡೆಯಲಿದೆ. 250 ವಿದೇಶಿ ಗಣ್ಯರು ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮಗಳು ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನಡೆಯಲಿದ್ದು, ವಿದೇಶಿ ಗಣ್ಯರು ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರ‍್ಯಾಡಿಸನ್ ಬ್ಲೂ ಹೋಟೆಲ್, ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್ ಹಾಗೂ ಮೈಸೂರು ಅರಮನೆ ಸುತ್ತಮುತ್ತಲಿನ 1 ಕಿಲೋ ಮೀಟರ್ ವ್ಯಾಪ್ತಿಯ ವಾಯು ಪ್ರದೇಶದಲ್ಲಿ ಡ್ರೋನ್ ಸೇರಿದಂತೆ ಎಲ್ಲಾ ರೀತಿಯ ಹಾರಾಟವನ್ನು ನಿಷೇಧಿಸಲಾಗಿದೆ ಎಂದು ಹೇಳಿದ್ದಾರೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ 'Temporary No Flying Zone' ಎಂದು ಘೋಷಣೆ ಮಾಡಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿ ಅನಧಿಕೃತವಾಗಿ ಡ್ರೋನ್ ಸೇರಿದಂತೆ ಯಾವುದೇ ರೀತಿಯ ಹಾರಾಟ ನಡೆಸಿದರೆ ಕಾನೂನಿನ ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಎಚ್ಚರಿಸಿದ್ದಾರೆ.

ಡ್ರೋನ್‌ಗಳ ರಾಜಾರೋಷ ಹಾರಾಟ

ಸ್ಪೋರ್ಟ್ಸ್ ಅಡ್ವೆಂಚರ್ ಅಕಾಡೆಮಿ ಅಥವಾ ಚೈನ್ನೈನಲ್ಲಿರುವ ಮತ್ತೊಂದು ಕಂಪನಿಯಿಂದ ಲೈಸನ್ಸ್ ಪಡೆಯಬೇಕು. ಲೈಸನ್ಸ್ ಪಡೆಯದೆ ಅಕ್ರಮವಾಗಿ ಡ್ರೋನ್ ಹಾರಾಟ ನಡೆಸಿದರೆ 1.50 ಲಕ್ಷ ರೂಪಾಯಿ ದಂಡವನ್ನು ವಿಧಿಸಲಾಗುತ್ತದೆ.

ವಿದೇಶಿ ಡ್ರೋನ್‌ಗಳಿಂದ ದೇಶದ ರಕ್ಷಣೆಗೆ ಧಕ್ಕೆ ಆಗುತ್ತದೆ ಎಂಬ ಕಾರಣದಿಂದ ಕೇಂದ್ರ ಸರ್ಕಾರದ ಡಿಜಿಎಫ್‌ಎಫ್ (ಡೈರಕ್ಟರೇಟ್ ಜನರಲ್ ಆಪ್ ಫಾರಿನ್ ಟ್ರೇಡ್) ಚೀನಾ ಸೇರಿದಂತೆ ವಿದೇಶದ ಎಲ್ಲಾ ಡ್ರೋನ್‌ಗಳ ಮಾರಾಟವನ್ನು ನಿಷೇಧ ಮಾಡಿದೆ. ಆದರೆ ಚೀನಾದಿಂದ ಕಳ್ಳಸಾಗಾಣಿಕೆ ಮಾರ್ಗದಲ್ಲಿ ಬರುವ ಡ್ರೋನ್‌ಗಳು ಭಾರತದಲ್ಲಿ ಅಕ್ರಮವಾಗಿ ಮಾರಾಟವಾಗುತ್ತಿವೆ. ಭೂತಾನ್, ನೇಪಾಳ, ಬಾಂಗ್ಲಾದೇಶ ಹಾಗೂ ಪಾಕಿಸ್ತಾನದ ಮೂಲಕ ಕಳ್ಳ ಸಾಗಾಣಿಕೆ ಮಾರ್ಗದಲ್ಲಿ ಡ್ರೋನ್‌ಗಳು ಭಾರತಕ್ಕೆ ಬರುತ್ತಿವೆ. ಹೀಗೆ ಕಳ್ಳಸಾಗಾಣಿಕೆಯಿಂದ ಬಂದ ಡ್ರೋನ್‌ಗಳನ್ನು ಬಹಳಷ್ಟು ಜನರು ಖರೀದಿ ಮಾಡಿ ಮೈಸೂರು, ಬೆಂಗಳೂರು ಸೇರಿದಂತೆ ಹಲವಡೆ ಅಕ್ರಮವಾಗಿ ಹಾರಾಟ ನಡೆಸುತ್ತಿದ್ದಾರೆ. 250 ಗ್ರಾಂ ತೂಕದ ಡ್ರೋನ್‌ಗಳನ್ನು ಕೇವಲ ಸೀಮಿತ ಸ್ಥಳದಲ್ಲಿ ಮಾರಾಟ ಹಾರಾಟ ಮಾಡಬಹುದು. ತುಂಬಾ ಎತ್ತರದಲ್ಲಿ ಹೊರಗೆ ಹಾರಾಟ ನಡೆಸಿದರೆ ಗಾಳಿಗೆ ಅದು ತೂರಿ ಹೋಗುತ್ತದೆ. ಆದ ಕಾರಣ ಬಹಳಷ್ಟು ಜನರು 250 ಗ್ರಾಂ ಮೇಲ್ಪಟ್ಟ ತೂಕದ ಡ್ರೋನ್‌ಗಳನ್ನು ಲೈಸನ್ಸ್ ಪಡೆಯದ ಅಕ್ರಮವಾಗಿ ಹಾರಾಟ ನಡೆಸುತ್ತಿದ್ದಾರೆ. ಈ ರೀತಿಯ 250 ಗ್ರಾಂ ಮೇಲ್ಪಟ್ಟ ತೂಕದ ಡ್ರೋನ್‌ಗಳನ್ನು ಮೈಸೂರಿನಲ್ಲಿ ರಾಜಾರೋಷವಾಗಿ ಬಳಸುತ್ತಿದ್ದಾರೆ. ಮೈಸೂರಿನ ಚಾಮುಂಡಿಬೆಟ್ಟದ ಗಾಳಿ ಗೋಪುರ, ವ್ಯೂ ಪಾಯಿಂಟ್, ದೇವಾಲಯದ ಸುತ್ತ ಹಾರಾಟ ಮಾಡಿ ರೀಲ್ಸ್ ಮಾಡಿರುವ ಸಾಕಷ್ಟು ಉದಾಹರಣೆಗಳಿವೆ. ಈ ಹಿಂದೆ ಮೈಸೂರು ಅರಮನೆ ಸುತ್ತ ಭದ್ರತೆಯ ದೃಷ್ಟಿಯಿಂದ ಎಲ್ಲಾ ತರಹದ ಡ್ರೋನ್ ಹಾರಾಟಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಆದರೂ ಅರಮನೆ ಸುತ್ತ ಕೆಲವರು ರಾಜಾರೋಷವಾಗಿ ಡ್ರೋನ್ ಹಾರಾಟ ನಡೆಸುತ್ತಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ದಸರಾ ಉನ್ನತ ಮಟ್ಟದ ಸಭೆ

ಹೊಡೆಯುತ್ತೇವೆ. ಅದ್ಧೂರಿಯಾಗಿ ಊಟ ಹಾಕಿದರಾಯಿತು. ಹಾಗೆಯೇ ಎಲ್ಲರನ್ನು ಕರೆದು ದಸರಾ ಹಬ್ಬವನ್ನು ಅದ್ಧೂರಿಯಾಗಿ ಆಚರಣೆ ಮಾಡೋಣ ಎಂದು ತಮ್ಮದೇ ಶೈಲಿಯಲ್ಲಿ ಹೇಳಿದ್ದಾರೆ. ಈಗ ಕೋವಿಡ್ ಆತಂಕವಿಲ್ಲ, ಉತ್ತಮ ಮಳೆ–ಬೆಳೆಯಿಂದ ಸುಭಿಕ್ಷವಾದ ವಾತಾವರಣವಿದೆ. ಹಾಗಾಗಿ ಮೈಸೂರಿನ ಕಲೆ, ಸಂಸ್ಕೃತಿ ಹಾಗೂ ಮಹಾರಾಜರ ಪರಂಪರೆಯನ್ನು ಮುಂದುವರೆಸುವ ಉದ್ದೇಶದೊಂದಿಗೆ ಅದ್ಧೂರಿಯಾಗಿ ದಸರಾ ಆಚರಿಸಲಾಗುವುದು. ದಸರೆಗೆ ವಿಶೇಷ ಅನುದಾನದ ಬಗ್ಗೆ ಚರ್ಚೆಯಾಗಿಲ್ಲ. ಆದರೆ ಅದ್ಧೂರಿ ದಸರಾ ಸೇರಿದಂತೆ ಹಲವು ವಿಚಾರಗಳನ್ನು ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದು ಅವರು ತಿಳಿಸಿದ್ದರು.

ಖದೀಮನ ಸೆರೆ

ವಿಜಯನಗರ ಮೂರನೇ ಹಂತದಲ್ಲಿರುವ ಸಿಲ್ವರ್ ಓಕ್ ಹೋಟೆಲ್ ಮಾಲೀಕ ಕೆ.ಆರ್.ಸಂತೋಷ್ ಅವರು ತಮ್ಮ ಎಸ್‌ಯುವಿ(ಕೆಎ-09-ಎಂಡಿ-9977) ಕಾರನ್ನು ವಿಧಾನಸಭಾ ಚುನಾವಣೆಯ ಮತ ಎಣಿಕೆ ಹಿಂದಿನ ದಿನ(ಮೇ 12) ರಾತ್ರಿ ಮನೆ ಮುಂದೆ ನಿಲ್ಲಿಸಿದ್ದರು. ರಾತ್ರಿ 12 ಗಂಟೆಯಲ್ಲೂ ಅಲ್ಲಿಯೇ ಇದ್ದ ಕಾರು ಮರುದಿನ ಬೆಳಗ್ಗೆ ಕಳುವಾಗಿತ್ತು. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಬಗ್ಗೆ ಮಾತನಾಡಿದ ಸಂತೋಷ್, ತಾನು 2018ರಲ್ಲಿ ಕಾರನ್ನು ಖರೀದಿಸಿದ್ದೆ. ಶಿವಣ್ಣರ ಮನೆಯಿಂದ ಕೇವಲ 100 ಮೀಟರ್ ದೂರದಲ್ಲಿ ನಮ್ಮ ಮನೆಯಿದೆ. ಕಳುವಾಗಿದ್ದ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆಂದು ತಿಳಿದು ಸಮಾಧಾನವಾಯಿತು. ಒಮ್ಮೆ ಕಾರು ಪರಿಶೀಲಿಸುವಂತೆ ತಿಳಿಸಿದ್ದಾರೆ ಎಂದು ಹೇಳಿದರು.

ಹುಲಿ ಸಂಖ್ಯೆಯಲ್ಲಿ ರಾಷ್ಟ್ರಮಟ್ಟದಲ್ಲಿ ಬಂಡೀಪುರಕ್ಕೆ ದ್ವಿತೀಯ, ನಾಗರಹೊಳೆಗೆ ತೃತೀಯ ಸ್ಥಾನ

- ಉತ್ತರಾಖಂಡ್‌ನ ಜಿಮ್‌ಕಾರ್ಮೆಟ್‌ಗೆ ಮೊದಲ ಸ್ಥಾನ
- ಬಂಡೀಪುರದಲ್ಲಿ 191, ನಾಗರಹೊಳೆಯಲ್ಲಿ 185, ಬಿಳಿಗಿರಿರಂಗನಬೆಟ್ಟದಲ್ಲಿ 60, ಭದ್ರದಲ್ಲಿ 44, ಕಾಳಿ ಕಾನನದಲ್ಲಿ 29 ಹುಲಿ ದಾಖಲು

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜು.30– ದೇಶದಲ್ಲಿ ಹುಲಿಗಳ ಸಂಖ್ಯೆ ವೃದ್ಧಿಯಾಗಿದ್ದು, ದೇಶದ 53 ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾಜ್ಯದ ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದುಕೊಂಡಿದ್ದರೆ, ಉತ್ತರಾಖಂಡ್‌ನ ಜಿಮ್‌ಕಾರ್ಮೆಟ್ ಹುಲಿ ಸಂರಕ್ಷಿತ ಪ್ರದೇಶ ಮೊದಲ ಸ್ಥಾನ ಅಲಂಕರಿಸಿದೆ.

ನಾಲ್ಕು ವರ್ಷಕ್ಕೊಮ್ಮೆ ನಡೆಸುವ ಹುಲಿ ಸಮೀಕ್ಷೆಯನ್ನು ಈ ಬಾರಿ ದೇಶದಾದ್ಯಂತ ವೈಜ್ಞಾನಿಕವಾಗಿ ನಡೆಸಲಾಗಿತ್ತು. 2018ರಲ್ಲಿ ನಡೆಸಲಾದ ಹುಲಿ ಸಮೀಕ್ಷೆಯಲ್ಲಿ ದೇಶದಲ್ಲಿ 2967 ಹುಲಿಗಳಿರುವುದು ಪತ್ತೆಯಾಗಿದ್ದರೆ, 2022ರಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ದೇಶದಲ್ಲಿ 3,167 ಹುಲಿಗಳಿವೆ ಎಂದು ಏ.9ರಂದು ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ನಡೆದ ಹುಲಿ ಸಂರಕ್ಷಿತ ಪ್ರದೇಶದ 50ನೇ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಡುಗಡೆ ಮಾಡಿದ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಆದರೆ, ವಿಶ್ವ ಹುಲಿ ದಿನದ ಅಂಗವಾಗಿ ರಾಷ್ಟ್ರೀಯ ಹುಲಿ ಪ್ರಾಧಿಕಾರ(ಎನ್‌ಟಿಸಿಎ) ಬಿಡುಗಡೆ ಮಾಡಿದ ವರದಿಯಲ್ಲಿ ಭಾರತದಲ್ಲಿ 3,682 ಹುಲಿಗಳಿರುವುದು ದೃಢಪಟ್ಟಿದೆ. ಇದರಿಂದ ವಿಶ್ವದ 13 ರಾಷ್ಟ್ರಗಳಲ್ಲಿರುವ 4500 ಹುಲಿಗಳಲ್ಲಿ ಭಾರತದಲ್ಲೇ 3,682 ಹುಲಿಗಳಿರುವುದು ವಿಶ್ವದ ದೃಷ್ಟಿ ಭಾರತದತ್ತ ಮತ್ತೊಮ್ಮೆ ಸೆಳೆದಿದೆ.

ದೇಶದ 53 ಹುಲಿ ಸಂರಕ್ಷಿತ ಪ್ರದೇಶದಲ್ಲಿ ಉತ್ತರಾಖಂಡದ ಜಿಮ್ ಕಾರ್ಮೆಟ್ ಹುಲಿ ಸಂರಕ್ಷಿತ ಪ್ರದೇಶದಲ್ಲಿ 319 ಹುಲಿಗಳಿದ್ದು, ಮೊದಲ ಸ್ಥಾನ ಅಲಂಕರಿಸಿದೆ. ಕರ್ನಾಟಕದ ಮೊದಲ ಹುಲಿ ಸಂರಕ್ಷಿತ ಪ್ರದೇಶವಾದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 191 ಹುಲಿ ಆವಾಸ ಸ್ಥಾನವಾಗಿ ದೇಶದಲ್ಲೇ ಎರಡನೇ ಸ್ಥಾನ ಪಡೆದುಕೊಂಡರೆ, ನಾಗರಹೊಳೆ ಅಭಯಾರಣ್ಯವು 185 ಹುಲಿಗಳೊಂದಿಗೆ ಮೂರನೇ ಸ್ಥಾನ ಪಡೆದಿದೆ. ತಮಿಳುನಾಡಿನ ಮಧುಮಲೈ ಅರಣ್ಯವು 167 ಹುಲಿಗಳೊಂದಿಗೆ ನಾಲ್ಕನೇ ಸ್ಥಾನ ಪಡೆದಿದ್ದರೆ, ಜಾರ್ಖಂಡ್‌ನ ಬಾಂಧವಗಢ್ ಅರಣ್ಯದಲ್ಲಿ 165 ಹುಲಿಯಿಂದಾಗಿ ಐದನೇ ಸ್ಥಾನ, ಉತ್ತರ ಪ್ರದೇಶದ ದುಧ್ವಾ ಅರಣ್ಯ 153 ಹುಲಿಗಳೊಂದಿಗೆ 6ನೇ ಸ್ಥಾನ ಪಡೆದುಕೊಂಡಿದೆ ಅರುಣಾಚಲ ಪ್ರದೇಶದ ಕಮ್ಲಾಂಗ್ ಅರಣ್ಯವು ಶೂನ್ಯ, ಮಿಜೋರಂನ ದಂಪಾ ಅರಣ್ಯವೂ ಹುಲಿಗಳ ಆವಾಸ ಸ್ಥಾನದಲ್ಲಿ ಶೂನ್ಯ ಸಾಧನೆ ಮಾಡಿದೆ.


ಬಂಡೀಪುರ ಅರಣ್ಯಕ್ಕೆ ಮತ್ತೊಂದು ಗರಿ: ಕರ್ನಾಟಕ 5 ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಬಂಡೀಪುರ ಅಭಯಾರಣ್ಯವು ಅತಿ ಹೆಚ್ಚು ಹುಲಿ ಹೊಂದಿರುವ ಅರಣ್ಯಗಳಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನ ಪಡೆದಿದೆ. ಹುಲಿ ಸಂರಕ್ಷಿತ ಪ್ರದೇಶಗಳ 50ನೇ ವಾರ್ಷಿಕೋತ್ಸವದ ಅಂಗವಾಗಿ ಏ.9ರಂದು ಪ್ರಧಾನಿ ನರೇಂದ್ರ ಮೋದಿ ಅವರು ಬಂಡೀಪುರಕ್ಕೆ ಭೇಟಿ ನೀಡಿದ ಬಳಿಕ ದೇಶದ ಗಮನ ಬಂಡೀಪುರದತ್ತ ಬೀರಲಾರಂಭವಾಗಿದ್ದು, ವನ್ಯಸಂಪತ್ತಿನ ಸಂರಕ್ಷಣೆ, ಪರಿಣಾಮಕಾರಿ ನಿರ್ವಹಣೆಗೆ ಕೈಗೊಂಡ ಕ್ರಮದಿಂದಾಗಿ ಅತ್ಯುತ್ತಮ ಅಂಕ ಪಡೆದಿದೆ. ದೇಶದ 53 ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಂಡೀಪುರ ವನ್ಯಜೀವಿಗಳ ಸಂರಕ್ಷಣೆಯಲ್ಲಿ ಎರಡನೇ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರವಾಗಿತ್ತು. ನಾಲ್ಕು ವರ್ಷಕೊಮ್ಮೆ ನಡೆಯುವ ಸರ್ವೆ ಕಾರ್ಯದಲ್ಲಿ ಬಂಡೀಪುರಕ್ಕೆ ಶೇ.94.8 ಅಂಕ ಲಭಿಸಿ ಎರಡನೇ ಸ್ಥಾನ ಪಡೆದಿದೆ. ಕಳೆದ ವರ್ಷ ಎನ್‌ಟಿಸಿಎ, ವೈಲ್ಡ್‌ಲೈಫ್ ಇನ್ಸ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಎಂಓಇಎಫ್ ಸಂಸ್ಥೆಗಳು ನಡೆಸಿದ ಸರ್ವೆಯಲ್ಲಿ ರಾಜ್ಯದಲ್ಲಿ ಬಂಡೀಪುರ ಅರಣ್ಯ ಬೆಸ್ಟ್ ಎಂದು ಸರ್ಟಿಫಿಕೆಟ್ ನೀಡಿದೆ. ವಿದ್ಯುತ್ ತಂತಿ ಸ್ಪರ್ಶದಿಂದ ಸಾವು–ಬದುಕಿನಿಂದ ಹೋರಾಡುತ್ತಿದ್ದ ಕಾಡಾನೆ ಜೀವ ರಕ್ಷಣೆಗೆ ಪಶುವೈದ್ಯ ಹಾಗೂ ಉತ್ತಮ ಸೇವೆಗಾಗಿ ಗಾರ್ಡ್‌ವೊಬ್ಬರಿಗೂ ಪ್ರಶಸ್ತಿ ಲಭ್ಯವಾಗಿತ್ತು. ಇದೀಗ ಅತಿ ಹೆಚ್ಚು ಹುಲಿ ಹೊಂದಿರುವ ದೇಶದ ಎರಡನೇ ಹಾಗೂ ರಾಜ್ಯದ ಮೊದಲನೇ ಹುಲಿ ಸಂರಕ್ಷಿತ ಪ್ರದೇಶ ಎಂಬ ಕೀರ್ತಿಗೆ ಪಾತ್ರವಾಗಿದೆ. 1036 ಚದರ ಕಿ.ಮಿ ವ್ಯಾಪ್ತಿ ಹೊಂದಿರುವ ಬಂಡೀಪುರ ಅರಣ್ಯವು ಬಂಡೀಪುರ, ಗುಂಡ್ಲುಪೇಟೆ ಹಾಗೂ ಹೆಡಿಯಾಲ ಎಂಬ ಮೂರು ಉಪ ವಿಭಾಗಗಳಾಗಿ ವಿಂಗಡಿಸಲಾಗಿದ್ದು, ಈ ಮೂರು ಉಪ ವಿಭಾಗಗಳಲ್ಲಿ 13 ರೇಂಜ್‌ಗಳಿವೆ. ಬಂಡೀಪುರ, ಗೋಪಾಲಸ್ವಾಮಿಬೆಟ್ಟ, ಮೂಲೆಹೊಳೆ, ಗುಂಡ್ಲುಪೇಟೆ, ಮದ್ದೂರು, ಓಂಕಾರ್, ಕುಂದಕೆರೆ, ಹೆಡಿಯಾಲ, ನುಗು, ಮಳೆಯೂರು, ಕಲ್ಕೆರೆ, ಎನ್.ಬೇಗೂರು ಹಾಗೂ ಗುಂಡ್ರೆ ವಲಯಗಳು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಸೇರಿದೆ.

ನಾಗರಹೊಳೆ ಸಾಧನೆಯೂ ಗಮನಾರ್ಹ: ಮೈಸೂರು ಹಾಗೂ ಕೊಡಗು ಜಿಲ್ಲೆಯ ವ್ಯಾಪ್ತಿಗೆ ಸೇರಿರುವ ನಾಗರಹೊಳೆ(ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನ) ಅಭಯಾರಣ್ಯದಲ್ಲಿ ಹುಲಿ ಗಣತಿಯಲ್ಲಿ 185 ಹುಲಿಗಳನ್ನು ಹೊಂದುವ ಮೂಲಕ ಅತಿ ಹೆಚ್ಚು ಹುಲಿ ಹೊಂದಿರುವ ಅರಣ್ಯದಲ್ಲಿ ದೇಶದಲ್ಲಿ ಮೂರನೇ ಹಾಗೂ ರಾಜ್ಯದಲ್ಲಿ ಎರಡನೇ ಸ್ಥಾನ ಗಳಿಸಿಕೊಂಡಿದೆ. 843 ಚದರ ಕಿ.ಮೀ ವಿಸ್ತಾರ ಹೊಂದಿದ್ದು ಈ ಅರಣ್ಯವು, ನಾಗರಹೊಳೆ, ಕಲ್ಲಹಳ್ಳ, ಆನೆಚೌಕೂರು, ಹುಣಸೂರು, ವೀರನಹೊಸಳ್ಳಿ, ಮೇಟಿಕುಪ್ಪೆ, ಅಂತರಸಂತೆ, ಡಿ.ಬಿ.ಕುಪ್ಪೆ ವಲಯಗಳಾಗಿ ವಿಂಗಡಿಸಲಾಗಿದೆ. ಮೈಸೂರು ಮತ್ತು ಕೊಡಗು ಜಿಲ್ಲೆಗಳನ್ನೊಳಗೊಂಡ ಈ ಅಭಯಾರಣ್ಯ ವೈವಿಧ್ಯಮಯ ಕಾಡಾಗಿದೆ. ಕಬಿನಿ ಹಿನ್ನೀರು ಹಾಗೂ ಅಂತರಸಂತೆ ವಲಯದಲ್ಲಿ ಕಪ್ಪು ಚಿರತೆ, ಆನೆಗಳ ಹಿಂಡು ಸೇರಿದಂತೆ ಜೀವವೈವಿಧ್ಯತೆಯೊಂದಿಗೆ ಎಲ್ಲರ ಗಮನ ಸೆಳೆದಿದೆ. ಇದೀಗ ಹುಲಿಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿ ಮೆರಗು ಹೆಚ್ಚಿಸಿಕೊಂಡಿದೆ.



ರಾಜ್ಯ ಅರಣ್ಯದಲ್ಲಿ ಹುಲಿ ಛಾಪು

ಬಂಡೀಪುರ	191
ನಾಗರಹೊಳೆ	185
ಬಿಳಿಗಿರಿರಂಗನಾಥ ಹುಲಿಸಂರಕ್ಷಿತ ಪ್ರದೇಶ	60
ಭದ್ರಾ	44
ಕಾಳಿ ಅರಣ್ಯ	29



ಹುಲಿ ಗಣತಿ ವರದಿ ಬಿಡುಗಡೆಯಾಗಿದ್ದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 191 ಹುಲಿಗಳು ಸಮೀಕ್ಷೆ ವೇಳೆ ಪತ್ತೆಯಾಗಿವೆ. ಅರಣ್ಯ ಸಂರಕ್ಷಣೆಗೆ ಕೈಗೊಂಡ ಕಟ್ಟುನಿಟ್ಟಿನ ಕ್ರಮ ಹಾಗೂ ಸಿಬ್ಬಂದಿಗಳ ಸಹಕಾರದಿಂದ ಬಂಡೀಪುರ ಅರಣ್ಯವು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿದೆ. ಈ ಹಿಂದೆ ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದ ಕಾಡಾನೆ ರಕ್ಷಣೆ ಮಾಡಿದ್ದನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರು ಮೆಚ್ಚುಗೆ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದರು. ಇದೀಗ ಹೆಚ್ಚು ಹುಲಿ ಹೊಂದಿರುವ ಗಮನಾರ್ಹ ಸಾಧನೆ ಬಂಡೀಪುರ ಅರಣ್ಯಕ್ಕೆ ಲಭಿಸಿದೆ.

- ಡಾ.ಪಿ.ರಮೇಶ್ ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಮಾಡುವ ಕೆಲಸದಲ್ಲೇ ದೇವರನ್ನು ಕಾಣಬೇಕು

ಶ್ರೀ ವಿಶ್ವೇಶ್ವರ ಪ್ರಸನ್ನ ತೀರ್ಥ ಸ್ವಾಮೀಜಿ



ಮೈಸೂರು, ಜು.30(ಸಿಎನ್)–ನಾವು ಮಾಡುವ ಕೆಲಸದಲ್ಲೇ ದೇವರನ್ನು ಕಾಣಬೇಕು. ಬಂದಂತೆ ಪರಿಸ್ಥಿತಿಯನ್ನು ನಿಭಾಯಿಸುವ ಕೌಶಲ್ಯ ರೂಢಿಸಿಕೊಂಡರೆ ಜಗದಲ್ಲಿ ಏನನ್ನು ಬೇಕಾದರೂ ಗೆಲ್ಲಬಹುದು ಎಂದು ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷರಾದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ಸಂಕಲ್ಪ ಅಂಗವಾಗಿ ಭಾನುವಾರ ಆಯೋಜಿಸಲಾಗಿದ್ದ 'ಶ್ರೀಮದ್ರಾಮಾಯಣ' ಪ್ರವಚನ ವೇಳೆ ಮಾತನಾಡಿದರು.

ಸಮುದ್ರ ಮಂಥನದ ಬಗ್ಗೆ ವಿವರಿಸಿದ ಅವರು, ಮಂಥನ ಒಂದು ಸುದೀರ್ಘವಾದ ಪ್ರಕ್ರಿಯೆಯಾಗಿತ್ತು. ಕಡೆಗೋಲಾಗಿ ಮಂದರಾಚಲವನ್ನೂ, ಹಗ್ಗವಾಗಿ ಸರ್ಪಗಳ ರಾಜ ವಾಸುಕಿಯನ್ನೂ ಬಳಸಲಾಯಿತು. ದೇವತೆಗಳು ಹಾವಿನ ಬಾಲವನ್ನು ಮತ್ತು ಅಸುರರು ಹಾವಿನ ಹೆಡೆಯನ್ನು ಹಿಡಿದರು. ಹಾವನ್ನು ಒಮ್ಮೆ ಅಸುರರು ಒಮ್ಮೆ ದೇವತೆಗಳು ಎಳೆದರು. ಇದರಿಂದ ಬೆಟ್ಟವು ತಿರುಗತೊಡಗಿತು. ಸಮುದ್ರಮಂಥನ ಪ್ರಾರಂಭವಾಯಿತು. ಆದರೆ, ಬೆಟ್ಟವು ಸಾಗರದಲ್ಲಿ ಕುಸಿಯತೊಡಗಿತು. ವಿಷ್ಣು ಒಂದು ಆಮೆಯಾಗಿ ತನ್ನ ಎರಡನೇ ಕೂರ್ಮಾವತಾರ ತಾಳಿ ತನ್ನ ಬೆನ್ನಿನ ಮೇಲೆ ಬೆಟ್ಟವನ್ನು ಹೊತ್ತನು.

ದೇವತೆಗಳು ಹಾಗೂ ಅಸುರರು ಸಮುದ್ರ ಮಂಥನ ಮಾಡುವಾಗ, ಹಾಲಾಹಲ ಸಮುದ್ರದಿಂದ ಹೊರಬಂತು. ಇದರಿಂದ ದೇವತೆಗಳು ಹಾಗೂ ಅಸುರರು ಭಯಭೀತರಾದರು, ಏಕೆಂದರೆ ಈ ವಿಷವು ಸೃಷ್ಟಿಯನ್ನೇ ನಾಶ ಮಾಡುವಷ್ಟು ಪ್ರಭಾವಶಾಲಿಯಾಗಿತ್ತು. ಭಗವಂತ ವಿಷ್ಣು ರುದ್ರದೇವರಿಗೆ ಅಶರೀರ ವಾಣಿ ಮೂಲಕ, ದೇವದಾನವರ ಸಮುದ್ರ ಮಂಥನ ವೇಳೆ ವಿಷ ಉದ್ಭವವಾಗಿದೆ. ಇದಕ್ಕೆ ನೀವೇ ಪರಿಹಾರ ಸೂಚಿಸಬೇಕು ಎಂದಾಗ ಶಿವ ಕೊಂಚವೂ ಯೋಚನೆ ಮಾಡದೇ ಭಗವಂತ ಪೂಜೆ ಎಂದು ಅಮೃತವನ್ನು ಕುಡಿದಂತೆ ವಿಷಪಾನ ಮಾಡಿಯೇ ಬಿಟ್ಟರು ಎಂದರು.

ಭಾಗವತರು ಋಷಿಮುನಿಗಳಿಗೂ, ದೇವರಿಗೂ ಇರುವ ವ್ಯತ್ಯಾಸವನ್ನು ಹೀಗೆ ಹೇಳುತ್ತಾರೆ, ಋಷಿಮುನಿಗಳದ್ದು ತಪಸ್ಸು, ಲೋಕಸಮಸ್ತಾ ಸುಖಿನೋಭವಂತು ಎಂದು ಋಷಿಮುನಿಗಳು ತಪಸ್ಸನ್ನು ಮಾಡುತ್ತಾರೆ. ಆದರೆ ದೇವರದ್ದು ತಾಪತ್ರಯ. ಕರ್ತವ್ಯದ ಮೂಲಕ ಕೆಲಸ ಮಾಡಿಸಿ, ಬದ್ಧತೆಯಿಂದ ತಾಪತ್ರಯವನ್ನು ಹೋಗಲಾಡಿಸಿ ಬದುಕುವ ಮಾರ್ಗ ಹೇಳಿಕೊಡಬೇಕಾಗುತ್ತದೆ ಎಂದರು.

ಈ ವೇಳೆ ಖ್ಯಾತ ವೀಣಾವಾದನಕಾರ ಬಾಲು ಮಸ್ತಿ ತಂಡದಿಂದ ವೀಣಾವಾದನ ಮೃದಂಗ, ಪಿಟೀಲು, ಘಟ, ತುಲಾ ವಾದ್ಯಗಳ ಮೂಲಕ ನೋಡುಗರನ್ನು ತಲೆದೂಗಿಸುವಂತೆ ಮಾಡಿದರು.

ಇಂದು ಸಂಜೆ 6ಕ್ಕೆ ಅನಂತ ಪದ್ಮನಾಭ ಭಟ್‌ರಿಂದ ಭಕ್ತ ಪುರಂದರ ದಾಸರ ಹರಿಕಥಾ ಪ್ರಸಂಗ ನಡೆಯಲಿದೆ.

ಕೋಲಾರದಿಂದ ರಾಜಸ್ಥಾನಕ್ಕೆ ಹೊರಟಿದ್ದ ಟೊಮೆಟೊ ತುಂಬಿದ ಲಾರಿ ನಾಪತ್ತೆ: ದೂರು ದಾಖಲು

ಕೋಲಾರ, ಜು.30– ಟೊಮೆಟೊ ಬೆಲೆ ಗಗನಕ್ಕೇರಿದ್ದು, ಮಾರುಕಟ್ಟೆಯಲ್ಲಿ ಕೆಜಿ ಟೊಮೆಟೋ 140 ರೂ.ಗೆ ಏರಿಕೆಯಾಗಿದೆ. ಇದರಿಂದಾಗಿ ಅಲ್ಲಲ್ಲಿ ಟೊಮೆಟೊ ಕಳ್ಳತನ ಪ್ರಕರಣಗಳು ವರದಿಯಾಗುತ್ತಿವೆ. ಟೊಮೆಟೊ ಮಾತ್ರವಲ್ಲದೇ ಅದನ್ನು ಸಾಗಿಸುವ ವಾಹನಗಳ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿವೆ.

ಇತ್ತೀಚೆಗೆ ಕೋಲಾರದಿಂದ ಚಿತ್ರದುರ್ಗಕ್ಕೆ ಟೊಮೆಟೊ ಸಾಗಿಸುತ್ತಿದ್ದ ವಾಹನ ಕಳ್ಳತನವಾಗಿತ್ತು. ಇದೀಗ ಅದೇ ರೀತಿಯಲ್ಲಿ ಸುಮಾರು 21 ಲಕ್ಷ ಮೌಲ್ಯದ ಟೊಮೆಟೊ ತುಂಬಿದ್ದ ಲಾರಿ ನಾಪತ್ತೆಯಾಗಿದೆ. ಜುಲೈ 27 ರಂದು ಕೋಲಾರದಿಂದ ರಾಜಸ್ಥಾನದ ರಾಜಧಾನಿ ಜೈಪುರಕ್ಕೆ ಹೊರಟಿದ್ದ ಲಾರಿ ನಾಪತ್ತೆಯಾಗಿದೆ.

ಲಾರಿ ಚಾಲಕ ಮೊಬೈಲ್ ಸಂಪರ್ಕಕ್ಕೆ ಸಿಗದ ಹಿನ್ನೆಲೆಯಲ್ಲಿ ಮಂಡಿ ವ್ಯಾಪಾರಿಗಳು ಕೋಲಾರ ನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ. ಮೆಹತ್ ಟ್ರಾನ್ಸ್‌ಪೋರ್ಟ್‌ಗೆ ಸೇರಿದ ಮುನಿರೆಡ್ಡಿ ಎಂಬವರಿಗೆ ಸೇರಿದ ಲಾರಿ ನಾಪತ್ತೆಯಾಗಿದೆ. ಇದರಿಂದ ಆತಂಕಗೊಂಡಿರುವ ವ್ಯಾಪಾರಿಗಳು ದೂರು ನೀಡಿದ್ದಾರೆ.

ಖಾಸಗಿ ಕ್ಷಣಗಳ ವಿಡಿಯೋ ವೈರಲ್; ದಾವಣಗೆರೆಯ ಇಬ್ಬರು ಪದವಿ ವಿದ್ಯಾರ್ಥಿಗಳು ಆತ್ಮಹತ್ಯೆ

ದಾವಣಗೆರೆ, ಜು.30– ಖಾಸಗಿ ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದರಿಂದ ನೊಂದು ದಾವಣಗೆರೆಯ ಪದವಿ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ನಡೆದಿದೆ.

ಕಾಲೇಜು ವಿದ್ಯಾರ್ಥಿಗಳಾದ ಯುವ ಜೋಡಿ ಪರಸ್ಪರ ಪ್ರೀತಿಸುತ್ತಿದ್ದು, ಕೆಲ ದಿನಗಳ ಹಿಂದೆ ಕಾಲೇಜಿನ ಮಹಡಿ ಒಂದರಲ್ಲಿ ಖಾಸಗಿ ಕ್ಷಣಗಳನ್ನು ಕಳೆದಿದ್ದರು. ಈ ಘಟನೆಯನ್ನು ಅಪರಿಚಿತ ವ್ಯಕ್ತಿಯೊಬ್ಬ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾನೆ. ಈ ದೃಶ್ಯಗಳು ವೈರಲ್ ಆಗುತ್ತಿದ್ದಂತೆ ಹುಡುಗ ಮತ್ತು ಹುಡುಗಿ ಇಬ್ಬರೂ ಆತ್ಮಹತ್ಯೆಗೆ ಶರಣಾಗಿದ್ದಾರೆ. ಶುಕ್ರವಾರ ಮಧ್ಯಾಹ್ನ ಬಾಲಕಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರೆ, ಶುಕ್ರವಾರ ರಾತ್ರಿ ಬಾಲಕ ಕೂಡ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. ಈ ಮಧ್ಯೆ, ಮೃತ ವಿದ್ಯಾರ್ಥಿಗಳ ಪೋಷಕರು ಮಕ್ಕಳ ಸಾವಿನ ಬಗ್ಗೆ ಪ್ರತ್ಯೇಕ ದೂರುಗಳನ್ನು ದಾಖಲಿಸಿದ್ದಾರೆ. ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

ವಿದ್ಯಮಾನ-1 ; ತಿಂಗಳಿಗೊಂದು ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ

ಜಾಗತೀಕರಣದ ತಲ್ಲಣಗಳ ಬಗ್ಗೆ ನಮ್ಮ ಸಾಹಿತ್ಯ ಕೃಷಿ ಸಮಾಧಾನಕರವಾಗಿಲ್ಲ

ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಡಾ.ಪುರುಷೋತ್ತಮ ಬಿಳಿಮಲೆ ಅಭಿಮತ

ಮೈಸೂರು,ಜು.30(ಪಿಎಂ)– ನಾವು ಕಲ್ಪಿಸಿಕೊಳ್ಳುವ ರಾಷ್ಟ್ರೀಯತೆ ಮತ್ತು ಜಾಗತೀಕರಣ ಕಾರಣದಿಂದ ನಮ್ಮಲ್ಲಿ ಉಂಟಾಗುತ್ತಿರುವ ತಲ್ಲಣಗಳ ಬಗ್ಗೆ ನಮ್ಮ ಸಾಹಿತ್ಯ ಕೃಷಿ ಸಮಾಧಾನಕರವಾಗಿಲ್ಲ. ಆದರೆ ಕನ್ನಡದಲ್ಲಿ ಅದೇ ಜಾಗತೀಕರಣದಿಂದ ಅಂತಾರಾಷ್ಟ್ರೀಯ ಮಟ್ಟದ ಮಹತ್ತರ ಕೃತಿಗಳು ಅನುವಾದಗೊಳ್ಳುವ ಮಹತ್ವದ ಬದಲಾವಣೆ ಸಾಧ್ಯವಾಗಿದೆ ಎಂದು ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಡಾ.ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶಿವರಾತ್ರಿ ರಾಜೇಂದ್ರ ಭವನದಲ್ಲಿ ಸಂವಹನ ಟ್ರಸ್ಟ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 'ವಿದ್ಯಮಾನ–1 ; ತಿಂಗಳಿಗೊಂದು ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮದಲ್ಲಿ 'ಬದಲಾಗುತ್ತಿರುವ ಸಾಹಿತ್ಯದ ವಿದ್ಯಮಾನಗಳು' ಕುರಿತು ಅವರು ಮಾತನಾಡಿದರು.

ಭಾರತದ ಮಾರುಕಟ್ಟೆಯನ್ನು ಜಗತ್ತಿಗೆ ತೆರೆದುಕೊಳ್ಳುವಂತೆ ಮಾಡಲಾದ ಜಾಗತೀಕರಣದ ಕಾಲ 1992. ಬಳಿಕ ಶಿಕ್ಷಣ ಕ್ಷೇತ್ರವೂ ಜಾಗತೀಕರಣಕ್ಕೆ ತೆರೆದುಕೊಂಡಿತು. ನಮ್ಮ ಬರಹಗಾರರೂ ಜಾಗತೀಕರಣದ ಕೆಲ ಪರಿಣಾಮಗಳಿಗೆ ಒಳಗಾದರು. ಜಾಗತೀಕರಣದ ಪ್ರಭಾವ ಕೇವಲ ಮಾರುಕಟ್ಟೆ ಕೇಂದ್ರೀತವಾಗಿ ಉಳಿಯದೇ ನಮ್ಮ ಸಂಸ್ಕೃತಿ–ಭಾಷೆಗಳ ಮೇಲೆ ಪರಿಣಾಮ ಬೀರಿತು. ಜಾಗತೀಕರಣದಿಂದ ಭಾರತೀಯ ವಿವಿಗಳಲ್ಲಿ ವಿದೇಶಿ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶ ನೀಡಲಾಗಿದೆ. ಹೀಗಾಗಿ ಇಂದು ಜೆಎನ್‌ಯುನಲ್ಲಿ ಸುಮಾರು 3 ಸಾವಿರ ವಿದೇಶಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದು ಹೇಳಿದರು.

ಜಾಗತೀಕರಣದಿಂದ ನಮ್ಮಲ್ಲಿ ಉಂಟಾಗುತ್ತಿರುವ ಆಲೋಚನೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಒತ್ತಡಗಳನ್ನು ಸೃಷ್ಟಿ ಮಾಡುತ್ತಿವೆ. ನಾವು ಕಲ್ಪಿಸಿಕೊಳ್ಳುವ ರಾಷ್ಟ್ರೀಯತೆ ಮತ್ತು 1992ರ ನಂತರ ಬೆಳೆಯುತ್ತಿರುವ ಅಂತಾರಾಷ್ಟ್ರೀಯತೆ ನಡುವೆ ಒಂದು ವಿಚಿತ್ರವಾದ ಒತ್ತಡ ಉಂಟಾಗುತ್ತಿದೆ. ಈ ಒತ್ತಡವನ್ನು ಅತ್ಯಂತ ಸಮರ್ಥ ಮತ್ತು ಸೃಜನಾತ್ಮಕವಾಗಿ ಭಾಷೆಯಲ್ಲಿ ಹಿಡಿದಿಡುವ ಸಾಹಿತ್ಯ ಬರಬೇಕಿತ್ತು ಆದರೆ ಬರುತ್ತಿಲ್ಲ. ಅಂದರೆ ಬದಲಾಗುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ನಮ್ಮ ಸಾಹಿತಿಗಳು ಅತ್ಯಂತ ಗಂಭೀರವಾಗಿ ಸ್ವೀಕರಿಸುತ್ತಿಲ್ಲವೇನೋ ಎಂಬ ಪ್ರಶ್ನೆ ಎದುರಾಗಿದೆ. ಆದರೆ ಇದೇ ಸಂದರ್ಭದಲ್ಲಿ ಜಾಗತೀಕರಣದಿಂದ ಕನ್ನಡದಲ್ಲಿ ಅನುವಾದ ದೊಡ್ಡ ಮಟ್ಟದಲ್ಲಿ ಬೆಳವಣಿಗೆ ಕಂಡಿದೆ ಎಂದು ಪ್ರತಿಪಾದಿಸಿದರು.

ಇಂತಹ ಅನುವಾದ ಪ್ರಕ್ರಿಯೆ ಇತರ ಭಾರತೀಯ ಭಾಷೆಗಳಲ್ಲಿ ಅಷ್ಟಾಗಿ ನಡೆಯುತ್ತಿಲ್ಲ. ಡಚ್ ಭಾಷೆಯ ಆತ್ಮಕಥೆಯೊಂದನ್ನು ಅರುಣ್ ಬೆನಕ ಅವರು ಕನ್ನಡಕ್ಕೆ 'ಅರೆ ಶತಮಾನದ ಮೌನ' ಶೀರ್ಷಿಕೆಯಡಿ ಅನುವಾದಿಸಿದ್ದು, ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಜಪಾನಿ ಸೈನಿಕರ ಕ್ರೌರ್ಯವನ್ನು ಈ ಕೃತಿ ಅನಾವರಣಗೊಳಿಸುತ್ತದೆ ಎಂದು ತಿಳಿಸಿದರು.

ಕನ್ನಡಕ್ಕಿದೆ ಸ್ವೀಕರಿಸುವ ಗುಣ: ಕನ್ನಡಕ್ಕೆ ಸ್ವೀಕರಿಸುವ ಗುಣವಿದೆ. ಸಾಮ್ರಾಟ ಅಶೋಕನ ಬ್ರಾಹ್ಮಿ ಕನ್ನಡಕ್ಕೆ ಬಂದಾಗ ಅಲ್ಲಿನ ಎಲ್ಲಾ 52 ಅಕ್ಷರಗಳನ್ನು ತೆಗೆದುಕೊಳ್ಳಲಾಯಿತು. ನಾವು ಉಪಯೋಗಿಸುವುದು ಕೇವಲ 30ರಿಂದ 36 ಅಕ್ಷರ ಅಷ್ಟೆ. ಆದರೆ 52 ಲಿಪಿಗಳನ್ನು ಇಟ್ಟುಕೊಂಡದ್ದರಿಂದ ಭಾಷೆಗೆ ಒಂದು ಮುಕ್ತತೆ ಪ್ರಾಪ್ತವಾಗಿದೆ. ಇದರಿಂದ ಕನ್ನಡಕ್ಕೆ ಅನುವಾದಿಸಿಕೊಳ್ಳುವ ಒಂದು ಗುಣ ತನ್ನ ಹುಟ್ಟಿನಿಂದಲೇ ಬಂದಿದೆ. ತಮಿಳು ಮತ್ತು ಕನ್ನಡ ಒಂದೇ ಕಾಲದಲ್ಲಿ ಲಿಪಿಗಳನ್ನು ಪಡೆದಿದ್ದು, ತಮಿಳು ಭಾಷೆಯಲ್ಲಿ ಕೇವಲ 36 ಲಿಪಿಗಳನ್ನು ಮಾತ್ರವೇ ಸ್ವೀಕರಿಸಲಾಯಿತು ಎಂದು ಹೇಳಿದರು.

ಕನ್ನಡದ ಮುಕ್ತ ಧೋರಣೆಯಿಂದ ಇತರ ಭಾಷೆಗಳನ್ನು ಅನುವಾದಿಸಿಕೊಳ್ಳಲು ಸಾಧ್ಯವಾಗಿದೆ. ಜಗತ್ತಿನ ಎಲ್ಲಾ ಭಾಷೆಗಳ ಕೃತಿಗಳು ಕನ್ನಡಕ್ಕೆ ಅನುವಾದವಾದರೂ ಕನ್ನಡ ಕೃತಿಗಳು ಇತರೆ ಭಾಷೆಗಳಿಗೆ ಅನುವಾದ ಆಗಿರುವುದು ತೀರಾ ಕಡಿಮೆ ಎಂದರು. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು. ಮೈಸೂರು ಪ್ರಾದೇಶಿಕ ಹೆಚ್ಚುವರಿ ಆಯುಕ್ತ ಪಿ.ಶಿವರಾಜ್, ಜಾನಪದ ವಿದ್ವಾಂಸ ಡಾ.ರಾಮೇಗೌಡ (ರಾಗೌ), ಸಂವಹನ ಟ್ರಸ್ಟ್ ಅಧ್ಯಕ್ಷ ಡಿ.ಎನ್.ಲೋಕಪ್ಪ, ಉಪಾಧ್ಯಕ್ಷ ಮೊರಬದ ಮಲ್ಲಿಕಾರ್ಜುನ, ಕಾರ್ಯದರ್ಶಿ ಜೀನಹಳ್ಳಿ ಸಿದ್ದಲಿಂಗಪ್ಪ, ಸಂಘಟನಾ ಕಾರ್ಯದರ್ಶಿ ಎಂ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.



ಭೈರಪ್ಪರಿಂದ ಅದ್ಭುತ ಪ್ರಯೋಗ

ಇತ್ತೀಚೆಗೆ ಕನ್ನಡ ಸಾಹಿತ್ಯದಲ್ಲಿ ಪುರಾಣಗಳನ್ನು ಮರು ವ್ಯಾಖ್ಯಾನಿಸಿ, ಸಮಕಾಲೀನಗೊಳಿಸಿ ಬರೆಯುವ ಪ್ರವೃತ್ತಿ ಪ್ರಾರಂಭವಾಗಿದೆ. ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪನವರು ತಮ್ಮ 'ಪರ್ವ'ದಲ್ಲಿ ಅಂತಹ ಪ್ರಯೋಗವನ್ನು ಅದ್ಭುತವಾಗಿ ಮಾಡಿದ್ದರು. ಪುರಾಣಗಳನ್ನು ಪುರಾಣವಾಗಿಯೇ ಓದಬೇಕು. ಜೊತೆಗೆ ಸಮಕಾಲೀನಗೊಳಿಸಿಯೂ ನೋಡಬೇಕು. ಇತ್ತೀಚೆಗೆ ಹೊರಬಂದ ಪುರುಷೋತ್ತಮ ದಾಸ್ ಹೆಗಡೆ ಅವರ 'ಪುರುಷೋತ್ತಮಾಯಣ' ಎಂಬ ಕೃತಿಯಲ್ಲಿ ಇಂತಹ ಪ್ರಯೋಗ ಮಾಡಲಾಗಿದೆ.

-ಡಾ.ಪುರುಷೋತ್ತಮ ಬಿಳಿಮಲೆ



ದಿ.ಧ್ರುವನಾರಾಯಣ್ ಹುಟ್ಟುಹಬ್ಬ ಅಂಗವಾಗಿ ಬೃಹತ್ ಉದ್ಯೋಗ ಮೇಳ

ನಂಜನಗೂಡು, ವರುಣ ಕ್ಷೇತ್ರದ ನಿರುದ್ಯೋಗಿಗಳಿಗೆ ಉದ್ಯೋಗವಕಾಶ: ಶಾಸಕ ದರ್ಶನ್ ಧ್ರುವನಾರಾಯಣ್

ನಂಜನಗೂಡು, ಜು.30– ನಂಜನಗೂಡು ಮತ್ತು ವರುಣ ವಿಧಾನಸಭಾ ಕ್ಷೇತ್ರದ ನಿರುದ್ಯೋಗಿ ಯುವಕ, ಯುವತಿಯರಿಗೆ ಉದ್ಯೋಗ ದೊರಕಿಸಿ ಕೊಡುವ ಸಂಕಲ್ಪದೊಂದಿಗೆ ಈ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, ಯುವಕ, ಯುವತಿಯರು ಈ ಉದ್ಯೋಗ ಮೇಳದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಕರೆ ನೀಡಿದ್ದಾರೆ.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಮಾಜಿ ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿ.ಆರ್.ಧ್ರುವನಾರಾಯಣ್ ಅವರ 62ನೇ ಹುಟ್ಟುಹಬ್ಬದ ಸ್ಮರಣಾರ್ಥ ಧ್ರುವನಾರಾಯಣ್ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

ನನ್ನ ತಂದೆ ಯುವಕ, ಯುವತಿಯರನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರು, ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗ ಕಲ್ಪಿಸಲು ಸದಾ ಶ್ರಮಿಸುತ್ತಿದ್ದರು. ಜೊತೆಗೆ ಅವರ ಹುಟ್ಟುಹಬ್ಬವನ್ನು ಎಂದೂ ಕೂಡ ಆಡಂಬರದಿಂದ ಅದ್ದೂರಿಯಾಗಿ ಆಚರಿಸಿಕೊಂಡವರಲ್ಲ, ಸದಾ ಜನರ ಮಧ್ಯೆ ಜನಸೇವೆಯಲ್ಲಿ ತೊಡಗಿಕೊಳ್ಳುವ ಮೂಲಕ ಆಚರಣೆ ಮಾಡಿಕೊಳ್ಳುತ್ತಿದ್ದರು ಎಂದರು.

ಉದ್ಯೋಗ ಮೇಳದಲ್ಲಿ ಸುಮಾರು ನೂರಕ್ಕೂ ಹೆಚ್ಚು ಕಂಪನಿಗಳು ಮತ್ತು ಕಾರ್ಖಾನೆಯ ಗುತ್ತಿಗೆದಾರರು ಭಾಗವಹಿಸಲಿದ್ದು, ಉದ್ಯೋಗ ಮೇಳದಲ್ಲಿ ಹೆಚ್ಚಿನ ಉದ್ಯೋಗಾವಕಾಶ ದೊರಕುವಂತೆ ಕ್ರಮವಹಿಸಲಾಗಿದೆ. ನಾನು ಸಹ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಿ ಕೊಡುವಂತೆ ಕಂಪನಿಗಳಿಗೆ ಮನವಿ ಮಾಡಿದ್ದೇನೆ. ಅದರಂತೆ ಹೆಚ್ಚಾಗಿ ಸ್ಥಳೀಯರಿಗೆ ಉದ್ಯೋಗಾವಕಾಶ ಲಭಿಸಲಿದ್ದು, ಆ ಮೂಲಕ ಸ್ಥಳೀಯರ ಉದ್ಯೋಗ ಸಮಸ್ಯೆ ಸ್ವಲ್ಪ ಮಟ್ಟಿಗೆ ನಿವಾರಣೆಯಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ದಿ.ಆರ್.ಧ್ರುವನಾರಾಯಣ್ ಅವರ ಹುಟ್ಟುಹಬ್ಬದ ಸ್ಮರಣಾರ್ಥವಾಗಿ ಜುಲೈ 31ರಂದು ಕೂಡ ಸಾಮಾಜಿಕ ಸೇವಾ ಚಟುವಟಿಕೆಗಳನ್ನು ಆಯೋಜಿಸಲಾಗಿದ್ದು, ನಗರದ ಬೈಪಾಸ್ ರಸ್ತೆಯ ಮಹದೇಶ್ವರ ಪ್ಯಾಲೇಸ್‌ನಲ್ಲಿ ಬೃಹತ್ ಹೃದಯ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಜೊತೆಗೆ ಹುಲ್ಲಹಳ್ಳಿ ಗ್ರಾಮದ ಚಂದ್ರೋದಯ ಕಲ್ಯಾಣ ಮಂಟಪದಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಉದ್ಯೋಗ ಮೇಳದಲ್ಲಿ ಟೆಕ್ ಮಹೇಂದ್ರ, ಮೆಡ್ ಪ್ಲಸ್, ಟೀಮ್ ಲೀಸ್, ಗ್ರಾಸ್ ರೂಟ್ಸ್, ಗ್ಲೋಟೆಕ್, ಇನ್ಸ್ಟ್ಯೂಟ್ ಇಟ್ ಟೆಕ್ನಾಲಜಿ, ಆಕ್ಸಿಸ್ ಬ್ಯಾಂಕ್, ಐ.ಐ.ಎಫ್.ಎಲ್, ಮುತ್ತೂಟ್, ಎಚ್‌ಡಿಬಿ ಫೈನಾನ್ಸಿಯಲ್ ಸರ್ವಿಸ್, ಕ್ವಾಲಿಸ್ ಆರ್.ಸಿ.ಎಮ್ ಕಂಪನಿಗಳು ಸೇರಿದಂತೆ ಸುಮಾರು ನೂರಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದವು.

ಉದ್ಯೋಗ ಮೇಳದಲ್ಲಿ ಶಾಸಕ ಗಣೇಶ್ ಪ್ರಸಾದ್, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಮಾಜಿ ಶಾಸಕರಾದ ನಂಜುಂಡಸ್ವಾಮಿ, ಕಳಲೆ ಕೇಶವಮೂರ್ತಿ, ಭಾಗವಹಿಸಿ ಉದ್ಯೋಗ ಆಕಾಂಕ್ಷಿಗಳಿಗೆ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಶ್ರೀಕಂಠನಾಯಕ, ಸಿ.ಎಂ.ಶಂಕರ್, ಜಿಪಂ ಮಾಜಿ ಸದಸ್ಯರಾದ ಲತಾ ಸಿದ್ದಶೆಟ್ಟಿ, ಕೆ.ಮಾರುತಿ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿಂ, ಮುಖಂಡರಾದ ಅಬ್ದುಲ್ ಖಾದರ್, ವಿಜಯ್ ಕುಮಾರ್, ಮಂಜುನಾಥ್, ಶ್ರೀನಿವಾಸ ಮೂರ್ತಿ, ಕುಳ್ಳಯ್ಯ, ನಾಗರಾಜಯ್ಯ ಹಲವಾರು ಪ್ರಮುಖರು ಇದ್ದರು.

ಇಂದು ದಿ.ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ

ಹೆಚ್.ಡಿ.ಕೋಟೆ, ಜು.30–ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬವನ್ನು ನಾಳೆ(ಜು.31) ಪಟ್ಟಣದಲ್ಲಿ ವಿವಿಧ ಸೇವಾ ಕಾರ್ಯಗಳ ಮಾಡುವ ಮೂಲಕ ವಿಶಿಷ್ಟವಾಗಿ ಆಚರಣೆ ಮಾಡಲಾಗುತ್ತದೆ ಎಂದು ಆರ್.ಧ್ರುವನಾರಾಯಣ್ ಅವರ ಅಭಿಮಾನಿ ಬಳಗದ ಅಧ್ಯಕ್ಷ ಹಾಗೂ ಪುರಸಭಾ ಸದಸ್ಯ ಎಚ್.ಸಿ.ನರಸಿಂಹಮೂರ್ತಿ ತಿಳಿಸಿದ್ದಾರೆ.

ಬೆಳಗ್ಗೆ 9 ಗಂಟೆಗೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಣ್ಣುಹಂಪಲು ವಿತರಣೆ ಮಾಡಿ ನಂತರ ಬೋಚಿಕಟ್ಟೆ ಗ್ರಾಮದಲ್ಲಿ ಚಿತ್ತಧಾಮ ಪುನರ್ವಸತಿ ಕೇಂದ್ರದ ನಿರಾಶ್ರಿತರಿಗೆ ಉಪಾಹಾರ ನೀಡಲಾಗುವುದು. ಪಟ್ಟಣದ ಡಾ.ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸುವ ಮೂಲಕ ವಿವಿಧ ಸೇವಾ ಕಾರ್ಯಕ್ಕೆ ಶಾಸಕ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ರವಿಶಂಕರ್ ಚಾಲನೆ ನೀಡಲಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳಿಂದ ಹಾಲಿಗೆ ಸಬ್ಸಿಡಿ ನೀಡಲಾಗುತ್ತಿಲ್ಲ

ಡೈರಿ ಕೊಠಡಿ ಉದ್ಘಾಟಿಸಿದ ಡಾ.ಯತೀಂದ್ರ



ತಿ.ನರಸೀಪುರ, ಜು.30– ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಹಾಲಿಗೆ ಸಬ್ಸಿಡಿ ನೀಡಲು ಸಾಧ್ಯವಾಗುತ್ತಿಲ್ಲ. ಆದರೆ ಹಾಲಿನ ದರ ಲೀಟರ್‌ಗೆ 3 ರೂಪಾಯಿ ಹೆಚ್ಚಿಸಲು ಒಕ್ಕೂಟ ಮಾಡಿದ ಮನವಿಗೆ ಸರ್ಕಾರ ಅನುಮತಿ ನೀಡಿದೆ ಎಂದು ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿಯ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ತುಂಬಲ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಮೇಲ್ಭಾಗದ ಕೊಠಡಿ ಉದ್ಘಾಟಿಸಿ ಅವರು ಮಾತನಾಡಿದರು. ಸಬ್ಸಿಡಿ ದರ ಹೆಚ್ಚಿಸಲು ಮನವಿ ಇತ್ತು ಆದರೆ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಅದು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಹಾಲಿನ ದರ ಕಡಿಮೆ ಇದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಹಾಲು ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ಹಾಲು ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಲು ಮುಖ್ಯಮಂತ್ರಿಗಳು ಅಧಿಕಾರಿಗಳ ಸಭೆ ಕರೆದು ಅಗತ್ಯ ಕ್ರಮಕ್ಕೆ ಸೂಚಿಸಿದ್ದಾರೆ. ಈ ಹಿಂದೆ ರಾಜ್ಯ ಹಾಲು ಉತ್ಪಾದನೆಯಲ್ಲಿ ಹೆಚ್ಚು ಪ್ರಗತಿಯಲ್ಲಿತ್ತು. ಬಿಜೆಪಿ ಸರ್ಕಾರದ ವೇಳೆ ಸರಿಯಾದ ಪ್ರೋತ್ಸಾಹಿಸದ ಕಾರಣ ಹಾಲು ಉತ್ಪಾದನೆ ಕಡಿಮೆಯಾಯಿತು ಎಂದರು

ತುಂಬಲ ಹಾಲು ಉತ್ಪಾದಕ ಸಂಘದ ಅಧ್ಯಕ್ಷ ಕೆ.ಪ್ರಕಾಶ್, ಉಪಾಧ್ಯಕ್ಷ ಬಿ.ಸಿದ್ದರಾಜು, ಗ್ರಾಪಂ ಅಧ್ಯಕ್ಷೆ ಸುಲೋಚನ ಗುರುರಾಜ್, ಮೈಮುಲ್ ನಿರ್ದೇಶಕ ಓಂ ಪ್ರಕಾಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನಹುಂಡಿ ಮಹೇಶ್, ತುಂಬಲ ಪ್ರಶಾಂತ್ ಬಾಬು, ಅಂದಾನಿ, ಚಿಂಚೆಗೌಡ, ಪುರಸಭಾ ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ತುಂಬಲ ಪ್ರಕಾಶ್, ಕೆ.ಬಸವರಾಜು, ಮೈಮುಲ್ ವ್ಯವಸ್ಥಾಪಕ ದಿವಾಕರ್, ವಿಸ್ತರಣಾಧಿಕಾರಿ ಆರ್.ಪ್ರಮೋದ್, ವೀಣಾ, ಪಿಎಸಿಸಿ ಅಧ್ಯಕ್ಷ ರೇವಣ್ಣ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪನಹುಂಡಿ ಮಹದೇವಣ್ಣ, ರಮೇಶ್ ಮುದ್ದೇಗೌಡ, ತುಂಬಲ ಶಿವಸ್ವಾಮಿ, ಹಾಲೇಗೌಡ, ಗೋಪಾಲರಾಜ್, ಮಹಾಲಿಂಗಪ್ಪ ಸಾಕಮ್ಮ, ಕಂಬಯ್ಯ, ಮಣಿಯಮ್ಮ, ಚಂದ್ರಶೇಖರ್, ಪಿಡಿಓ. ಧನಂಜಯ್, ಹಾಲು ಉತ್ಪಾದಕ ರೈತರು ಹಾಜರಿದ್ದರು.

ಇಂದು ಸರಗೂರಲ್ಲಿ ಪ್ರತಿಭಟನೆ

ಸರಗೂರು: ಸೌಜನ್ಯ ಪ್ರಕರಣ ಮತ್ತೆ ತನಿಖೆ ಆಗಬೇಕು ಮತ್ತು ಮಣಿಪುರದಲ್ಲಿ ನಡೆದ ಬೆತ್ತಲೆ ಮೆರವಣಿಗೆ ಪ್ರಕರಣವನ್ನು ಖಂಡಿಸಿ ಸೋಮವಾರ (ಜು.31) ಪ್ರಗತಿಪರ ಸಂಘಟನೆಗಳ ಒಕ್ಕೂಟ, ತಾಲೂಕು ಆದಿ ಕರ್ನಾಟಕ ಮಹಾಸಭಾ, ಸಂವಿಧಾನ ಸಂರಕ್ಷಾ ಸಮಿತಿ ಮತ್ತು ವಿವಿಧ ಸಂಘಟನೆಗಳ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ತಾಲೂಕು ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಪ್ರತಿಭಟನಾ ಮೆರವಣಿಗೆ ಇಲ್ಲಿನ ಪ್ರವಾಸಿ ಮಂದಿರದಿಂದ ಬೆಳಗ್ಗೆ 10.30ಕ್ಕೆ ಆರಂಭವಾಗಲಿದೆ. ತಾಲೂಕಿನ ಜನತೆ ಹಾಗೂ ಪಟ್ಟಣದ ಎಲ್ಲಾ ಸಂಘಟನೆಯವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಆದಿ ಕರ್ನಾಟಕ ಮಹಾಸಭಾ ಕಾರ್ಯದರ್ಶಿ ಮಲ್ಲೇಶ್, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಇದಿಯಪ್ಪ, 33 ಹಳ್ಳಿ ಯಜಮಾನ ಭೀಮಯ್ಯ, ಇಟ್ನಾ ರಾಜಣ್ಣ, ವರ್ತಕ ಮಂಡಳಿ ಅಧ್ಯಕ್ಷ ಎಸ್.ಎಂ. ಶ್ರೀನಿವಾಸ್ ಗ್ರಾಮೀಣ ಮಹೇಶ್, ಲಂಕೆ ಲಕ್ಷ್ಮಣ, ಸುಬ್ರಹ್ಮಣ್ಯ, ಕಂದೇಗಾಲ ನಾಗರಾಜು ಹಾಜರಿದ್ದರು.

ನಾಯಿಗಳ ದಾಳಿಗೆ ಏಳು ಮೇಕೆಗಳು ಬಲಿ



ಕಂಪಲಾಪುರ, ಜು.30– ಬೀದಿನಾಯಿಗಳ ದಾಳಿಗೆ ಮನೆಯ ಹಿಂಭಾಗ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಏಳು ಮೇಕೆಗಳು ಬಲಿಯಾದ ಘಟನೆ ಭಾನುವಾರ ಮಧ್ಯಾಹ್ನ ಕಂಪಲಾಪುರದಲ್ಲಿ ನಡೆದಿದೆ.

ಗ್ರಾ.ಪಂ ಮಾಜಿ ಅಧ್ಯಕ್ಷೆ ರಾಣಿಕೃಷ್ಣೇಗೌಡರವರಿಗೆ ಸೇರಿದ ಮೇಕೆಗಳೇ ಬಲಿಯಾದವಾಗಿದ್ದು ಅಂದಾಜು ಒಂದೂವರೆ ಲಕ್ಷ ರೂ. ನಷ್ಟವಾಗಿದೆ.

ಎಂದಿನಂತೆ ಇವರು ತಮ್ಮ ಜಮೀನಿನ ಬಳಿ ಇರುವ ಮನೆಯ ಹಿಂಭಾಗದ ಕೊಟ್ಟಿಗೆಯಲ್ಲಿ ಮೇಕೆಗಳನ್ನು ಕಟ್ಟಿ ಹಾಕಿದ್ದರು. ಮಧ್ಯಾಹ್ನ ನೀರು ಕುಡಿಸಲು ಹೋಗಿ ನೋಡಿದಾಗ ಏಳು ಮೇಕೆಗಳು ರಕ್ತದ ಮಡುವಿನಲ್ಲಿ ಬಿದ್ದಿದ್ದವು. ನಾಯಿಗಳು ದಾಳಿ ನಡೆಸಿರುವುದರಿಂದ ಮೇಕೆಗಳು ಸಾವನ್ನಪ್ಪಿರುವುದು ತಿಳಿಯಿತು ಎನ್ನಲಾಗಿದೆ.

ಹೊಸಕೋಟೆ ಗ್ರಾಪಂನಲ್ಲಿ ಕಾಂಗ್ರೆಸ್ ಜಯಭೇರಿ



ನಂಜನಗೂಡು: ವರುಣ ವಿಧಾನಸಭಾ ಕ್ಷೇತ್ರದ ಎಸ್.ಹೊಸಕೋಟೆ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಇಂದ್ರಾಣಿ ಕುಮಾರ್, ಉಪಾಧ್ಯಕ್ಷರಾಗಿ ಮಹದೇವಮ್ಮ ಶ್ರೀಕಂಠಯ್ಯ ಆಯ್ಕೆಯಾದರು.

22 ಸದಸ್ಯ ಬಲದ ಹೊಸಕೋಟೆ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನ ಎಸ್‌ಸಿ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಹಿಂದುಳಿದ ವರ್ಗಕ್ಕೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಇಂದ್ರಾಣಿ ಕುಮಾರ್ ಮತ್ತು ಪುಟ್ಟಸ್ವಾಮಿ ನಾಮಪತ್ರ ಸಲ್ಲಿಸಿದ್ದರು. ಇಂದ್ರಾಣಿ ಕುಮಾರ್ 14 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ. ಪ್ರತಿಸ್ಪರ್ಧಿ ಪುಟ್ಟಸ್ವಾಮಿ 8 ಮತಗಳನ್ನು ಪಡೆದು ಸೋಲು ಅನುಭವಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಮ್ಮ ಶ್ರೀಕಂಠಯ್ಯ 14 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರು. ಪ್ರತಿಸ್ಪರ್ಧಿ ಪುಷ್ಪಲತಾ 8 ಮತಗಳನ್ನು ಪಡೆದು ಪರಾಜಿತರಾದರು.

ಚುನಾವಣಾಧಿಕಾರಿಯಾಗಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ದೀಪಕ್ ಕಾರ್ಯ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ರೇಣುಕಾ, ರವಿ, ಮಹದೇವಸ್ವಾಮಿ, ರಮೇಶ್, ಮುಖಂಡರಾದ ಕುಮಾರ್ ಪಿಡಿಒ ಶಿವಕುಮಾರ್ ಇದ್ದರು.

ಗಾಂಜಾ ಮಾರಲೆತ್ನಿಸುತ್ತಿದ್ದ ಆರೋಪಿ ಬಂಧನ



ಬೈಲಕುಪ್ಪೆ: ಪಿರಿಯಾಪಟ್ಟಣ ತಾಲೂಕಿನ ಆಯುರ್ಬೀಡು ಸಮೀಪದ ಲಿಂಗಪುರದಲ್ಲಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಓರ್ವನನ್ನು ಬೈಲುಕುಪ್ಪೆ ಪೊಲೀಸರು ಬಂಧಿಸಿದ್ದಾರೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ನಿವಾಸಿ ಅಜೀಜ್ ಬಂಧಿತ ಆರೋಪಿ. ಖಚಿತ ಮಾಹಿತಿ ಆಧರಿಸಿ ಭಾನುವಾರ ಬೆಳಗ್ಗೆ ಆರೋಪಿಯನ್ನು ಸೆರೆ ಹಿಡಿದು 5 ಕೆಜಿಯಷ್ಟು ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಆರೋಪಿಯ ವಿರುದ್ಧ ಬೈಲುಕುಪ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಆರೋಪಿಯನ್ನು ನ್ಯಾಯಾಲಯ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಪಿಎಸ್‌ಐ ಅಜಯ್ ಕುಮಾರ್, ಗುಪ್ತಚರ ಸಬ್‌ಇನ್ಸ್‌ಪೆಕ್ಟರ್ ಮಹಾಲಿಂಗಸ್ವಾಮಿ, ಸಿಬ್ಬಂದಿಗಳಾದ ಚೇತನ್, ಕುಮಾರ್, ಮಹಾದೇವಪ್ಪ, ಮುದ್ದುರಾಜು, ಕುಮಾರಸ್ವಾಮಿ, ಸುರೇಶ, ಪ್ರದೀಪ್ ಇದ್ದರು.

ನಾಡು ಕಂಡ ಅಪರೂಪದ ರಾಜಕಾರಣಿ ಧ್ರುವನಾರಾಯಣ್



ತಿ.ನರಸೀಪುರ,ಜು.30– ಕೇಂದ್ರ ಪುರಸ್ಕೃತ ಯೋಜನೆಗಳನ್ನು ಕಟ್ಟ ಕಡೆಯ ಹಳ್ಳಿಗಳಿಗೂ ತಲುಪಿಸುವ ಮೂಲಕ ಗ್ರಾಮೀಣಾಭಿವೃದ್ಧಿಗೆ ಬದ್ಧರಾಗಿ, ಸಾಮಾನ್ಯ ಜನರ ಅಹವಾಲುಗಳನ್ನು ಆಲಿಸಿ ಸ್ಪಂದಿಸುವ ಗುಣವನ್ನು ಹೊಂದಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು ನಾಡು ಕಂಡಂತಹ ಅಪರೂಪದ ಸಾಮಾಜಿಕ ಬದ್ಧತೆಯುಳ್ಳ ರಾಜಕಾರಣಿಯಾಗಿದ್ದರು ಎಂದು ಜಿ.ಪಂ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷ ಮಂಜುನಾಥನ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಭಾನುವಾರ ಮಾಜಿ ಸಂಸದ ದಿವಂಗತ ಆರ್. ಧ್ರುವನಾರಾಯಣ್ ಅವರ ಹುಟ್ಟುಹಬ್ಬದ ಪ್ರಯುಕ್ತ ರೋಗಿಗಳಿಗೆ ಹಣ್ಣುಹಂಪಲು ವಿತರಿಸಿ ಮಾತನಾಡಿದ ಅವರು ರಾಜಕಾರಣಿಯಾಗಿ ಸಾರ್ವಜನಿಕ ಜೀವನದಲ್ಲಿ ಇರುವಂತಹ ಪ್ರತಿಯೊಬ್ಬರಿಗೂ ಧ್ರುವನಾರಾಯಣ್ ವ್ಯಕ್ತಿತ್ವ ಹಾಗೂ ಕಾರ್ಯವೈಖರಿ ಮಾದರಿಯಾಗಿದೆ ಅವರು ಸಂಸದರಾಗಿದ್ದಾಗ ಅಭಿವೃದ್ಧಿಯನ್ನ ಕಾಣದ ಹಲವು ಹಳ್ಳಿಗಳು ಕೇಂದ್ರ ಪುರಸ್ಕೃತ ಯೋಜನೆಯಿಂದ ಪ್ರಗತಿಯಾಗಿವೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ಮಾಜಿ ಸದಸ್ಯ ಎಂ.ಆರ್.ಸೋಮಣ್ಣ ತಾಪಂ ಮಾಜಿ ಸದಸ್ಯ ಬಸವರಾಜು, ಗ್ರಾಪಂ ಮಾಜಿ ಉಪಾಧ್ಯಕ್ಷ ನಾಗರಾಜಮೂರ್ತಿ, ಮಾಜಿ ಸದಸ್ಯ ಕೆಎಂ.ಶಿವಕುಮಾರ್, ಮುಖಂಡರಾದ ಮಾವಿನಹಳ್ಳಿ ಪುಟ್ಟಸ್ವಾಮಿ, ಗುತ್ತಿಗೆದಾರ ರಮೇಶ್, ಗವಿನಾಯ್ಕಕುಕ್ಕುರುಪ್ರಭು ಇನ್ನಿತರರಿದ್ದರು.



ದಿ.ರಾಕೇಶ್ ಸಿದ್ದರಾಮಯ್ಯ ಪುಣ್ಯಸ್ಮರಣೆ ಅಂಗವಾಗಿ ವರುಣ ಕ್ಷೇತ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮಾನಿ ಬಳಗ ಹಾಗೂ ಅಹಿಂದ ಸಂಘಟನೆ ವತಿಯಿಂದ ಉಚಿತ ತಟ್ಟೆ ಮತ್ತು ಗ್ಲಾಸ್‌ಗಳನ್ನು ವಿತರಿಸಲಾಯಿತು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಉದ್ಯಮಿ ರಾಜೇಶ್, ಅನಿಲ್ ರಾಜ್, ಲೋಕೇಶ್, ವರುಣ ಮಹದೇವ್, ಲೋಕೇಶ್, ಪಾವನ್ ಸಿದ್ದರಾಮು, ಕನಕಮೂರ್ತಿ, ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಹಾಜರಿದ್ದರು.

ಕಬಿನಿ ಜಲಾಶಯಕ್ಕೆ ಸುವರ್ಣ ಮಹೋತ್ಸವ ಸಂಭ್ರಮ

ಮೂರು ದಿನಗಳ ಕಾಲ ಜಲಪಾತೋತ್ಸವದ ಮಾದರಿಯಲ್ಲಿ ವೈಭವಯುತ ಆಚರಣೆಗೆ ನಿರ್ಧಾರ





ಹೆಚ್.ಡಿ.ಕೋಟೆ, ಜು.30– ಕಬಿನಿ ಜಲಾಶಯಕ್ಕೆ 50 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವ ಸಂಭ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದ್ದಾರೆ.

ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಕಬಿನಿ ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ದಿನಾಂಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜೊತೆ ಚರ್ಚಿಸಿ ನಿಗದಿಪಡಿಸಲಾಗುವುದು ಎಂದು ತಿಳಿಸಿದರು.

ಕಬಿನಿ ಜಲಾಶಯಕ್ಕೆ 50 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವ ಸಂಭ್ರಮ ಜಲಪಾತೋತ್ಸವ ಮಾದರಿಯಲ್ಲಿ, ಜಲಾಶಯಕ್ಕೆ ಬಾಗಿನ ಅರ್ಪಿಸಿದ ಮುಂದಿನ ದಿನಗಳಲ್ಲಿ ಬಹಳ ಅದ್ದೂರಿಯಾಗಿ ಆಚರಣೆ ಮಾಡುವ ಸಂಬಂಧ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಸುವರ್ಣ ಸಂಭ್ರಮವನ್ನು ಮೂರು ದಿನಗಳ ಕಾಲ ಆಚರಿಸಲಾಗುವುದು. ತಾಲೂಕಿನ ಸಾಧಕರು, ಜಲಾಶಯ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಹಾಗೂ ಜಲಾಶಯ ನಿರ್ಮಾಣವಾಗಲು ಪಾತ್ರ ವಹಿಸಿದ ಎಲ್ಲರನ್ನು ಕರೆದು ಸನ್ಮಾನಿಸಲಾಗುವುದು ಎಂದ ಅವರು, ಜಲಾಶಯದ ಅಣೆಕಟ್ಟೆಗೆ ವಿಜೃಂಭಣೆಯಿಂದ ದೀಪಾಲಂಕಾರ ಮಾಡುವುದರ ಮೂಲಕ ಈ ಒಂದು ಸುಂದರ ಕಾರ್ಯಕ್ರಮವನ್ನು ಆಚರಿಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಬಿನಿ ಕಾರ್ಯಪಾಲಕ ಇಂಜಿನಿಯರ್ ಚಂದ್ರಶೇಖರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಜನಾರ್ಧನ್, ಮುಖ್ಯ ಇಂಜಿನಿಯರ್‌ಗಳಾದ ರಮೇಶ್ ಬಾಬು, ವಿಶ್ವನಾಥ್, ಗೇಜ್ ನಾಗರಾಜು, ಪುರಸಭಾ ಸದಸ್ಯರುಗಳಾದ ಎಚ್.ಸಿ.ನರಸಿಂಹಮೂರ್ತಿ, ರಾಜು, ಜೈಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಸತೀಶ್‌ಗೌಡ, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ಯೂಥ್ ಕಾಂಗ್ರೆಸ್ ಅಧ್ಯಕ್ಷ ಹೋಂಡಾ ನಯಾಜ್, ಜಿಲ್ಲಾ ಕಾಂಗ್ರೆಸ್ ಸದಸ್ಯ ಪರಶಿವಮೂರ್ತಿ, ಗ್ರಾಪಂ ಸ.ಬೀಚನಹಳ್ಳಿ ಭಾಸ್ಕರ್, ನಾಗನಹಳ್ಳಿ ಪ್ರದೀಪ್, ಹೇಮಂತ್, ಸಿದ್ದರಾಮ, ಮತ್ತಿತರರು ಹಾಜರಿದ್ದರು.

> ಜಲಪಾತೋತ್ಸವ ಮಾದರಿಯಲ್ಲಿ ಕಬಿನಿ ಜಲಾಶಯದ ಸುವರ್ಣ ಸಂಭ್ರಮವನ್ನು ಆಚರಿಸಲಾಗುವುದು. ಚಲನಚಿತ್ರ ನಟರು, ಖ್ಯಾತ ಕಲಾವಿದರು ಇನ್ನು ಪ್ರಮುಖರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು. ಮೂರು ದಿನಗಳ ಕಾರ್ಯಕ್ರಮಕ್ಕೆ, ವಿವಿಧ ಜಿಲ್ಲೆ ಹಾಗೂ ರಾಜ್ಯಗಳಿಂದ ಬರುವ ಪ್ರವಾಸಿಗರಿಗೆ ವೀಕ್ಷಣೆ ಮಾಡಲು ಯಾವುದೇ ತೊಂದರೆ ಆಗದ ರೀತಿಯಲ್ಲಿ ವ್ಯವಸ್ಥೆ ಮಾಡಲಾಗುವುದು.
> –ಅನಿಲ್ ಚಿಕ್ಕಮಾದು, ಶಾಸಕ.



ವರುಣ ಕ್ಷೇತ್ರಕ್ಕೆ ಸೇರಿರುವ ತುಮ್ಮನೇರಳೆ ಗ್ರಾಪಂಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ನಂದೀಶ್ ಅಧ್ಯಕ್ಷರಾಗಿ, ರೇಣುಕಾ ಮಹೇಶ್ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಅವರುಗಳನ್ನು ಅಭಿನಂದಿಸಲಾಯಿತು.

ನೇರಳೆ ಗ್ರಾಪಂಗೆ ಅಲಮೇಲಮ್ಮ ಉಪಾಧ್ಯಕ್ಷೆ



ನಂಜನಗೂಡು, ಜು.30– ನಂಜನಗೂಡು ತಾಲೂಕು ಕೌಲಂದೆ ಹೋಬಳಿ ನೇರಳೆ ಗ್ರಾಮದ ಅಲಮೇಲಮ್ಮ ಅವರು ನೇರಳೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಲ್ಲುಂಡಿಯಲ್ಲಿ ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ



ಮಲ್ಲುಂಡಿ: ನಂಜನಗೂಡು ತಾಲೂಕಿನ ಮಲ್ಲುಂಡಿ ಗ್ರಾಮದಲ್ಲಿ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಮುಖಂಡರಾದ ಎಂ.ಹೆಚ್. ಪುಟ್ಟಬುದ್ದಿ, ವಕೀಲ ಶ್ರೀನಿವಾಸ್, ದಡಯ್ಯ, ಗ್ರಾಪಂ ಸದಸ್ಯ ಪಾಪ, ವೆಂಕಟರಾಜು, ಕೇಬಲ್ ಶಿವು,ಶಿವಕುಮಾರ್ ಹಾಗೂ ದರ್ಶನ್ ಧ್ರುವನಾರಾಯಣ್ ಅಭಿಮಾನಿ ಬಳಗದವರು ಹಾಜರಿದ್ದರು

ಶನಿಮಹಾಶಾಂತಿ

ಮೈಸೂರು, ಜು.30– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಆ.1ರಂದು ಕರ್ಕಾಟಕ, ತುಲಾ, ಮಕರ; ಕುಂಭ, ಮೀನ ರಾಶಿಯವರಿಗೆ ವಿಶೇಷ ಸಂಕಲ್ಪದೊಂದಿಗೆ ಶನಿ ಮಹಾ ಶಾಂತಿ ಮಾಡಲಾಗುವುದು. ಇದಲ್ಲದೆ ಬಾದಾ ನಿವಾರಕ ಶ್ರೀ ಸುದರ್ಶನ ಹೋಮ ಮತ್ತು ಆರೋಗ್ಯಕ್ಕಾಗಿ ಮಹಾ ಮೃತ್ಯುಂಜಯ ಹೋಮ, ಶ್ರೀ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಲಾಗಿದೆ. ಪೂಜೆ ಬೆಳಿಗ್ಗೆ 9.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಮಹಾಪೂರ್ಣಾಹುತಿ ಏರ್ಪಡಿಸಲಾಗಿದೆ ಹೆಚ್ಚಿನ ವಿವರಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರು 9845183399 9342183392 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಮೈಸೂರು, ಜು.30– ಭಾರತ ಸರ್ಕಾರವು ರಾಷ್ಟ್ರೀಯ ಏಕತಾ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಕೊಡುಗೆ ನೀಡಿರುವ ನಾಗರಿಕರಿಗೆ ಸರ್ದಾರ್ ಪಟೇಲ್ ಏಕತಾ ಪ್ರಶಸ್ತಿಯನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.31 ಕೊನೆಯ ದಿನಾಂಕವಾಗಿದ್ದು www.awards.gov.in ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯಗಳು



ಶುಭಕೋರುವ:
ಮಂಜುಗೌಡ, ಚಂದುಗೌಡ, ಮಹೇಶಗೌಡ, ಹರೀಶ್ ಸ್ನೇಹ ಗೆಳೆಯರ ಬಳಗ ಹಾಗೂ ಕುಟುಂಬವರ್ಗದವರು .ಕುಂಬಾರಕೊಪ್ಪಲು, ಮೈಸೂರು
9901967241
8618210275

ವಿಜಯ ರವಿಗೌಡ

11ನೇ ವರ್ಷದ ಸವಿನೆನಪು



H.B ಶಿವರಾಂ

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ನಿಮ್ಮ ಧರ್ಮಪತ್ನಿ ಎ.ಯೋಗೇಶ್ವರಿ, ಅತ್ತೆ–ಗಿರಿಜಮ್ಮ ಮತ್ತು ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ 21.07.2023 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 31.07.2023ನೇ ಸೋಮವಾರ ಮಧ್ಯಾಹ್ನ 2.30 ಗಂಟೆಗೆ ಮೃತರ ಸ್ವಗೃಹ ಮೈಸೂರು ಜಿಲ್ಲೆ, ಗಾಯತ್ರಿಪುರಂ, 2ನೇ ಹಂತ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ
ದುಃಖತಪ್ತರು: ತಂದೆ, ತಾಯಿ, ತಮ್ಮ, ಸಹೋದರಿಯರು, ಸಹೋದರರು, ಶ್ವೇತಾ ರೇವಣ್ಣಸ್ವಾಮಿ

ಶ್ರೀ ರೇವಣ್ಣಸ್ವಾಮಿ.ಬಿ ಎಂ.ಕಾಂ





